
# ವಿದ್ವಾನ್. ಶ್ರೀ ನಡಹಳ್ಳಿ ರಂಗನಾಥಶರ್ಮಾ

**1915 - 2014**



ಶ್ರೀ ರಂಗನಾಥಶರ್ಮಾ ಶತಶಾರದೋತ್ಸವ ಸಮಿತಿ, ಬೆಂಗಳೂರು

# ವಿದ್ವಾನ್. ಶ್ರೀ ನಡಹಳ್ಳಿ ರಂಗನಾಥಶರ್ಮಾ

ವಿದ್ವಾನ್. ಶ್ರೀ ಅನಂತಶರ್ಮಾ ಭುವನಗಿರಿ

ಶ್ರೀ ರಂಗನಾಥಶರ್ಮಾ ಶತಶಾರದೋತ್ಸವ ಸಮಿತಿ,

ಬೆಂಗಳೂರು

**ವಿದ್ವಾನ್. ಶ್ರೀ ನಡಹಳ್ಳಿ ರಂಗನಾಥಶರ್ಮಾ – ಸಂಕ್ಷಿಪ್ತ ಜೀವನ ಚರಿತ್ರೆ ಹಾಗೂ ಮಕ್ಕಳು, ಶಿಷ್ಯರು ಹಾಗೂ ಆಪ್ತರು ಕಂಡಂತೆ ಶ್ರೀ ಶರ್ಮರು.**


ಮುದ್ರಣ : 22–2–2014

ಪ್ರತಿಗಳು : 1000



© ಹಕ್ಕುಗಳನ್ನು ಕಾದಿರಿಸಲಾಗಿದೆ



ಪುಟಗಳು : vi + 50

ಬೆಲೆ : ರೂ. 30/-

ಪ್ರಕಾಶಕರು : ಶ್ರೀ ರಂಗನಾಥಶರ್ಮಾ ಶತಶಾರದೋತ್ಸವ ಸಮಿತಿ, ಬೆಂಗಳೂರು

ಪುಸ್ತಕ ದೊರೆಯುವ ಸ್ಥಳ : ಶ್ರೀರಾಮ ಶಂಕರ ಪ್ರಸಾದ,
ನಂ. 537, 22ನೇ ಅಡ್ಡರಸ್ತೆ,
ಅರಬಿಂದೋ ಶಾಲೆಯ ಎದುರು,
ಬನಶಂಕರಿ 2ನೇ ಹಂತ, ಬೆಂಗಳೂರು–560 070
ದೂರವಾಣಿ : 080–26714992, 9742387488

ಮುದ್ರಕರು : ಸ್ಕ್ಯಾನ್ ಪ್ರಿಂಟ್, ಬನಶಂಕರಿ 2ನೇ ಹಂತ,
ಬೆಂಗಳೂರು–70

## ಅರಿಕೆ

ಶ್ರೇಷ್ಠ ವಿದ್ವಾಂಸರಾದ ಶ್ರೀಮಾನ್ ನಡಹಳ್ಳಿ ರಂಗನಾಥಶರ್ಮಾರವರು ತಮ್ಮ ಜೀವನದ 99 ವರ್ಷಗಳನ್ನು ಕಳೆದು ನೂರನೆಯ ಸಂವತ್ಸರಕ್ಕೆ ಕಾಲಿಡುವ ಸಂತೋಷದ ಸಮಯದಲ್ಲಿ ಅವರ ಶತಮಾನೋತ್ಸವವನ್ನು ಆಚರಿಸಬೇಕೆಂದು ಶರ್ಮರ ಶಿಷ್ಯರು ಅಭಿಮಾನಿಗಳು ಸೇರಿ ನಿಶ್ಚಯಿಸಿದರು. 'ವಿದ್ವಾನ್. ಎನ್. ರಂಗನಾಥಶರ್ಮಾ ಶತಶಾರದೋತ್ಸವ ಸಮಿತಿ' ಎಂಬ ಹೆಸರಿನಲ್ಲಿ ಸಮಿತಿಯೊಂದನ್ನು ರಚಿಸಿ ಕರ್ಣಾಟಕದ ಹಲವು ಕಡೆಗಳಲ್ಲಿ ಈ ಉತ್ಸವವನ್ನು ಆಚರಿಸಲು ತೀರ್ಮಾನಿಸಲಾಯಿತು. ಆ ಸಂದರ್ಭದಲ್ಲಿ ಜನತೆಗೆ ನೀಡಲು ಶರ್ಮರನ್ನು ಕುರಿತಾದ ಚಿಕ್ಕ ಗ್ರಂಥವೊಂದನ್ನು ಅತ್ಯಲ್ಪ ಅವಧಿಯಲ್ಲಿ ರಚಿಸಿಕೊಡುವ ಕಾರ್ಯವನ್ನು ಸಮಿತಿಯವರು ನನಗೆ ವಹಿಸಿದರು. ಶರ್ಮರ ಮೇಲೆ ನನಗಿರುವ ಪ್ರೀತಿ ಗೌರವಗಳಿಂದಾಗಿ ನಾನಿದನ್ನು ಸಂತೋಷವಾಗಿ ಒಪ್ಪಿಕೊಂಡೆ. ಈ ಮೊದಲೇ (1990ರಲ್ಲಿ) ನಾನು ಕರ್ಣಾಟಕ ಸಂಸ್ಕೃತ ಪರಿಷತ್ತಿನಿಂದ ಸಂಸ್ಕೃತೋತ್ಸವ ಸ್ಮರಣ ಸಂಚಿಕೆಯಲ್ಲಿ ಶರ್ಮರನ್ನು ಕುರಿತಾದ ಪರಿಚಯಾತ್ಮಕ ಲೇಖನವೊಂದನ್ನು ಬರೆದಿದ್ದೆ. ಅಲ್ಲಿ ಬರೆದದ್ದಕ್ಕಿಂತ ಹೆಚ್ಚಿನ ವಿವರಗಳು ನನ್ನಲ್ಲಿರಲಿಲ್ಲ. ಆದರೆ ನನ್ನ ಲೇಖನ ಪ್ರಕಟವಾದ ನಾಲ್ಕು ವರ್ಷಗಳ ಅನಂತರ ಅಭಿಮಾನಿಗಳು ಶರ್ಮರಿಗೆ ಅರ್ಪಿಸಿದ 'ರಂಗಾಭಿನಂದನ'ವೆಂಬ ಗ್ರಂಥದಲ್ಲಿ ಅವರ ಬಗ್ಗೆ ಕೆಲವು ಲೇಖನಗಳಿದ್ದವು. ತೀರ ಇತ್ತೀಚೆಗೆ ಶತಾವಧಾನಿ ರಾ. ಗಣೇಶರವರು 'ವಾಣೀವಾಹನ' ಎಂಬ ಹೆಸರಿನಲ್ಲಿ ಶರ್ಮರ ಜೀವನ ಮತ್ತು ಕೃತಿಗಳ ಬಗ್ಗೆ ಸಾಕಷ್ಟು ಪರಿಪೂರ್ಣವೆನ್ನುವಂಥ ಗ್ರಂಥವೊಂದನ್ನು ರಚಿಸಿದ್ದಾರೆ. ಈ ಎಲ್ಲ ಕಡೆಗಳಿಂದಲೂ ವಿವರಗಳನ್ನು ಸಂಗ್ರಹಿಸಿ ಈ ಕಿರುಹೊತ್ತಿಗೆಯನ್ನು ರಚಿಸಿದ್ದೇನೆ. ಇಪ್ಪತ್ತೈದು ವರ್ಷಗಳ ಒಡನಾಟದಲ್ಲಿ ಶರ್ಮರೊಡನೆ ನನಗಾದ ಅನುಭವದ ಕೆಲವು ತುಣುಕುಗಳನ್ನೂ ಇಲ್ಲಿ ಸೇರಿಸಿದ್ದೇನೆ. ಇಲ್ಲಿರುವ ಕೆಲವು ವಿಷಯಗಳಿಗಾಗಿ, ಅಷ್ಟೇ ಅಲ್ಲ ಕೆಲವು ವಾಕ್ಯಪುಂಜಗಳಿಗಾಗಿ ಕೂಡ ವಿದ್ವಾನ್. ಜಿ. ಮಹಾಬಲೇಶ್ವರ ಭಟ್ಟರು, ಡಾ. ಡಿ.ವಿ. ರಾವ್ ದೊಡ್ಡೇರಿ, ಹರಿಹರಪುರ ಬಿ. ಸುಬ್ರಹ್ಮಣ್ಯ ಮತ್ತು ವಿಶೇಷವಾಗಿ ಶತಾವಧಾನಿ ಗಣೇಶ ಇವರ ಋಣವನ್ನು ಸ್ಮರಿಸುತ್ತೇನೆ. ನನ್ನಿಂದ ಇದನ್ನು ಬರೆಯಿಸಿ ಪ್ರಕಟಿಸುತ್ತಿರುವ 'ವಿದ್ವಾನ್. ಎನ್. ರಂಗನಾಥಶರ್ಮಾ ಶತಶಾರದೋತ್ಸವ ಸಮಿತಿ'ಯ ಸದಸ್ಯರಿಗೂ ನಾನು ಆಭಾರಿ.

ಅತ್ಯಂತ ತ್ವರಿತವಾಗಿ ಇದನ್ನು ಮುದ್ರಿಸಿ ಪ್ರಕಟಿಸಬೇಕೆಂದಿದ್ದರೂ ನಮ್ಮ ದುರ್ದೈವ! ಶರ್ಮರು ಬದುಕಿರುವಾಗ ಇದನ್ನು ಹೊರತರಲಾಗಲೇ ಇಲ್ಲ. ದಿ. 25–1–14ರಂದು ಶರ್ಮರು ತಮ್ಮ ಇಹಲೋಕದ ವ್ಯಾಪಾರವನ್ನು ಪೂರೈಸಿದರು. ಈಗ ಸ್ಮರಣಾಂಜಲಿಯಾಗಿ ಈ ಗ್ರಂಥವನ್ನು ಅವರಿಗೆ ಅರ್ಪಿಸಲಾಗುತ್ತಿದೆ. ಇದು ಶ್ರೀಯುತರು ಬದುಕಿರುವಾಗ ಬರೆದ ಗ್ರಂಥವಾದುದರಿಂದ ಕೆಲವು ಘಟನೆಗಳನ್ನು ವರ್ತಮಾನದಲ್ಲಿ ನಡೆಯುತ್ತಿರುವಂತೆ ಬರೆಯಲಾಗಿದೆ. ಓದುಗರು ದಯವಿಟ್ಟು ಇದನ್ನು ಗಮನಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಬೆಂಗಳೂರು — ಅನಂತಶರ್ಮಾ ಭುವನಗಿರಿ

22–2–2014

# ಪ್ರಕಾಶಕರ ನುಡಿ

ಸಂಸ್ಕೃತ ಹಾಗೂ ಕನ್ನಡ ಭಾಷಾಸಾಹಿತ್ಯಗಳಲ್ಲಿ ಶ್ರೇಷ್ಠ ವಿದ್ವಾಂಸರಾಗಿರುವ ಡಾ. ರಂಗನಾಥಶರ್ಮಾ ಅವರು ಸಾರಸ್ವತ ಕ್ಷೇತ್ರದಲ್ಲಿ ಮಾಡಿರುವ ಕಾರ್ಯ ಅಮೋಘವಾದುದು. ಅವರ ವಿನಯ, ಸೌಜನ್ಯ, ಸಹೃದಯತೆಗಳು ಅವರ ಅಪಾರ ಪಾಂಡಿತ್ಯಕ್ಕೆ ಭೂಷಣಗಳಾಗಿವೆ.

ಬೆಂಗಳೂರು ಮತ್ತು ಮೈಸೂರಿನ ಸಂಸ್ಕೃತ ಕಾಲೇಜುಗಳಲ್ಲಿ ವ್ಯಾಕರಣಶಾಸ್ತ್ರದ ಪ್ರಾಧ್ಯಾಪಕರಾಗಿ ಅವರು ಅನೇಕ ಮಂದಿ ಶಿಷ್ಯರನ್ನು ತಯಾರು ಮಾಡಿ ಅವರ ಅಪಾರ ಗೌರವಾದರಗಳಿಗೆ ಪಾತ್ರರಾಗಿದ್ದಾರೆ. ಸುಮಾರು ಒಂದು ಶತಮಾನಕ್ಕೂ ಹಿಂದೆ ಪ್ರಕಟವಾಗಿದ್ದು ದುರ್ಲಭವಾಗಿದ್ದ **ಶ್ರೀ ಚಾಮರಾಜೋಕ್ತಿ ವಿಲಾಸ**ವೆಂಬ ಕನ್ನಡ ರಾಮಾಯಣವನ್ನು ಪರಿಷ್ಕರಿಸುವುದರಲ್ಲಿ ಅವರು ಬಹುಮುಖ್ಯ ಪಾತ್ರವನ್ನು ವಹಿಸಿದರು. **ಶ್ರೀಮದ್ವಾಲ್ಮೀಕಿ ರಾಮಾಯಣ**ದ ಅವರ ಕನ್ನಡ ಅನುವಾದ ಬಹು ಜನಾದರಣೀಯವಾಗಿದೆ. **ಲೌಕಿಕ ನ್ಯಾಯಗಳು, ಹೊಸಗನ್ನಡ ವ್ಯಾಕರಣ, ಸೂಕ್ತಿ–ವ್ಯಾಪ್ತಿ** ಮೊದಲಾದ ಗ್ರಂಥಗಳನ್ನು ಕನ್ನಡದಲ್ಲಿ ರಚಿಸಿರುವ ಡಾ. ರಂಗನಾಥಶರ್ಮಾ ಅವರು **ವಿಷ್ಣುಪುರಾಣ, ಶ್ರೀಮದ್ಭಾಗವತ**ದ ಕೊನೆಯ ಮೂರು ಸ್ಕಂದಗಳನ್ನು ಸೊಗಸಾಗಿ ಅನುವಾದ ಮಾಡಿ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸಿದ್ದಾರೆ; **ಅಮರಕೋಶ**ವನ್ನು ಸಂಪಾದಿಸಿ ಕನ್ನಡದಲ್ಲಿ ತಂದಿದ್ದಾರೆ; ಸಂಸ್ಕೃತದಲ್ಲಿ **ಬಾಹುಬಲಿ ವಿಜಯಂ, ಏಕಚಕ್ರಮ್** ಎಂಬ ನಾಟಕಗಳನ್ನು ಬರೆದಿದ್ದಾರೆ; **ಗೊಮ್ಮಟೇಶ್ವರ ಸುಪ್ರಭಾತ, ಸುಬ್ರಹ್ಮಣ್ಯ ಸುಪ್ರಭಾತ, ರಾಮಚಂದ್ರ ಸುಪ್ರಭಾತ** ಮುಂತಾದ ಕೃತಿಗಳನ್ನು ರಚಿಸಿ ವಿದ್ವಜ್ಜನರಿಗೆ ಆದರಣೀಯರಾಗಿದ್ದಾರೆ.

ಅನೇಕ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿರುವ, ಪ್ರಕಟ–ವಾಗುತ್ತಿರುವ ಅವರ ಲೇಖನಗಳು ಅವರ ಆರೋಗ್ಯಕರ ಅಧ್ಯಾಪನಾಕ್ರಮ ಮತ್ತು ಚಿಂತನಶೀಲ ಹಾಗೂ ಮಾರ್ಗದರ್ಶಕ ದೃಷ್ಟಿಯನ್ನು ಪ್ರತಿಬಿಂಬಿಸುತ್ತವೆ. ವ್ಯಾಕರಣ, ವೇದಾಂತ, ಕಾವ್ಯಮೀಮಾಂಸೆ ಮೊದಲಾದ ಶಾಸ್ತ್ರಗಳಲ್ಲಿ ಅವರಿಗಿರುವ ನಿಷ್ಕೃಷ್ಟ ಹಾಗೂ ವಿಶಾಲವ್ಯಾಪ್ತಿಯ ಜ್ಞಾನ, ಸಾಹಿತ್ಯದಲ್ಲಿರುವ ಸಹೃದಯತೆ ಅವರ ಉಪನ್ಯಾಸಗಳಲ್ಲಿ ಪ್ರತಿಬಿಂಬಿತವಾಗಿವೆ. ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಪ್ರಾಚೀನ ಕನ್ನಡ ಕಾವ್ಯಗಳನ್ನು ಹೊಸಗನ್ನಡಕ್ಕೆ

ತರುವ ಯೋಜನೆಯ ನಿರ್ದೇಶಕರಾಗಿದ್ದು ಆ ಗ್ರಂಥಗಳು ಇಂದಿನವರಿಗೆ ಎಟುಕುವಂತೆ ಮಾಡಿದ್ದಾರೆ. ಉತ್ಥಾನ ಪತ್ರಿಕೆಯಲ್ಲಿ **'ಸೂಕ್ತಿ-ವ್ಯಾಪ್ತಿ'** ಎಂಬ ಶೀರ್ಷಿಕೆಯಲ್ಲಿ ಸಮಕಾಲೀನ ವಿಷಯಗಳನ್ನು ಆರ್ಷೇಯ ಮತ್ತು ಮಹಾಕವಿಗಳ ಸೂಕ್ತಿಗಳ ಬೆಳಕಿನಲ್ಲಿ ಸಮೀಕ್ಷಿಸಿದ್ದಾರೆ. ಬಹುಶ್ರುತ ವಿದ್ವಾಂಸರಾದ ಡಾ. ರಂಗನಾಥಶರ್ಮಾ ಅವರು ಹೀಗೆ ಎಪ್ಪತ್ತಕ್ಕೂ ಮೀರಿದ ಕೃತಿಗಳನ್ನು ರಚಿಸಿ ಸಂಸ್ಕೃತ ಮತ್ತು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಧೀಮಂತರು.

1974ರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇವರನ್ನು ಗೌರವಿಸಿವೆ. 1984ರಲ್ಲಿ ಅವರು ಅಖಿಲ ಕರ್ನಾಟಕ ಸಂಸ್ಕೃತ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಭಾರತೀಯ ವಿದ್ಯಾಭವನ, ಅಧ್ಯಾತ್ಮ ಪ್ರಕಾಶ ಕಾರ್ಯಾಲಯ, ಶ್ರೀ ರಾಮಕೃಷ್ಣಾಶ್ರಮ ಮುಂತಾದ ಸಂಸ್ಥೆಗಳು ಅವರ ವಿದ್ವತ್ತಿನ ಲಾಭ ಪಡೆಯುತ್ತಿವೆ. ತಿರುಪತಿಯ ಸಂಸ್ಕೃತ ವಿಶ್ವವಿದ್ಯಾನಿಲಯವಾಗಿರುವ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠವು ಡಾ. ಶರ್ಮಾ ಅವರ ಅಪಾರ ವೈದುಷ್ಯ ಮತ್ತು ವಿದ್ಯಾಸೇವೆ ಇವುಗಳನ್ನು ಗಮನಿಸಿ ಅವರಿಗೆ ರಾಷ್ಟ್ರಮಟ್ಟದ **ಮಹಾಮಹೋಪಾಧ್ಯಾಯ** ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಇಂತಹ ಮಹನೀಯರ ಜೀವನ ಚರಿತೆಯನ್ನು ಎಲ್ಲರಿಗೂ ತಿಳಿಯುವ ರೀತಿಯಲ್ಲಿ ಬರೆದುಕೊಡಬೇಕೆಂದು ವಿದ್ವಾನ್. ಶ್ರೀ ಅನಂತಶರ್ಮಾ ಭುವನಗಿರಿ ಇವರನ್ನು ಶತಶಾರದೋತ್ಸವ ಸಮಿತಿಯು ಪ್ರಾರ್ಥಿಸಿಕೊಂಡಿತು. ಸಮಿತಿಯ ಪ್ರಾರ್ಥನೆಯನ್ನು ಮನ್ನಿಸಿ ಇವರು ತಮ್ಮ ಹಲವಾರು ಕಾರ್ಯಗಳ ನಡುವೆ ಶ್ರೀ ರಂಗನಾಥಶರ್ಮರಿಗೆ ಸಂಬಂಧಪಟ್ಟ ವಿಷಯಗಳೆಲ್ಲವನ್ನೂ ಕಲೆಹಾಕಿ ಅತ್ಯಲ್ಪ ಕಾಲದಲ್ಲಿಯೇ ಸರಳವಾಗಿ ಬರೆದುಕೊಟ್ಟಿದ್ದಾರೆ. ಎಲ್ಲರಿಗೂ ಓದಿಸಿಕೊಂಡು ಹೋಗುವ ರೀತಿಯಲ್ಲಿ ಈ ಗ್ರಂಥವನ್ನು ಬರೆದುಕೊಟ್ಟ ಸಂಮಾನ್ಯ ಲೇಖಕರಿಗೆ ಶತಶಾರದೋತ್ಸವ ಸಮಿತಿಯು ಕೃತಜ್ಞವಾಗಿದೆ. ಇದೇ ಗ್ರಂಥದಲ್ಲಿ ವಿದ್ವಾನ್. ರಂಗನಾಥಶರ್ಮರ ಬಗ್ಗೆ ಅವರ ಪುತ್ರಿ ಶ್ರೀಮತಿ. ಜಯಶ್ರೀ, ಯಲ್ಲಾಪುರದ ವಿದ್ವಾನ್. ಕೃಷ್ಣಶರ್ಮಾ ಹಾಗೂ ವಿದ್ವಾನ್. ಜಿ. ಮಹಾಬಲೇಶ್ವರ ಭಟ್ಟ ಇವರು ಬರೆದ ಲೇಖನಗಳನ್ನು ಸೇರಿಸಿಕೊಳ್ಳಲಾಗಿದೆ. ಈ ಎಲ್ಲ ಲೇಖಕರಿಗೂ ಸಮಿತಿಯು ಕೃತಜ್ಞತೆ ಸಲ್ಲಿಸುತ್ತದೆ.

ಅಕ್ಷರ ಜೋಡಣೆ ಮತ್ತು ಮುದ್ರಣ ಮಾಡಿಕೊಟ್ಟು ಸಹಕರಿಸಿದವರೆಲ್ಲರಿಗೂ ಆ ಹಿರಿಯರ ಆಶೀರ್ವಾದ ಇರಲೆಂದು ಸಮಿತಿಯು ಕೋರುತ್ತದೆ.

ಬೆಂಗಳೂರು — ಶ್ರೀ ರಂಗನಾಥಶರ್ಮಾ ಶತಶಾರದೋತ್ಸವ ಸಮಿತಿ

22-2-2014

# ವಿದ್ವಾನ್. ಶ್ರೀ ನಡಹಳ್ಳಿ ರಂಗನಾಥಶರ್ಮಾ

'ಜೀವೇಮ ಶರದಶ್ಶತಂ' (ನೂರು ವರ್ಷ ಬಾಳೋಣ). ಇದು ವೈದಿಕ ಋಷಿಗಳ ಪ್ರಾರ್ಥನೆಯಷ್ಟೇ ಅಲ್ಲ, ಪ್ರತಿಯೊಬ್ಬ ಮಾನವನ ಸಹಜ ಅಪೇಕ್ಷೆ. ಬಯಕೆ ಎಲ್ಲರದಾದರೂ ಅದನ್ನು ಕೈಗೂಡಿಸಿಕೊಂಡು ಶತಾಯುಷಿ ಎನ್ನಿಸಿಕೊಂಡವರು ಸಾವಿರದಲ್ಲಿ ಒಬ್ಬಿಬ್ಬರು ಮಾತ್ರ. ಹಾಗೆ ಶತಾಯುಷಿಗಳಾದವರಲ್ಲಿಯೂ ಭಗವಂತನು ತಮಗಿತ್ತ ಅವಕಾಶ, ಅನುಕೂಲತೆಗಳನ್ನು ಸದುಪಯೋಗಪಡಿಸಿಕೊಂಡು ಮಾನವ ಜನ್ಮವನ್ನು ಸಾರ್ಥಕಪಡಿಸಿಕೊಂಡವರು ಅಂಗುಲಿಗಣನೀಯರು. ಜ್ಞಾನವಿಜ್ಞಾನತೃಪ್ತಾತ್ಮರಾಗಿ ತಾವು ಕಂಡುಂಡ ಬೆಳಕನ್ನು ಲೋಕಕ್ಕೆ ನೀಡಿದ ಅಂಥ ಮಹನೀಯರ ಪಂಕ್ತಿಯಲ್ಲಿ ಇಂದಿಗೂ ವಿರಾಜಿಸುತ್ತಿರುವವರು ಶ್ರೀಮಾನ್ ನಡಹಳ್ಳಿ ರಂಗನಾಥ ಶರ್ಮರು. ಇಂದು ಅವರು ಪಡೆದ ಪ್ರಸಿದ್ಧಿ, ಅದಕ್ಕೆ ಕಾರಣವಾದ ಸಿದ್ಧಿ, ಆ ಸಿದ್ಧಿಯನ್ನು ಅವರಿಗಿತ್ತ ಅವರ ನಿರಂತರ ಸಾಧನೆ ಇವುಗಳನ್ನು ಮೇಲಕು ಹಾಕಿದರೆ ಅದು ಜನಮಾನಸಕ್ಕೊಂದು ಪಾವನ ಸಂಸ್ಕಾರವನ್ನು ನೀಡೀತು. ಹಿರಿಯರಿಗೆ ಆನಂದವನ್ನೂ, ಕಿರಿಯರಿಗೆ ಮಾರ್ಗದರ್ಶನವನ್ನೂ ನೀಡುವ ಅವರ ಬಾಳದಾರಿಯ ಒಂದು ಕಿರುಪರಿಚಯ ಇದಾಗಿದೆ.

ವಿದ್ವತ್ತೆ, ವಿನಯ, ಸೌಶೀಲ್ಯ, ಕೂಲಂಕುಷ ವಿಚಾರಶಕ್ತಿ, ಬೋಧನ ಸಾಮರ್ಥ್ಯ, ವಾಕ್ಪಟುತ್ವ, ಲೇಖನಸಿದ್ಧಿ, ಕಾವ್ಯನಾಟಕಾದಿ ಗ್ರಂಥರಚನಾಕೌಶಲ, ಸತ್ಯನಿಷ್ಠೆ, ಹೊಸಕಾಲದ ವಿಚಾರಧಾರೆಗಳನ್ನು ಥಟ್ಟನೆ ಅರ್ಥಮಾಡಿಕೊಳ್ಳಬಲ್ಲ, ಅದು ಸರಿಯಾಗಿ ಕಂಡರೆ ಕೂಡಲೆ ಒಪ್ಪಿಕೊಳ್ಳುವ ಗುಣ, ಸಿದ್ಧಾಂತದಲ್ಲಿ ವಿರೋಧವಿದ್ದರೂ ಅದನ್ನು ವೈಯಕ್ತಿಕ ವಿಷಯಗಳಿಗೆ ಗಂಟುಹಾಕದೆ ಅಂಥವರೊಡನೆ ಆತ್ಮೀಯವಾಗಿಯೇ ವ್ಯವಹರಿಸುವ ಹೃದಯ ವೈಶಾಲ್ಯ, ಶಿಷ್ಯವಾತ್ಸಲ್ಯ ಇವುಗಳಲ್ಲಿ ಒಂದೊಂದೂ ಮನುಷ್ಯನನ್ನು ಲೋಕದ ಗೌರವಾದರಗಳಿಗೆ ಪಾತ್ರನನ್ನಾಗಿ ಮಾಡಬಲ್ಲವು. ಈ ಎಲ್ಲ ಗುಣಗಳೂ ಒಬ್ಬರಲ್ಲೇ ಇದ್ದರೆ! ಹೌದು ಈ ಎಲ್ಲ ಗುಣಗಳೂ ಸೇರಿ ಮೈದಾಳಿದ ಮೂರ್ತಿಯೇ ಶ್ರೀ ನಡಹಳ್ಳಿ ರಂಗನಾಥ ಶರ್ಮರು.

ಶ್ರೀಯುತ ಶರ್ಮರ ಹುಟ್ಟಿದೂರಾದ ನಡಹಳ್ಳಿ ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನಲ್ಲಿದೆ. ಕೇರಳದಿಂದ ಹಿಡಿದು ಮಹಾರಾಷ್ಟ್ರದ ವರೆಗೆ ಹಬ್ಬಿದ ಸಹ್ಯಾದ್ರಿ ಪರ್ವತ ಶ್ರೇಣಿಯ ಮಧ್ಯದಲ್ಲಿ ಶಿವಮೊಗ್ಗ ಜಿಲ್ಲೆಯಿದೆ. ಇದು ಹಿಂದೊಮ್ಮೆ ಮಲಯ ಪರ್ವತವೆಂದು ಸಂಸ್ಕೃತ ಸಾಹಿತ್ಯದಲ್ಲಿ ಪ್ರಸಿದ್ಧವಾದ ಮಲೆನಾಡಿನ ಭಾಗವೂ ಹೌದು. ಶ್ರೀಗಂಧ ವೃಕ್ಷಗಳಿಗೆ ಈ ಪ್ರದೇಶ ಹೆಸರುವಾಸಿ. ಈ ಗಂಧದ ನಾಡಿನಲ್ಲಿಯೆ ತಮ್ಮ ಜೀವನವನ್ನು ಶಾರದೆಯ ಸೇವೆಗಾಗಿ ಗಂಧದಂತೆ ತೇಯ್ದ ಶ್ರೀ ಶರ್ಮರ ಜನ್ಮ. ತಾಲ್ಲೂಕಾ ಕೇಂದ್ರವಾದ ಸೊರಬದಿಂದ ಸ್ವಲ್ಪವೇ ದೂರದಲ್ಲಿರುವ ಒಂದು ಪುಟ್ಟಹಳ್ಳಿ ಈ ನಡಹಳ್ಳಿ. ಅಲ್ಲಿರುವುದು ಹತ್ತಿಪ್ಪತ್ತು ಹವ್ಯಕ ಬ್ರಾಹ್ಮಣರ ಮನೆಗಳು. ಬಹಳ ಹಿಂದೆ ಈ ಪ್ರದೇಶದಲ್ಲಿ ಹವ್ಯ-ಕವ್ಯಗಳನ್ನು ನೆರವೇರಿಸಬಲ್ಲ ಉತ್ತಮ ಬ್ರಾಹ್ಮಣರಿಲ್ಲದ್ದನ್ನು ಕಂಡು ಕದಂಬರಾಜ ಮಯೂರವರ್ಮನು ಉತ್ತರದ ಅಹಿಚ್ಛತ್ರದಿಂದ ಕೆಲವು ಬ್ರಾಹ್ಮಣ ಕುಟುಂಬಗಳನ್ನು ಇಲ್ಲಿಗೆ ಕರೆತಂದನಂತೆ. ಸಪ್ತರ್ಷಿಗಳ ಹೆಸರಿನ ಏಳು ಗೋತ್ರಗಳನ್ನು ಮಾತ್ರ ಹೊಂದಿರುವ ಇವರು ತಮ್ಮ ವಂಶವನ್ನು ಬೆಳೆಸಿಕೊಂಡು ಉತ್ತರಕನ್ನಡ, ದಕ್ಷಿಣಕನ್ನಡ, ಶಿವಮೊಗ್ಗ ಈ ಜಿಲ್ಲೆಗಳಲ್ಲಿ ಅಲ್ಲಲ್ಲಿ ಚದುರಿದಂತೆ ನೆಲೆಸಿದ್ದಾರೆ. ವೈದಿಕ ಕರ್ಮಗಳಿಗಾಗಿಯೇ ಇವರನ್ನು ಕರೆತಂದಿದ್ದರೂ ಕ್ರಮೇಣ ಇವರೆಲ್ಲ ತಮ್ಮನ್ನು ಕೃಷಿ ಕಾರ್ಯದಲ್ಲಿ ತೊಡಗಿಸಿಕೊಂಡು ಕೃಷಿಕರೂ ಆಗಿಬಿಟ್ಟಿದ್ದಾರೆ. ಆದುದರಿಂದಲೆ ಇವರೆಲ್ಲರೂ ಗ್ರಾಮವಾಸಿಗರು. ಪಟ್ಟಣವೆಂದರೆ ಇವರಿಗೆ ಅಲರ್ಜಿ. 'ಕೆಟ್ಟು ಪಟ್ಟಣ ಸೇರು' ಎಂಬ ನುಡಿ ಇಲ್ಲಿ ಹೆಚ್ಚು ಪ್ರಚಲಿತ. ಇವರು ಅಲ್ಪ ತೃಪ್ತರು. ಹಳ್ಳಿಯಲ್ಲಿಯೇ ಇದ್ದುಕೊಂಡು ಸಂಪ್ರದಾಯದಿಂದ ಬಂದ ಆಚಾರ ವಿಚಾರಗಳನ್ನು ಪಾಲಿಸುತ್ತ, ವೇದ ಸಂಸ್ಕೃತ ಮುಂತಾದ ವಿದ್ಯೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತ ಬಾಳಿದವರು. ಇದು ಶ್ರೀಯುತ ರಂಗನಾಥಶರ್ಮರ ಜನ್ಮಕಾಲದಲ್ಲಿ ಇದ್ದ ಮಲೆನಾಡಿನ ಸ್ಥಿತಿ. ಹಳ್ಳಿಗರಾದುದರಿಂದ ಆರ್ಥಿಕವಾಗಿ ಪೇಟೆಯ ವ್ಯಾಪಾರಿಗಳಿಂದಲೂ ದೈಹಿಕವಾಗಿ ಮಲೇರಿಯಾ ಮುಂತಾದ ರೋಗಗಳಿಂದಲೂ ಶೋಷಣೆಗೆ ಒಳಗಾದರೂ ಹೊರಪ್ರಪಂಚವನ್ನೇ ಅರಿಯದೆ ಅಲ್ಲಿಯೇ ಕಾಲವನ್ನು ನೂಕುತ್ತಿದ್ದರು. ಇತ್ತೀಚೆಗೆ ಈ ಚಿತ್ರಣದಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ಶರ್ಮರ ಸಾಧನೆಯ ಮಾರ್ಗದ ಸ್ಪಷ್ಟ ಚಿತ್ರಣ ಸಿಗಲಿ ಎಂದೇ ಆ ಕಾಲದ ಮಲೆನಾಡನ್ನು ಇಲ್ಲಿ ಬಣ್ಣಿಸಿದ್ದು. ಈಗ ಪರಿಸ್ಥಿತಿ ಸಂಪೂರ್ಣ ಬದಲಾಗಿದೆ. ಹವ್ಯಕರು ಶೈಕ್ಷಣಿಕವಾಗಿ, ಆರ್ಥಿಕವಾಗಿ ಸಾಕಷ್ಟು

ಮುನ್ನಡೆ ಸಾಧಿಸಿದ್ದಾರೆ. ದೇಶ ವಿದೇಶಗಳಲ್ಲಿ ನೆಲೆಸಿದ್ದಾರೆ. ರಂಗನಾಥ ಶರ್ಮರ ಬಾಲ್ಯದಲ್ಲಿ ಮಾತ್ರ ಈಗ ನವು ಊಹಿಸಲೂ ಆಗದ ಸ್ಥಿತಿಯಲ್ಲಿ ಆ ಸಮಾಜವಿತ್ತು.

ನಡಹಳ್ಳಿಯೂ ಇದಕ್ಕಿಂತ ಹೊರತಾಗಿರಲಿಲ್ಲ. ಆದರೆ ಅಲ್ಲಿ ಕೆಲವರು ಸ್ವಪ್ರಯತ್ನದಿಂದ ಕೃಷಿಕಾರ್ಯದಲ್ಲಿ ತೊಡಗಿರುತ್ತಲೆ ವೇದ, ಸಂಸ್ಕೃತಗಳನ್ನು ಅಭ್ಯಾಸ ಮಾಡಿದ್ದರು. ಜೈಮಿನಿ ಭಾರತ, ಕುಮಾರವ್ಯಾಸ ಭಾರತ ಮುಂತಾದವುಗಳನ್ನು ಪ್ರತಿದಿನ ಓದುವ ಅಭ್ಯಾಸವಿಟ್ಟುಕೊಂಡಿದ್ದರು. ರಂಗನಾಥಶರ್ಮರ ತಂದೆ ತಿಮ್ಮಪ್ಪನವರು ಯಜುರ್ವೇದಿಗಳು. ಬೋಧಾಯನ ಸೂತ್ರಕ್ಕೆ ಸೇರಿದವರು. ಇವರ ಗೋತ್ರ ವಿಶ್ವಾಮಿತ್ರ. ತಿಮ್ಮಪ್ಪನವರ ಧರ್ಮಪತ್ನಿ ಶ್ರೀಮತಿ ಜಾನಕಮ್ಮನವರು. ಈ ದಂಪತಿಗಳಿಗೆ ಏಳು ಜನ ಮಕ್ಕಳು. ಇವರಲ್ಲಿ ನಾಲ್ಕನೆಯವರೆ ರಂಗನಾಥ ಶರ್ಮರು. ಶರ್ಮರಿಗೆ ಮೂವರು ಸೋದರರು. ಮೂವರು ಸೋದರಿಯರು. ನಾರಣಪ್ಪ ಅಣ್ಣ, ಕೊಲ್ಲೂರಮ್ಮ ಸತ್ಯಭಾಮೆಯರು ಅಕ್ಕಂದಿರು. ನರಸಿಂಹಯ್ಯ, ಜಯರಾಮರಾವ್ ತಮ್ಮಂದಿರು. ಸೀತಮ್ಮ ತಂಗಿ. ಇಂಥ ತುಂಬು ಸಂಸಾರದ ಮಧ್ಯೆ ಅವರು ಬೆಳೆದರು.

ತಂದೆ ತಿಮ್ಮಪ್ಪನವರು ಸದ್ಗೃಹಸ್ಥರು. ಕೃಷಿಯೇ ಅವರ ಜೀವನಾಧಾರ. ಆಗಿನ ಕಾಲಕ್ಕೆ ತಕ್ಕಂತೆ ದೈನಂದಿನ ಕರ್ಮಾನುಷ್ಠಾನಕ್ಕೆ ಬೇಕಾಗುವಷ್ಟು ವೇದಮಂತ್ರಗಳನ್ನು ಕಲಿತಿದ್ದರು. ಹೆಚ್ಚಿನ ಸಂಸ್ಕೃತವನ್ನು ಬಲ್ಲವರಲ್ಲ. ಆದರೂ ಕನ್ನಡದಲ್ಲಿ ಲಭ್ಯವಿದ್ದ ಪೌರಾಣಿಕ, ಧಾರ್ಮಿಕ ಗ್ರಂಥಗಳನ್ನು ಓದಿಕೊಂಡಿದ್ದರು. ವೇದಾಂತದಲ್ಲಿಯೂ ಸಾಕಷ್ಟು ಪರಿಚಯ ಮಾಡಿಕೊಂಡಿದ್ದರು. ಸಿದ್ಧಾರೂಢರಂತಹ ಸಂತರ ಬಗ್ಗೆ ಇವರಿಗೆ ಗೌರವ. ತಿಮ್ಮಪ್ಪನವರ ತಮ್ಮ ವೆಂಕಪ್ಪನವರು ಆ ಕಾಲದ ಒಬ್ಬ ಅಪ್ರತಿಮ ಪ್ರತಿಭಾವಂತ. ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಅವರು ಕೈಹಾಕದ ವಿಷಯವೇ ಇರಲಿಲ್ಲ. ಸ್ವಂತ ಪರಿಶ್ರಮದಿಂದಲೆ ಸಂಸ್ಕೃತವನ್ನು ಕಲಿತು ಅದರಲ್ಲಿ ಪದ್ಯಗಳನ್ನೂ ರಚಿಸಿದ್ದರು. ಅವರ ಬಗ್ಗೆ ಕೆಲವು ದಂತಕತೆಗಳು ಈಗಲೂ ಪ್ರಚಲಿತವಾಗಿವೆ. ಇಂಥ ಚಿಕ್ಕಪ್ಪನ ಪ್ರಭಾವವೂ ರಂಗನಾಥ ಶರ್ಮರ ಮೇಲೆ ಬಿದ್ದಿರಬೇಕು.

ಆ ಸಮಯಕ್ಕಾಗಲೆ ಇಂಗ್ಲಿಷ್ ಭಾಷೆಗೆ ವಿಶೇಷ ಪ್ರಾಧಾನ್ಯ ಬಂದಿತ್ತು. ಬಾಲಕರ ಗಮನವೆಲ್ಲ ಬಿ.ಎ.; ಎಂ.ಎ. ಮುಂತಾದ ಪದವಿಗಳ ಕಡೆ ಇತ್ತು. ರಂಗನಾಥ ಶರ್ಮರಿಗೂ ಬಾಲ್ಯದಲ್ಲಿ ಅಂಥ ಆಸೆ ಇತ್ತಾದರೂ ಮನೆಯ ಆರ್ಥಿಕ

ಪರಿಸ್ಥಿತಿ ಅದಕ್ಕೆ ಅನುಕೂಲವಾಗಿರಲಿಲ್ಲ. ಸೊರಬದ ಹತ್ತಿರ ಎಲ್ಲೂ ಹೈಸ್ಕೂಲುಗಳಿರಲಿಲ್ಲ. ಪರಸ್ಥಳಕ್ಕೆ ಹೋಗಿ ವ್ಯಾಸಂಗ ಮಾಡಬೇಕೆಂದರೆ ಊಟ ವಸತಿಗಳ ವ್ಯವಸ್ಥೆಯಾಗಬೇಕು. ತಂದೆಯವರದು ಮಧ್ಯಮ ವರ್ಗದ ಕುಟುಂಬ. ಸದಸ್ಯರ ಸಂಖ್ಯೆ ಹೆಚ್ಚು. ವೆಚ್ಚವೂ ಅಧಿಕ. ಆದಾಯ ಪರಿಮಿತ. ಹೀಗಾಗಿ ಶರ್ಮರು ಪ್ರಾಥಮಿಕ ಶಿಕ್ಷಣಕ್ಕೇ ತಮ್ಮ ಆಧುನಿಕ ವಿದ್ಯಾಭ್ಯಾಸವನ್ನು ಮುಗಿಸಬೇಕಾಯಿತು.

ಆಗಿನ ಕಾಲದ ಪದ್ಧತಿಯಂತೆ ಸಂಪ್ರದಾಯಸ್ಥರಾದ ತಿಮ್ಮಪ್ಪನವರು ಹತ್ತನೇ ವಯಸ್ಸಿನೊಳಗೇ ಮಗನಿಗೆ ಉಪನಯನವನ್ನು ಮಾಡಿದರು. ಉಪನೀತನಾದ ವಟುವು ವೇದಾಭ್ಯಾಸವನ್ನು ಮಾಡಬೇಕು. ಆದರೆ ಅದಕ್ಕೂ ಆ ಊರಿನಲ್ಲಿ ಅವಕಾಶವಿರಲಿಲ್ಲ. ಆದ್ದರಿಂದ ಹೇಗೊ ಪ್ರಾಥಮಿಕ ಶಿಕ್ಷಣವನ್ನು ಪೂರೈಸಿದರು. ಅಷ್ಟರಲ್ಲಾಗಲೆ ಶರ್ಮರಿಗೆ ವಿದ್ಯಾಭ್ಯಾಸವನ್ನು ಮುಂದುವರಿಸುವ ತುಡಿತ ಹೆಚ್ಚಾಗುತ್ತಿತ್ತು. ಎಲ್ಲಿ ಉಚಿತವಾಗಿ ಊಟ ವಸತಿಯ ವ್ಯವಸ್ಥೆಯಾದೀತೆಂದು ಕಾಯುತ್ತಿದ್ದರು. ಆಗ ಅವರ ಕಣ್ಣಿಗೆ ಬಿದ್ದದ್ದು ಸದ್ಬೋಧಚಂದ್ರಿಕೆಯೆಂಬ ಮಾಸಪತ್ರಿಕೆ. ಹಾವೇರಿ ಸಮೀಪದ ಅಗಡಿ ಆನಂದ ವನದಿಂದ ಆ ಮಾಸಪತ್ರಿಕೆ ಪ್ರಕಟವಾಗುತ್ತಿತ್ತು. ಅದರಲ್ಲಿದ್ದ ಒಂದು ಜಾಹಿರಾತು ಶರ್ಮರ ಕಣ್ಣನ್ನು ಸೆಳೆಯಿತು. ಆನಂದವನ ಆಶ್ರಮದಲ್ಲಿ ಒಂದು ಪಾಠಶಾಲೆಯಿತ್ತು. ಸಂಸ್ಕೃತ ಮತ್ತು ವೇದವನ್ನು ಅಭ್ಯಾಸ ಮಾಡುವವರಿಗಾಗಿ ಉಚಿತವಾಗಿ ಊಟವಸತಿಗಳ ವ್ಯವಸ್ಥೆಯನ್ನು ಮಾಡುವುದಾಗಿ ಅಲ್ಲಿ ಪ್ರಕಟಿಸಿದ್ದರು. ಶರ್ಮರು ಬಯಸಿದ್ದು ಅಲ್ಲಿತ್ತು. ಕೂಡಲೆ ಆನಂದವನಕ್ಕೆ ಪತ್ರ ಬರೆದು ತಾವು ಬರಬಹುದೇ ಎಂದು ಕೇಳಿದರು. ವ್ಯವಸ್ಥಾಪಕರ ಅನುಮತಿಯ ಪತ್ರವೂ ಬಂತು. ತಂದೆತಾಯಂದಿರ ಒಪ್ಪಿಗೆ ಪಡೆದು ಶರ್ಮರು ಆನಂದವನಕ್ಕೆ ಹೋದರು. ಕವಲು ದಾರಿಯಲ್ಲಿ ನಿಂತಿದ್ದ ರಂಗನಾಥ ಶರ್ಮರನ್ನು ಈ ಅವಕಾಶ ಸಂಸ್ಕೃತ ವಿದ್ಯಾಭ್ಯಾಸದತ್ತ ತಿರುಗಿಸಿತು. ಸಂಸ್ಕೃತ ಕ್ಷೇತ್ರಕ್ಕೆ ದೊಡ್ಡ ಲಾಭವಾಯಿತು.

ಆನಂದವನದಲ್ಲಿ ಅಧ್ಯಯನ ಮಾಡುತ್ತಿದ್ದ ಶರ್ಮರಿಗೆ ಆ ಬಯಲು ಸೀಮೆಯ ಆಹಾರವಾಗಲಿ, ಹವಾಗುಣವಾಗಲಿ ಒಗ್ಗಿ ಬರಲಿಲ್ಲ. ಆರೋಗ್ಯ ಕೈಕೊಟ್ಟಿತು. ಅನಿವಾರ್ಯವಾಗಿ ಮನೆಗೆ ಮರಳಬೇಕಾಯಿತು. ನಿರಾಶರಾದ ಶರ್ಮರು ಕೆಲಕಾಲ ಮನೆಯಲ್ಲೇ ಕಳೆದರು. ಆರೋಗ್ಯ ಸುಧಾರಿಸಿತು. ಆದರೆ ಮುಂದಿನ ವಿದ್ಯಾಭ್ಯಾಸದ ಚಿಂತೆ ಮನಸ್ಸನ್ನು ಪೀಡಿಸತೊಡಗಿತು. ಸದಾ ಮುಂದೆಲ್ಲಿ ಹೋಗಲಿ? ಏನು ಮಾಡಲಿ? ಎಂದೇ ಯೋಚಿಸುತ್ತಿದ್ದರು. ಆಗ ಸಾಗರ ತಾಲ್ಲೂಕಿನ ಕೆಳದಿಯಲ್ಲಿ

ಸಂಸ್ಕೃತ ಪಾಠಶಾಲೆ ನಡೆಯುತ್ತಿತ್ತು. ಹೊಸಳ್ಳಿ–ಮತ್ತೂರಿನ ವೇದಮೂರ್ತಿ ಕೇಶವಶಾಸ್ತ್ರಿ ಮತ್ತು ವೇದಮೂರ್ತಿ ನಾರಾಯಣ ಶಾಸ್ತ್ರಿಗಳು ಅಲ್ಲಿ ಅಧ್ಯಾಪಕರಾಗಿದ್ದರು. ಅಲ್ಲಿ ಸಂಸ್ಕೃತ ಮತ್ತು ವೇದಪಾಠ ಚೆನ್ನಾಗಿ ನಡೆಯುತ್ತಿತ್ತು. ಈ ವಿಷಯ ತಿಳಿದ ರಂಗನಾಥ ಶರ್ಮರು ತಂದೆತಾಯಂದಿರ ಅಪ್ಪಣೆ ಪಡೆದು ಅಲ್ಲಿ ಹೋಗಿ ಸೇರಿದರು. ಅಲ್ಲಿ ಸ್ಥಳೀಯರ ಔದಾರ್ಯದಿಂದ ಊಟವಸತಿ ಸೌಕರ್ಯಗಳು ದೊರೆತವು. ಅಲ್ಲಿ ನಂಜುಂಡ ಜೋಯಿಸ್ ಎನ್ನುವವರ ಮನೆಯಲ್ಲಿ ಶರ್ಮರು ಕೆಲ ಕಾಲ ಊಟ ಮಾಡಿದ್ದರಂತೆ. ಜೋಯ್ಸರ ಮಕ್ಕಳು ಅದನ್ನು ಈಗ ಹೆಮ್ಮೆಯಿಂದ ಸ್ಮರಿಸಿಕೊಳ್ಳುತ್ತಾರೆ.

ಆ ಸಮಯದಲ್ಲಿ ನಿಮ್ಮ ಭಾವೀ ಜೀವನ ಮತ್ತು ವಿದ್ಯಾಭ್ಯಾಸದ ಬಗ್ಗೆ ಯೋಜನೆಯನೇನಾದರೂ ಹಾಕಿಕೊಂಡಿದ್ದೀರಾ? ಎಂಬ ಪ್ರಶ್ನೆಗೆ ಅವರು ಹೇಳುತ್ತಾರೆ –"ಭವಿಷ್ಯ ಜೀವನದ ಬಗ್ಗೆ ಚಿಂತಿಸುವಷ್ಟು ವಯಸ್ಸಾಗಲಿ ತಿಳುವಳಿಕೆಯಾಗಲಿ ಆಗ ನನಗೆ ಇರಲಿಲ್ಲ. ಪ್ರಸ್ತುತ ಅಧ್ಯಯನ ಕಡೆ ಮಾತ್ರ ನನ್ನ ಗಮನವಿತ್ತು. ಅನಂತರ ಸಂಸ್ಕೃತದಲ್ಲಿ ಪ್ರೌಢಾಧ್ಯಯನ ಮಾಡುವಾಗ ಅದರ ಆಲೋಚನೆ ಬಂದದ್ದುಂಟು. ಇಂಗ್ಲೀಷ್ ಕಲಿತು ಪದವಿ ಸಂಪಾದಿಸಿದರೂ ಕೆಲಸವಿಲ್ಲದೆ ಅಲೆಯುತ್ತಿರುವುದನ್ನು ಕಂಡಿದ್ದೆ. ಹೇಗೋ ಜೀವನ ನಡೆಯುವುದೆಂಬ ನಂಬಿಕೆ ರಕ್ಷಾಕವಚವಾಯಿತು. ಮಹತ್ತರವಾದ ಆಸೆಯನ್ನೇನೂ ನಾನು ಇಟ್ಟುಕೊಂಡಿರಲಿಲ್ಲ." ಅಲ್ಲಿಯ ತಮ್ಮ ವಿದ್ಯಾಭ್ಯಾಸವನ್ನು ಕುರಿತು ಶರ್ಮರು ಹೀಗೆ ಹೇಳುತ್ತಾರೆ–"ಆ ಪಾಠಶಾಲೆಯಲ್ಲಿ ಮೂರು ವರ್ಷಗಳ ಕಾಲ ನನ್ನ ವ್ಯಾಸಂಗ ನಡೆಯಿತು. ನನ್ನ ಸಂಸ್ಕೃತಾಭ್ಯಾಸ ನಡೆದದ್ದು ಇಲ್ಲಿಯೇ ಎನ್ನುವುದು ಸೂಕ್ತ. ಇಬ್ಬರು ಶಾಸ್ತ್ರಿಗಳೂ ಚೆನ್ನಾಗಿ ಆಸಕ್ತಿಯಿಂದ ಪಾಠ ಹೇಳುತ್ತಿದ್ದರು. ನನ್ನ ಮೇಲೆ ಅವರಿಗೆ ವಿಶೇಷ ವಾತ್ಸಲ್ಯವಿತ್ತು. ಮೈಸೂರು ಸರ್ಕಾರವು ನಡೆಸುತ್ತಿದ್ದ ಸಂಸ್ಕೃತ ಪರೀಕ್ಷೆಗಳಲ್ಲಿ ಪ್ರಥಮ ಪರೀಕ್ಷೆಗೆ ಕುಳಿತೆ. ಪರೀಕ್ಷಾಕೇಂದ್ರ ಸಾಗರದಲ್ಲಿತ್ತು. ಪರೀಕ್ಷೆಗೆ ಕುಳಿತ ಆರು ಜನರಲ್ಲಿ ನಾನೊಬ್ಬನೇ ಉತ್ತೀರ್ಣನಾದವನು. ಇದರಿಂದ ಅಧ್ಯಾಪಕ ಶಾಸ್ತ್ರಿಗಳಿಗೆ ನನ್ನಲ್ಲಿ ಅನುಗ್ರಹ ಬುದ್ಧಿ ಇನ್ನೂ ಅಧಿಕವಾಯಿತು. ನನ್ನನ್ನು ಕಾವ್ಯ ಪರೀಕ್ಷೆಗೆ ಕಳುಹಿಸಲು ನಾರಾಯಣ ಶಾಸ್ತ್ರಿಗಳು ಪ್ರತ್ಯೇಕವಾಗಿ ಪರೀಕ್ಷಾ ಸಿದ್ಧತೆಗಾಗಿ ಪಾಠ ಹೇಳುತ್ತಿದ್ದರು. ಬೆಂಗಳೂರಲ್ಲಿ ಪರೀಕ್ಷಾಕೇಂದ್ರ. ಪರೀಕ್ಷೆಗೆ ಹೋದೆ. ಬೆಂಗಳೂರಿಗೆ ಆಗಲೇ ಪ್ರಥಮ ಪ್ರವೇಶ. ಕಾವ್ಯ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣನಾದೆ. ವ್ಯಾಕರಣದಲ್ಲಿ

ನಾನೇ ಎಲ್ಲರಿಗಿಂತ ಹೆಚ್ಚು ಅಂಕಗಳನ್ನು ಗಳಿಸಿದ್ದೆ. ಅಧ್ಯಾಪಕರಾದ ನಾರಾಯಣ ಶಾಸ್ತ್ರಿಗಳು ತುಂಬ ಸಂತೋಷಪಟ್ಟರು. ಮುಂದೆ ಪ್ರೌಢವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಬಂದೆ.''

ತಮ್ಮ ಗುರುದ್ವಯರನ್ನು ರಂಗನಾಥ ಶರ್ಮರು ಯಾವಾಗಲೂ ಸ್ಮರಿಸಿಕೊಳ್ಳುತ್ತಾರೆ. "ನನ್ನ ಸಾಧನೆ, ಶ್ರೇಯಸ್ಸು ಏನಿದ್ದರೂ ಅದಕ್ಕೆ ಮೂಲ ಕಾರಣರು ವೇ|| ನಾರಾಯಣ ಶಾಸ್ತ್ರಿಗಳು ಮತ್ತು ವೇ|| ಕೇಶವ ಶಾಸ್ತ್ರಿಗಳು'' ಎನ್ನುತ್ತಾರೆ. ಅವರು ಹೇಳಿದ್ದು ಬಾಲ್ಯ ಪಾಠವೇ ಆಗಿದ್ದರೂ ಶರ್ಮರ ಭವಿಷ್ಯಕ್ಕೆ ಭದ್ರ ತಳಹದಿಯನ್ನು ಹಾಕಿ ಪ್ರೋತ್ಸಾಹಿಸಿದ ಪುಣ್ಯಾತ್ಮರು ಅವರು. ಇಲ್ಲಿಯವರೆಗೆ ಕೇವಲ ರಂಗನಾಥ ಎಂದಿದ್ದ ಅವರ ಹೆಸರು ಈಗ ರಂಗನಾಥ ಶರ್ಮಾ ಎಂದಾಯಿತು. ಇದು ಕೆಳದಿ ಪಾಠಶಾಲೆಯಲ್ಲಿ ಅಧ್ಯಾಪಕರಾಗಿದ್ದ ನಾರಾಯಣ ಶಾಸ್ತ್ರಿಗಳ ಸೂಚನೆಯ ಫಲ.

ಕೆಳದಿಯಲ್ಲಿ ಅವಕಾಶವಿದ್ದಷ್ಟು ವಿದ್ಯೆಯನ್ನು ಗಳಿಸಿದ ಅನಂತರ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಶರ್ಮರು ಬೆಂಗಳೂರಿನ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜನ್ನು ಸೇರಿದರು. ಆಗ ಅವರಿಗೆ ಯೌವನದಲ್ಲಿ ಸಹಜವಾಗಿ ಮೂಡಿಬರುವ ಮನೋಧಾರ್ಢ್ಯ, ಧೈರ್ಯ-ಸ್ಥೈರ್ಯಗಳಲ್ಲದೆ ಬೇರೇನೂ ಇರಲಿಲ್ಲ. ಊಟ, ವಸತಿಗಾಗಿ ಹಣ ಕೊಟ್ಟು ಅಭ್ಯಾಸ ಮಾಡುವ ಅನುಕೂಲವಿರಲಿಲ್ಲ. ಆಗೆಲ್ಲ ಅವರ ಕೈಹಿಡಿದು ನಡೆಸಿದ್ದು ಅವರ ಅಚಲವಾದ ಆತ್ಮವಿಶ್ವಾಸವೊಂದೆ. ಬೆಂಗಳೂರಿಗೆ ಬಂದ ಹೊಸತರಲ್ಲಿ ಎರಡು ವರ್ಷಗಳ ಕಾಲ ಅವರಿವರ ಮನೆಗಳಲ್ಲಿ ವಾರಾನ್ನ ಭಿಕ್ಷಾನ್ನ ಮಾಡಿಕೊಂಡು ಜೀವಿಸಿದ್ದರು. ವ್ಯಾಸ ಮಂದಿರದಲ್ಲಿ ವಾಸ. ಆ ಸಮಯದಲ್ಲಿ ಅವರ ಮುಖ-ಮೈಗಳಲ್ಲಿ ಎಕ್ಸಿಮಾ ರೋಗ ಕಾಣಿಸಿಕೊಂಡಿತು. ಕ್ರಮೇಣ ಅದು ನಖಶಿಖಾಂತವಾಗಿ ಕೆನ್ನೆ, ಕಿವಿ, ಕಣ್ಣು ರೆಪ್ಪೆಗಳಿಗೂ ವ್ಯಾಪಿಸಿತು. ಈ ಸ್ಥಿತಿಯಲ್ಲಿ ಕಾಲೇಜಿಗಾಗಲಿ, ವಾರಾನ್ನದ ಮನೆಗಳಿಗಾಗಲೀ ಹೋಗುವುದು ಹೇಗೆ? ಇವರನ್ನು ನೋಡಿದೊಡನೆಯೇ ಜನರು ಮುಖದಲ್ಲಿ ಅಸಹ್ಯಭಾವನೆಯನ್ನು ತಂದುಕೊಂಡು ದೂರಸರಿಯುತ್ತಿದ್ದರು. ಇವರು ಅದನ್ನು ಸಹಿಸಿಕೊಂಡರು. ಸ್ವತಃ ಅಡುಗೆ ಮಾಡಿಕೊಂಡು ಊಟ ಮಾಡಲು ಪ್ರಾರಂಭಿಸಿದರು. ಅದು ಹೆಸರಿಗೆ ಮಾತ್ರ ಊಟ. ಅಡುಗೆ ಎಂದರೆ ಏನೆಂದು ಗೊತ್ತಿಲ್ಲದ ಹುಡುಗನ ಅಡುಗೆ. ಉಪ್ಪು, ಹುಳಿ, ಖಾರ, ಮಸಾಲೆ ಏನೂ ಇಲ್ಲದ ಕೇವಲ ಸಪ್ಪೆ ಅನ್ನವನ್ನೇ ಮೂರು

ವರ್ಷಗಳ ಕಾಲ ಉಂಡರು. ಅದೂ ಹೇಗೆ? ಊಟಕ್ಕೆ ತಟ್ಟೆ ಇರಲಿಲ್ಲ. ಎಲೆಯನ್ನು ಕೊಳ್ಳುವುದಕ್ಕೆ ಕಾಸಿಲ್ಲ. ಬರೀ ನೆಲದ ಮೇಲೆಯೆ ಅನ್ನ ಹಾಕಿಕೊಂಡು ಉಂಡರು. ಕೈಯಲ್ಲಿ ಇಕ್ಕಳ ಹಿಡಿದು ಅನ್ನ ಮಾಡಿಕೊಂಡು ಚಮಚದಿಂದ ಉಂಡರು. ಇಂಥ ಒಂದು ಸಾಧನೆ, ಒಂದು ತಪಸ್ಸು ಅವರದಾಯಿತು. ಇದರಿಂದಾಗಿ ದೇಹಕ್ಕೆ ಅವಶ್ಯವಾದ ಪೌಷ್ಟಿಕಾಂಶ ಸಿಗದೆ ಅತಿಸಾರ ವ್ಯಾಧಿ ಕಾಣಿಸಿಕೊಂಡಿತು. ಹಲವು ದಿನ ಅವರಿಗೆ ಹಸಿವೆ-ನಿದ್ರೆಗಳು ಏನೆಂಬುದೇ ತಿಳಿಯದಾಯಿತು. ಒಂದು ಕಡೆ ಗುಣವಾಗಲಾರದೆಂಬಂಥ ವ್ಯಾಧಿ, ಮತ್ತೊಂದು ಕಡೆ ಬಡತನದ ಸಂಕಟ, ಮನಸ್ಸು ತೃಪ್ತಿಯಾಗುವಂತೆ ವಿದ್ಯಾಭ್ಯಾಸ ಮಾಡಲಾಗದ ಚಿಂತೆ, ಈ ಮೂರು ಸೇರಿ ಶಕ್ತಿ ಮೀರಿ ಅವರನ್ನು ಒಂದೊಂದು ಕಡೆಯಿಂದ ಹಿಂಸಿಸುತ್ತಿದ್ದವು. ಇಂಥ ಸಂದರ್ಭದಲ್ಲಿಯೂ ಅವರು ಸಂಸ್ಕೃತಾಧ್ಯಯನದಿಂದ ವಿಚಲಿತರಾಗಲಿಲ್ಲ. ದಿನದಿನದ ಅಭ್ಯಾಸ ಕ್ರಮವನ್ನು ಅನುಸರಿಸಿ ಅಭ್ಯಾಸವನ್ನು ಮುಂದುವರಿಸಿದರು. ಇಂಥ ದಾರುಣ ಸ್ಥಿತಿಯಲ್ಲಿಯೂ ಅವರು ವಿದ್ಯಾಭ್ಯಾಸವನ್ನು ಮುಂದುವರಿಸಿದ್ದು, ನಿರ್ಧರಿಸಿಕೊಂಡಿದ್ದ ಗುರಿಯನ್ನು ತಲುಪಿದ್ದು ಅವರು ಈ ಮಟ್ಟಕ್ಕೆ ಬೆಳೆಯಲು ಕಾರಣವಾಯಿತು.

ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿ ಎಂಟು ವರ್ಷ ವಿದ್ಯಾಭ್ಯಾಸ ಮಾಡಿ ಶರ್ಮರು ವ್ಯಾಕರಣ ಮತ್ತು ಅಲಂಕಾರ ಶಾಸ್ತ್ರಗಳಲ್ಲಿ ವಿದ್ವತ್ ಪರೀಕ್ಷೆಗೆ ಕುಳಿತು ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾದರು. ವ್ಯಾಕರಣ ಶಾಸ್ತ್ರವಂತೂ ಕಬ್ಬಿಣದ ಕಡಲೆ ಎಂದೇ ಪ್ರಸಿದ್ಧವಾದದ್ದು. ಅಂಥ ಶಾಸ್ತ್ರವನ್ನು ಅರಗಿಸಿಕೊಂಡ ಅದಮ್ಯ ಶಕ್ತಿ ರಂಗನಾಥ ಶರ್ಮರದ್ದು. ಅವರ ಗುರುಗಳಾಗಿದ್ದವರು ವಿದ್ವಾನ್ ನು.ಸೋ.ತಿರುನಾರಾಯಣ ಅಯ್ಯಂಗಾರವರು. ತಮ್ಮ ಈ ಗುರುಗಳ ವಿದ್ವತ್ತು, ಔದಾರ್ಯಗಳನ್ನು ಶರ್ಮರು ಸದಾ ಕೃತಜ್ಞತೆಯಿಂದ ನೆನೆಸಿಕೊಳ್ಳುತ್ತಾರೆ.

ವಿದ್ಯಾರ್ಥಿ ಜೀವನದಲ್ಲಿ ಅಷ್ಟೊಂದು ಕಷ್ಟಗಳನ್ನು ಕಂಡುಂಡರೂ ಅವರು ಸಾಂಘಿಕ, ಸಾಂಸ್ಕೃತಿಕ ಜೀವನದಿಂದ ದೂರವಾಗಲಿಲ್ಲ. ಪಾಠ್ಯ ವಿಷಯಗಳಲ್ಲಿ ಹೇಗೋ ಪಾಠ್ಯೇತರ ವಿಷಯಗಳಲ್ಲಿಯೂ ಅಷ್ಟೇ ಚಟುವಟಿಕೆಯಿಂದ ಭಾಗವಹಿಸುತ್ತಿದ್ದರು. ನಾಟಕ, ಯಕ್ಷಗಾನ, ತಾಳಮದ್ದಳೆ, ಜನಜಾಗೃತಿ, ಸಮಾಜಸೇವೆ, ಸಂಘಟನೆಗಳಂಥ ಸಾಂಸ್ಕೃತಿಕ ಚಟುವಟಿಕೆಗಳಲ್ಲಿಯೂ ಅವರು ತೊಡಗಿರುತ್ತಿದ್ದರು. ಸಂಸ್ಕೃತ ಮಹಾಪಾಠಶಾಲೆಯ ವಿದ್ಯಾರ್ಥಿ ಸಂಘಕ್ಕೆ ನಾಲ್ಕು ವರ್ಷಗಳ ಕಾಲ

ಕಾರ್ಯದರ್ಶಿಯಾಗಿದ್ದರು. ತಾವಿದ್ದ ವ್ಯಾಸಮಂದಿರವೆಂಬ ವಿದ್ಯಾರ್ಥಿನಿಲಯದಲ್ಲಿ ನಾಲ್ಕು ವರ್ಷಗಳ ಕಾಲ ವಿದ್ಯಾರ್ಥಿ ವ್ಯವಸ್ಥಾಪಕರಾಗಿ ದುಡಿದಿದ್ದರು. ಪ್ರತಿಪಕ್ಷದಲ್ಲಿಯೂ ಪ್ರದೋಷಪೂಜೆ, ಉಪನ್ಯಾಸ, ಅಂತ್ಯಾಕ್ಷರಿ ಮುಂತಾದ ಕಾರ್ಯಕ್ರಮಗಳನ್ನೇರ್ಪಡಿಸಿ ಯಶಸ್ವಿಗೊಳಿಸುತ್ತಿದ್ದರು. ಆಗೀಗ ಕಂಪನಿ ನಾಟಕಗಳನ್ನು ನೋಡಿ ಸವಿಯುತ್ತಿದ್ದರು. ಆಶುಕವಿತೆ, ಸರಸಸಂವಾದ, ಶಾಸ್ತ್ರಚರ್ಚೆ ಮುಂತಾದವುಗಳ ಮೂಲಕ ಸಹಾಧ್ಯಾಯಿಗಳಿಗೆ, ವಿದ್ಯಾರ್ಥಿನಿಲಯದ ಸಹವಾಸಿಗಳಿಗೆ ಅಚ್ಚುಮೆಚ್ಚಿನ ಗೆಳೆಯರಾಗಿದ್ದರು.

ವಿದ್ಯಾರ್ಥಿ ಜೀವನ ಮುಗಿದ ತರುವಾಯ ಶ್ರೀಯುತರು ಕೆಲಕಾಲ ಪ್ರೌಢಶಾಲಾಧ್ಯಾಪಕರಾಗಿದ್ದು ಕನ್ನಡ ಸಂಸ್ಕೃತಗಳನ್ನು ಬೋಧಿಸಿದರು. ವ್ಯಾಕರಣ ಶಾಸ್ತ್ರವನ್ನು ಅಥದಿಂದ ಇತಿಯವರೆಗೆ ಜೀರ್ಣಿಸಿಕೊಂಡಿದ್ದ ಶರ್ಮರಿಗೆ ಹೈಸ್ಕೂಲು ಮಕ್ಕಳಿಗೆ ರಾಮ ಶಬ್ದವನ್ನು ಕಲಿಸಬೇಕಾಗಿ ಬಂದಿತು. ಇದರ ಬಗ್ಗೆ ಅವರು ಬೇಸರಿಸಿಕೊಳ್ಳಲಿಲ್ಲ. ಪಾಲಿಗೆ ಬಂದದ್ದು ಪಂಚಾಮೃತವೆಂದು ಶ್ರದ್ಧೆಯಿಂದ ಆ ಕಾರ್ಯದಲ್ಲಿ ತತ್ಪರರಾದರು. ತಮ್ಮ ಪಾಲಿಗೆ ಬಂದ ಕಾರ್ಯವನ್ನು ಅದು ಎಷ್ಟೇ ದೊಡ್ಡದಾಗಿರಲಿ, ಚಿಕ್ಕದಾಗಿರಲಿ ಶ್ರದ್ಧೆಯಿಂದ ಮಾಡಬೇಕೆಂಬುದು ಶರ್ಮರ ನಿಲುವು. ಇಂದಿಗೂ ಅವರು ಅದೇ ನಿಷ್ಠೆಯನ್ನು ಪಾಲಿಸಿಕೊಂಡು ಬಂದಿದ್ದಾರೆ.

ಆಮೇಲೆ ಅವರು ಎರಡು ವರ್ಷಗಳ ಕಾಲ ಬೇಲೂರಿನ ಸಂಸ್ಕೃತಪಾಠಶಾಲೆಯಲ್ಲಿ ಅಧ್ಯಾಪಕರಾಗಿ ದುಡಿದರು. ಅಷ್ಟೊಂದು ಗ್ರಂಥ ಸೌಲಭ್ಯವಿಲ್ಲದ ಆ ಚಿಕ್ಕ ಊರಿನಲ್ಲಿಯೂ ಸಹ ಶರ್ಮರ ವಿದ್ಯಾದಾಹ ಕೆಲಸ ಮಾಡಿತು. ಧರ್ಮಶಾಸ್ತ್ರ, ಜ್ಯೋತಿಷ ಮುಂತಾದ ಬೇರೆ ಬೇರೆ ವಿಭಾಗಗಳ ಬಗ್ಗೆ ಗಮನ ಹರಿಸಿದರು. ಪ್ರಮುಖ ಗ್ರಂಥಗಳನ್ನು ಅಭ್ಯಾಸ ಮಾಡಿದರು. 1948ರಲ್ಲಿ ಬೆಂಗಳೂರಿನ ಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆಗೆ ವ್ಯಾಕರಣ ಶಾಸ್ತ್ರದ ಅಧ್ಯಾಪಕರಾಗಿ ನಿಯುಕ್ತರಾದರು. ತಾವು ಎಲ್ಲಿ ಕಲಿತಿದ್ದರೋ ಅಲ್ಲೇ ಕಲಿಸುವಂಥ ಸುವರ್ಣಾವಕಾಶ ಅವರಿಗೆ ಲಭ್ಯವಾಯಿತು. ಒಮ್ಮೆ ಆರು ತಿಂಗಳು ಮೈಸೂರಿನ ಮಹಾರಾಜಾ ಸಂಸ್ಕೃತ ಮಹಾಪಾಠಶಾಲೆಗೆ ವರ್ಗವಾದುದನ್ನು ಬಿಟ್ಟರೆ ಉಳಿದ ಇಪ್ಪತ್ತೆಂಟು ವರ್ಷಗಳ ಕಾಲ ಬೆಂಗಳೂರಿನ ಸಂಸ್ಕೃತ ಮಹಾಪಾಠಶಾಲೆಯಲ್ಲಿಯೇ ವ್ಯಾಕರಣ ಪ್ರಾಧ್ಯಾಪಕರಾಗಿ ಕೊನೆಗೆ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದರು. ಕೆಲವು ವರ್ಷ ಕಾಲ ಅಲ್ಲಿಯ ಗ್ರಂಥಾಲಯದ ಹೊಣೆಯನ್ನೂ ಹೊತ್ತುಕೊಂಡಿದ್ದರು. 1976ರಲ್ಲಿ ಅಧ್ಯಾಪಕ ವೃತ್ತಿಯಿಂದ ನಿವೃತ್ತರಾದರು.

ಅರವತ್ತು ವರ್ಷಗಳ ಕಾಲದ ಅಧ್ಯಾಪನ ವೃತ್ತಿಯಿಂದ ಅವರ ಶರೀರ ಬಳಲಿತ್ತು. ಆದರೆ ಅವರ ಮನಸ್ಸನ್ನು ಮುಪ್ಪು ಆವರಿಸಲಿಲ್ಲ. ಇಂದಿಗೂ ಅದು ಹಾಗೆಯೇ ಇದೆ. ಇದೇ ಶರ್ಮರ ವೈಶಿಷ್ಟ್ಯ. ಅಧ್ಯಾಪಕರಾಗಿದ್ದರೂ ಅವರು ಆ ವೃತ್ತಿಯೊಂದನ್ನೆ ಮಾಡುತ್ತ ಸುಮ್ಮನೆ ಕುಳಿತವರಲ್ಲ. ಹಗಲು ಕಾಲೇಜಿನಲ್ಲಿ ವ್ಯಾಕರಣ ಶಾಸ್ತ್ರದ ಪಾಠ, ರಾತ್ರಿ ಮತ್ತು ಇತರ ಬಿಡುವಿನ ವೇಳೆಯಲ್ಲಿ ಗ್ರಂಥಾವಲೋಕನ, ಗ್ರಂಥರಚನ. ಇದನ್ನೂ ತಪಸ್ಸೆಂಬಂತೆ ಅವರು ಮಾಡಿಕೊಂಡು ಬಂದರು. ಇವರ ಕನ್ನಡದ ಶೈಲಿ ಅತಿ ಸೊಗಸು. ಅನುವಾದ ಕೂಡ ಅಷ್ಟೆ. ಸಾಮಾನ್ಯವಾಗಿ ಸಂಸ್ಕೃತ ಪಂಡಿತರು ಮೂಲಕ್ಕೆ ನಿಷ್ಠರಾಗಿರಬೇಕೆಂದು ಬಯಸುತ್ತಾರೆ. ಹಾಗಾಗಿ ಅವರ ಬರಹ ಕರ್ಮಣಿ ಪದಭೂಯಿಷ್ಠವಾಗಿ ನೀರಸವಾಗಿರುತ್ತದೆ. ರಂಗನಾಥ ಶರ್ಮರು ಮೂಲವನ್ನು ಅರಗಿಸಿಕೊಂಡು ಅದನ್ನು ತಮ್ಮದೇ ಆದ ನುಡಿಗಳಿಂದ ಕನ್ನಡಕ್ಕೆ ಇಳಿಸುತ್ತಾರೆ. ಹೀಗಾಗಿ ಅವರ ಅನುವಾದ ಮಕ್ಕಿ ಕಾ ಮಕ್ಕಿ ಅಲ್ಲ. ಇವರ ಈ ಶಕ್ತಿಯನ್ನು ಕಂಡು ಅನೇಕ ಸಂಸ್ಥೆಗಳವರು ಇವರಿಂದ ಗ್ರಂಥಗಳನ್ನು ಬರೆಸಿದ್ದಾರೆ. ಭಾರತಭಾರತಿ ಪುಸ್ತಕ ಸಂಪದಕ್ಕಾಗಿ ಅನೇಕ ಪುಸ್ತಕಗಳನ್ನು ಬರೆದುಕೊಟ್ಟಿದ್ದಾರೆ. ಐ.ಬಿ.ಹೆಚ್ ಎಂಬ ಪ್ರಕಾಶನ ಸಂಸ್ಥೆಯವರು ಹೊರತರಂದ "ಕನ್ನಡನಾಡು ಮತ್ತು ಕನ್ನಡ ಕವಿಕಾವ್ಯ ಪರಂಪರೆ"ಗಾಗಿ ಕೆಲವು ಪುಸ್ತಕಗಳನ್ನು ಬರೆದಿದ್ದಾರೆ. ಎಲ್ಲಿ ಸಂಸ್ಕೃತಕ್ಕೆ-ಶಾಸ್ತ್ರಕ್ಕೆ ಮನ್ನಣೆ ಇದೆಯೋ ಅಲ್ಲೆಲ್ಲ ಆಹ್ವಾನಿತರಾಗಿ ಹೋಗಿ ಶಾಸ್ತ್ರೀಯ ಸಮಸ್ಯೆಗಳನ್ನು ಸಮರ್ಥವಾಗಿ ಬಿಡಿಸಿ ತೋರಿಸಿಕೊಟ್ಟಿದ್ದಾರೆ.

ವೃತ್ತಿಯಲ್ಲಿರುವಾಗಲೇ ಅವರು ವಾಲ್ಮೀಕಿ ರಾಮಾಯಣದ ಕನ್ನಡಾನುವಾದಕ್ಕೆ ಕೈಹಾಕಿದರು. ಆ ಸಮಯದಲ್ಲಿ ಬೆಂಗಳೂರು ನರಸಿಂಹರಾಜಾ ಕಾಲೋನಿಯ ರಾಮಮಂದಿರದವರು ರಾಮಾಯಣಗಳ ಸುಂದರಕಾಂಡವನ್ನು ಕನ್ನಡದಲ್ಲಿ ಅನುವಾದಿಸಬೇಕೆಂದು ಬಯಸಿದರು. ಅದಕ್ಕಾಗಿ ಸಮರ್ಥ ಅನುವಾದಕರು ಯಾರು ಎಂದು ಡಿವಿಜಿಯವರನ್ನು ಕೇಳಿಕೊಂಡಾಗ ಅವರು "ಇಲ್ಲಿ ರಂಗನಾಥ ಶರ್ಮರೇ ಅದಕ್ಕೆ ತಕ್ಕವ"ರೆಂದು ಹೇಳಿದರಂತೆ. ಅದೇ ರೀತಿ ಸಮಿತಿಯವರು ರಂಗನಾಥ ಶರ್ಮರಿಗೆ ಆ ಕಾರ್ಯದ ಭಾರವನ್ನು ಒಪ್ಪಿಸಿದರು. ಸುಂದರಕಾಂಡ ಸರ್ವಾಂಗಸುಂದರವಾಗಿ ಹೊರಬಿದ್ದ ಮೇಲೆ ಇಡೀ ರಾಮಾಯಣವನ್ನು ಅನುವಾದಿಸಲು ಕೇಳಿಕೊಳ್ಳಲಾಯಿತು. ರಂಗನಾಥ ಶರ್ಮರು ಅದನ್ನು ಸಮರ್ಥವಾಗಿ ನೆರವೇರಿಸಿಕೊಟ್ಟರು. "ಅನುವಾದವೇನು ಮಹಾ! ಸಂಸ್ಕೃತದಲ್ಲಿದ್ದುದನು

ಕನ್ನಡಕ್ಕೆ ತರ್ಜುಮೆ ಮಾಡಿದರಾಯಿತು" ಎಂದು ಕೆಲವರು ಉಡಾಫೆ ಮಾಡಿಯಾರು. ಆದರೆ ಅನುವಾದಕರಿಗೆ ಮಾತ್ರವೇ ಅದರ ಕಷ್ಟಗೊತ್ತು. ಒಮ್ಮೊಮ್ಮೆ ಮೂಲದ ಅರ್ಥ ಗೊತ್ತಾದರೂ ಅನುವಾದಗೊಳ್ಳಬೇಕಾದ ಭಾಷೆಯಲ್ಲಿ ಅದಕ್ಕೆ ಸಮಾನ ಪದ ಸಿಗದೇ ಒದ್ದಾಡಬೇಕಾಗುತ್ತದೆ. ಒಮ್ಮೆ ಸಿಕ್ಕರೂ ಅದು ಮೂಲದ ಸ್ವಾರಸ್ಯವನ್ನು ಹೊರಗೆಡಹಲು ಶಕ್ತವಾಗಿರುವುದಿಲ್ಲ. ಹೊಸ ಭಾಷೆಯಲ್ಲೂ ಮೂಲದ ಕಸುವನ್ನೇ ಉಳಿಸಿಕೊಂಡು ಅನುವಾದವೆಂಬ ಭಾವನೆಯೇ ಬರದಂತೆ ಬರೆಯುವ ಕಲೆ ಶರ್ಮರಿಗೆ ಸಿದ್ಧಿಸಿದೆ. ಇವರ ಅನುವಾದ ಡಿವಿಜಿಯವರ ಪ್ರಶಂಸೆಯನ್ನೂ ಗಳಿಸಿದೆ ಎಂದ ಮೇಲೆ ಹೆಚ್ಚು ಹೇಳಬೇಕಾಗಿಲ್ಲ.

ಹೀಗೆ ವೃತ್ತಿ ಪ್ರವೃತ್ತಿಗಳಲ್ಲಿ ವ್ಯೆಮನಗಳನ್ನು ತೊಡಗಿಸಿಕೊಂಡಿದ್ದಾಗಲೂ ಕುಟುಂಬದ ಬಗ್ಗೆ ತಮ್ಮ ಹೊಣೆಯನ್ನು ಮರೆಯಲಿಲ್ಲ. ವಿದ್ಯಾಭ್ಯಾಸ, ವೃತ್ತಿ ಹೀಗೆ ನಲ್ವತ್ತು ವರ್ಷಗಳಿಂದ ಬೆಂಗಳೂರಿನಲ್ಲಿ ನೆಲೆಸಿದ್ದರೂ ತಲೆಯ ಮೇಲೆ ಒಂದು ತಮ್ಮದೇ ಆದ ಸೂರು ಇರಲಿಲ್ಲ. ತಮ್ಮ ಮಕ್ಕಳ ಭವಿಷ್ಯದ ದೃಷ್ಟಿಯಿಂದಲಾದರೂ ಅವರಿಗೆ ಬೆಂಗಳೂರಿನಲ್ಲಿ ಒಂದು ಮನೆ ಬೇಕಿತ್ತು. ಅದಕ್ಕಾಗಿ ವಿಜಯನಗರದಲ್ಲಿ ಒಂದು ಮನೆಯನ್ನು ಕಟ್ಟಿಸಿದರು. ಆ ಮನೆಯನ್ನು ಅವರು ತುಂಬಾ ಆಸ್ಥೆ ವಹಿಸಿ ತಾವೇ ನಿಂತು ಕಟ್ಟಿಸಿದರು. ಪ್ರತಿದಿನವೂ ತ್ಯಾಗರಾಜನಗರದಿಂದ ಬಂದು ಕಾಮಗಾರಿಯ ಪ್ರಗತಿಯನ್ನು ಪರಿಶೀಲಿಸಿ ಕೆಲಸಗಾರರಿಗೆ ಸಲಹೆಯನ್ನು ನೀಡಿ ಹೋಗುತ್ತಿದ್ದರು. 1971ರಲ್ಲಿ ಮನೆ ಪೂರ್ಣವಾಯಿತು. ತಮ್ಮ ಗೃಹಿಣಿ ಕಮಲಾಕ್ಷಮ್ಮನವರಿಗೆ ಒಂದು ಗೃಹವನ್ನೂ ನೀಡಿದರು. ಆದರೇನು? ವಿಧಿವಿಲಾಸ. ತಾವು ಬಹುದಿನಗಳಿಂದ ಬಯಸಿದ ಸ್ವಂತ ಗೂಡು ಕಮಲಾಕ್ಷಮ್ಮನವರಿಗೆ ದೊರೆತರೂ ಅದರಲ್ಲಿ ಅವರು ಹೆಚ್ಚುಕಾಲ ಬಾಳಲಿಲ್ಲ. ಮೂರು ವರ್ಷಗಳಲ್ಲಿಯೇ ಅವರು ಅಕಾಲ ಮರಣಕ್ಕೆ ತುತ್ತಾದರು. ಆ ಕಾಲದಲ್ಲಿ ಶರ್ಮರು ವಾಲ್ಮೀಕಿರಾಮಾಯಣದ ಆರು ಕಾಂಡಗಳನ್ನು ಅನುವದಿಸಿ ಏಳನೆಯ ಕಾಂಡವನ್ನು ಅನುವದಿಸುತ್ತಿದ್ದರು. ಈ ಘಟನೆಯನ್ನವರು ಪದ್ಯರೂಪವಾಗಿ ಹೀಗೆ ತೋಡಿಕೊಳ್ಳುತ್ತಾರೆ –

ಯದಾ ಕಾಂಡಂ ಷಷ್ಠಾತ್ ಪರಮಿನಕುಲೋತ್ತಂಸಚರಿತೇ
ಮಹಾಪ್ರಸ್ಥಾನಾಂತಂ ಜನಕತನಯಾಂತರ್ಧಿಸಹಿತಮ್ ।
ಮಹಾಕಾರ್ಣಾಟೇನ ವ್ಯರಚಿ ವಚಸಾ ಪ್ರಾಪಿ ಸಹಸಾ
ತದಾಕಾಂಡೇ ಪತ್ನೀನಿಧನಭವಶೋಕೋಽನಲಸಮಃ ।

ಸೀತಾವಿಯೋಗವನ್ನು ಐರೆವ ತನಗೂ ಶ್ರೀರಾಮನು ಪತ್ನೀವಿಯೋಗವನ್ನು ತಂದಿತ್ತನೆ ಎಂಬ ಸಂಶಯ ಅವರನ್ನು ಕ್ಷಣಕಾಲ ಕಾಡಿದರೂ ಅದನ್ನು ದೂರತಳ್ಳಿದರು. "ಪ್ರಸಾದಃ ಕೋಪ್ಯೇಷೋಽಸ್ಫುರಿತಮಹಿಮಾ ಮುಗ್ಧಮನಸಾಮ್" "ಸಾಮಾನ್ಯ ಜನರಿಗೆ ಅರ್ಥವಾಗದಂಥ ಭಗವಂತನ ಒಂದು ವಿಶೇಷ ಅನುಗ್ರಹವೇ ಇರಬೇಕು" ಎಂದು ಸಮಾಧಾನಪಟ್ಟುಕೊಂಡರು. ಒಟ್ಟಿನಲ್ಲಿ ಇದೊಂದು ಅವರ ಬಾಳಿಗೆ ಬಿದ್ದ ದೊಡ್ಡ ಪೆಟ್ಟು. ಸುಮಾರು ಇಪ್ಪತ್ತು ವರ್ಷಗಳ ತರುವಾಯ ತಾವೇ ಬೆವರು ಸುರಿಸಿ ಕಟ್ಟಿಸಿಕೊಂಡ ಮನೆಯೂ ಅವರ ಕೈತಪ್ಪಿತು. ಅಂಥ ಸದ್ಗೃಹಿಣಿಯನ್ನೇ ಕಳೆದುಕೊಂಡ ಶರ್ಮರಿಗೆ ಗೃಹವಿಯೋಗ ಅಷ್ಟೊಂದು ಬಾಧಿಸಿರಲಿಕ್ಕಿಲ್ಲ. ಎಷ್ಟಾದರೂ "ಋಣಾನುಬಂಧರೂಪೇಣ ಪಶುಪತ್ನಿಸುತಾ-ಲಯಾಃ" ಎಂಬುದನ್ನು ಅವರು ಅರಿತವರೆ.

ಈ ಸಂದರ್ಭದಲ್ಲಿ ಅವರ ಮಾನಸಿಕ ಆಸರೆಯಾದ ಕುಟುಂಬದ ಪರಿಚಯ ಮಾಡಿಕೊಳ್ಳಲೇ ಬೇಕು. ಶರ್ಮರಿಗೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು. ಹಿರಿಯ ಮಗ ಬ್ಯಾಂಕ್ ಅಧಿಕಾರಿಯಾಗಿ ನಿವೃತ್ತರಾದವರು. ಕಿರಿಯ ಪುತ್ರ ವೈದ್ಯರು. ಪುತ್ರಿಯರಿಬ್ಬರೂ ವಿದೇಶದಲ್ಲಿ ನೆಲೆಸಿದ್ದಾರೆ. ಒಬ್ಬರು ವೈದ್ಯೆಯಾದರೆ ಇನ್ನೊಬ್ಬರು ಸಾಹಿತ್ಯಾಸಕ್ತರು. ಅವರ ಸಂಸ್ಕೃತಪಾಂಡಿತ್ಯವನ್ನು ಮುಂದುವರಿಸಿಕೊಂಡು ಹೋಗುವವರಿಲ್ಲ. ಶರ್ಮರು ಯಾರ ಮೇಲೂ ಒತ್ತಾಯವಾಗಿ ಅದನ್ನು ಹೇರಲಿಲ್ಲ. ಅವರಿಷ್ಟದಂತೆ ಸಾಗಲು ಅನುವು ಮಾಡಿಕೊಟ್ಟರು. ಆದರೂ ಎಲ್ಲರೂ ಸಂಸ್ಕೃತದಲ್ಲಿ ಅಷ್ಟಿಷ್ಟು ಪರಿಚಯವುಳ್ಳವರು.

ಈಗ ಅವರು ಸುಮಾರು 85 ವರ್ಷಗಳಿಂದ ತಮ್ಮ ಕಾರ್ಯಕ್ಷೇತ್ರವಾಗಿದ್ದ, ಶಿಷ್ಯರು ಅಭಿಮಾನಿಗಳಿಂದ ತುಂಬಿದ್ದ ಬೆಂಗಳೂರನ್ನು ಬಿಟ್ಟು ಮೈಸೂರಿನ ತಮ್ಮ ಹಿರಿಯ ಮಗ ಸದಾನಂದ ಅವರ ಆಶ್ರಯಕ್ಕೆ ಸೇರಿದ್ದಾರೆ. ಶ್ರದ್ಧೆಯಿಂದ ಉಪಚರಿಸುವ ಮಗ ಮಾತೃವಾತ್ಸಲ್ಯದಿಂದ ನೋಡಿಕೊಳ್ಳುತ್ತಿರುವ ಸೊಸೆ ಶರ್ಮರಿಗೆ ಊರುಗೋಲುಗಳು. ಇತರ ಪುತ್ರ ಪುತ್ರಿಯರೂ ಆಗೀಗ ಬಂದು ಯೋಗಕ್ಷೇಮವನ್ನು ವಿಚಾರಿಸಿಕೊಳ್ಳುತ್ತ ಕೈಲಾದ ಸೇವೆಯನ್ನು ಮಾಡುತ್ತಿರುತ್ತಾರೆ. ಪ್ರತಿದಿನವೂ ನಾಲ್ಕಾರು ಆತ್ಮೀಯರಾದರೂ ಶರ್ಮರನ್ನು ಕಂಡು ಉಭಯ ಕುಶಲೋಪರಿ ನಡೆಸುತ್ತಿದ್ದ ಬೆಂಗಳೂರಿನಿಂದ ಅವರು ಮೈಸೂರಿಗೆ ಹೋಗುವಂತಾಗಿದ್ದು ಚೆನ್ನಾಗಿ ಬೇರುಬಿಟ್ಟು ಬೆಳೆದ ಆಲದ ಮರವನ್ನು ಬೇರು ಸಹಿತ ಕಿತ್ತು ಮತ್ತೊಂದು ಜಾಗದಲ್ಲಿ ನೆಟ್ಟಂತಾಗಿದೆ.

ಬೆಂಗಳೂರನ್ನು ಬಿಡುವ ಕೆಲವು ದಿನಗಳ ಮುಂಚೆ ಈ ಲೇಖಕನೊಡನೆ ಹೇಳಿದ್ದು "ಬೆಂಗಳೂರಿಗೆ ಬಂದಾಗಲೂ ಬಾಡಿಗೆ ಮನೆಯಲ್ಲಿಯೇ ಇದ್ದೆ. ಬೆಂಗಳೂರನ್ನು ಬಿಡುವಾಗಲೂ ಬಾಡಿಗೆ ಮನೆಯಲ್ಲಿದ್ದುಕೊಂಡೇ ಬಿಡುತ್ತಿದ್ದೇನೆ" ಈ ಮಾತನ್ನು ಹೇಳಿದಾಗ ಎಷ್ಟೇ ಪರೀಕ್ಷಿಸಿದರೂ ಅವರ ಮುಖದಲ್ಲಿ ಯಾವುದೇ ವಿಕಾರ ಕಂಡುಬರಲಿಲ್ಲ. ಆದರೆ ವಾಕ್ಯಗುಂಫನವೇ ಹೇಳಬೇಕಾದುದನ್ನು ಹೇಳುತ್ತಿತ್ತು.

ಇದಿಷ್ಟು ರಂಗನಾಥಶರ್ಮರ ಜೀವನ ವೃತ್ತಾಂತವಾಯಿತು. ಇನ್ನು ಅವರ ಪಾಂಡಿತ್ಯ ಪ್ರವೃತ್ತಿಗಳ ಬಗ್ಗೆ ಹೇಳಹೊರಟರೆ ಅದಕ್ಕೆ ಕೊನೆಯೇ ಇಲ್ಲವೆನಿಸುತ್ತದೆ. ಸಂಸ್ಕೃತ ವಿದ್ವಾಂಸರನ್ನೆಲ್ಲ 'ಪಂಡಿತರೇ' ಎಂದು ಕರೆಯುವುದು ರೂಢಿ. ಆದರೆ ಸಂಪ್ರದಾಯದಂತೆ ಪಾಂಡಿತ್ಯ ಸಂಪನ್ನರಾಗಬೇಕಾದರೆ ಕನಿಷ್ಠ ಹತ್ತು ವರ್ಷಗಳ ಸತತಾಧ್ಯಯನಬೇಕು. ಮೊದಲ ಐದು ವರ್ಷಗಳು ಕೇವಲ ಸಂಸ್ಕೃತಭಾಷೆಯನ್ನಷ್ಟೇ ಕಲಿಯುತ್ತಾರೆ. ಆ ಅವಧಿಯಲ್ಲಿ ಅವರು ಪಂಚಮಹಾಕಾವ್ಯಗಳಿಂದ ತಲಾ ಒಂದು ಅಥವಾ ಎರಡರಂತೆ ಆಯ್ದ ಸರ್ಗಗಳು. ಕೆಲವು ನಾಟಕಗಳು, ಲಘುಕೌಮುದಿ ಹಾಗೂ ಸಿದ್ಧಾಂತಕೌಮುದಿಯ ಕೆಲ ಭಾಗಗಳು ಇಷ್ಟನ್ನು ಮಾತ್ರ ಕಲಿಯುತ್ತಾರೆ. ಇದರಿಂದ ಅವರಿಗೆ ಸಂಸ್ಕೃತದಲ್ಲಿ ಓದಲು, ಬರೆಯಲು, ಮಾತನಾಡಲು ಬರಬೇಕು. ಇಲ್ಲಿಯವರೆಗೆ ಭಾಷಾಭ್ಯಾಸ. ಇನ್ನು ಮುಂದೆ ಐದು ವರ್ಷಗಳು ಶಾಸ್ತ್ರಾಭ್ಯಾಸ, ವ್ಯಾಕರಣ, ವೇದಾಂತ, ನ್ಯಾಯ ಮುಂತಾದ ಶಾಸ್ತ್ರಗಳನ್ನು ಐದೈದು ವರ್ಷಗಳ ಕಾಲ ಅಭ್ಯಾಸ ಮಾಡಿದವನು ಆಯಾ ಶಾಸ್ತ್ರಜ್ಞನೆನಿಸಿಕೊಳ್ಳುತ್ತಾನೆ. ವೈಯಾಕರಣ, ವೇದಾಂತ, ನೈಯಾಯಿಕ ಮುಂತಾದ ಪದಗಳಿಂದ ಲೋಕ ಅವರನ್ನು ಗುರುತಿಸುತ್ತದೆ. ಶಾಸ್ತ್ರಜ್ಞರೆಲ್ಲ ಸಂಸ್ಕೃತಜ್ಞರೇ ಆಗಿರುತ್ತಾರೆ. ಆದರೆ ಸಂಸ್ಕೃತಜ್ಞರೆಲ್ಲ ಶಾಸ್ತ್ರಜ್ಞರಲ್ಲ. ಐದು ವರ್ಷ ಶಾಸ್ತ್ರಾಭ್ಯಾಸ ಮಾಡಿದರೂ ಅನೇಕರು ನಾಮ ಮಾತ್ರ ಶಾಸ್ತ್ರಜ್ಞರಾಗಿರುತ್ತಾರೆ. ಏಕೆಂದರೆ ಶಾಸ್ತ್ರಾಭ್ಯಾಸ ತುಂಬಾ ಪರಿಶ್ರಮವನ್ನು ಅಪೇಕ್ಷಿಸುತ್ತದೆ. ಗುರುಮುಖದಿಂದ ಐದು ವರ್ಷ ಪಾಠ ಹೇಳಿಸಿಕೊಂಡ ಅನಂತರ ಸತತ ಚಿಂತನ, ಅಧ್ಯಾಪನಗಳಿಂದ ಕಲಿತದ್ದನ್ನು ಅರಗಿಸಿಕೊಳ್ಳಬೇಕು. ರಂಗನಾಥಶರ್ಮರು ಈ ರೀತಿ ವ್ಯಾಕರಣ, ಅಲಂಕಾರ ಈ ಎರಡು ಶಾಸ್ತ್ರಗಳನ್ನು ಸ್ವಾಧೀನ ಮಾಡಿಕೊಂಡಿದ್ದಾರೆ. ತಾವು ಅಧ್ಯಾಪಕರಾದ ಮೇಲೂ ಕೃಷ್ಣಜೋಯಿಸರು ಮುಂತಾದ ಪಂಡಿತರಿಂದ ವೇದಾಂತಶಾಸ್ತ್ರವನ್ನು ಹೇಳಿಸಿಕೊಂಡಿದ್ದಾರೆ. ಸತತ ವಿದ್ಯಾದಾಹವೇ ಅವರನ್ನು ಬೆಳೆಸಿದೆ. ಅವರು

ಕನ್ನಡ ಸಾಹಿತ್ಯ ಪರಿಷತ್ತಿನವರು ಕೈಗೊಂಡ ಹಳಗನ್ನಡ ಗ್ರಂಥ ಸಂಪಾದನೆಯ ವಿಷಯದಲ್ಲಿಯೂ ಕೆಲಸ ಮಾಡಿದರು. ಕೆಲವು ಜೈನ ಸಾಹಿತ್ಯಕ್ಕೆ ಸಂಬಂಧಪಟ್ಟ ಕೃತಿಗಳನ್ನು ಹೊಸಗನ್ನಡಕ್ಕೆ ಅನುವಾದಿಸುವಾಗ ತಮ್ಮ ಅನುವಾದ ಪ್ರಾಮಾಣಿಕವಾಗಿರಬೇಕೆಂದು ಬಯಸಿ ಬಲ್ಲವರಿಂದ ಜೈನ ಸಿದ್ಧಾಂತವನ್ನೂ ತಿಳಿದುಕೊಂಡರು.

ಒಮ್ಮೆ ವಿಧಾನ ಪರಿಷತ್ ಸದಸ್ಯರೂ ಸಂಸ್ಕೃತಜ್ಞರೂ ಆದ ಎಂ.ಪಿ.ಎಲ್ ಶಾಸ್ತ್ರಿಗಳು ಸಭೆಯೊಂದರಲ್ಲಿ ಸಂಸ್ಕೃತಪಂಡಿತರಿಗೆ ಸವಾಲೆಸೆದರಂತೆ. ಸಂಸ್ಕೃತ ಕಾವ್ಯ ಪ್ರಪಂಚದಲ್ಲಿ ರಘುವಂಶ, ಕುಮಾರಸಂಭವ, ಕಿರಾತಾರ್ಜುನೀಯ, ಶಿಶುಪಾಲವಧ, ನೈಷದ ಇವು ಪಂಚಮಹಾಕಾವ್ಯಗಳೆಂದು ಪ್ರಸಿದ್ಧವಾಗಿವೆ. ಪರೀಕ್ಷೆಗಾಗಿ ಇವುಗಳಿಂದ ಒಂದೊಂದು ಸರ್ಗವನ್ನು ಇಟ್ಟಿರುತ್ತಾರೆ. ಪರೀಕ್ಷೆಯನ್ನು ಪಾಸು ಮಾಡಿದ ಮೇಲಾದರೂ ಆ ಐದೂ ಗ್ರಂಥಗಳನ್ನೂ ಸಮಗ್ರವಾಗಿ ಓದಿದವರು ಯಾರಾದರೂ ಇದ್ದಾರಾ? ಎಂದು. ಯಾರೂ ಉತ್ತರಿಸಲಿಲ್ಲ. ಆ ಸಭೆಯಲ್ಲಿ ಶರ್ಮರೂ ಇದ್ದರಂತೆ. ಎಲಾ! ಏನಿದು? ನಾನೂ ಪರೀಕ್ಷೆಗೆ ಬೇಕಾಗುವಷ್ಟೇ ಓದಿಕೊಂಡು ಕೃತಕೃತ್ಯನಾಗಿಬಿಟ್ಟೆನೆ? ಎನ್ನಿಸಿ ಅವರು ಮನೆಗೆ ಬಂದವರೆ ಆ ಎಲ್ಲ ಗ್ರಂಥಗಳನ್ನೂ ಬುಡದಿಂದ ಕೊನೆಯವರೆಗೆ ಓದಿದರಂತೆ. ಅಷ್ಟೇ ಅಲ್ಲ, ಪ್ರಸಿದ್ಧವಾದ ಇತರ ಕಾವ್ಯಗಳು, ನಾಟಕಗಳು ಹೀಗೆ ಸಂಸ್ಕೃತ ಕಾಲೇಜಿನ ಗ್ರಂಥಭಾಂಡಾರದಲ್ಲಿದ್ದ ಎಲ್ಲ ಗ್ರಂಥಗಳನ್ನೂ ಅಧ್ಯಯನ ಮಾಡಿಮುಗಿಸಿದರಂತೆ. ರಂಗನಾಥಶರ್ಮರ ಭಾಷೆಯಲ್ಲಿ "ಆ ಗ್ರಂಥವನ್ನು ನಾನು ನೋಡಿದ್ದೇನೆ" ಎಂದರೆ ಬುಡದಿಂದ ಕೊನೆಯ ವರೆಗೂ ಅರ್ಥಜ್ಞಾನಸಹಿತ ಓದಿದ್ದೇನೆ" ಎಂದೇ ಅರ್ಥ. ಹಾಗೆ ಓದುವಾಗ ಆ ಪುಸ್ತಕಗಳಲ್ಲಿರುವ ಮುದ್ರಣದೋಷ, ನ್ಯೂನಾತಿರಿಕ್ತತೆಗಳನ್ನು ತಿದ್ದುತ್ತಲೇ ಓದುತ್ತಾರೆ. ಇಂದಿಗೂ ಸಹ ಬೆಂಗಳೂರು ಸಂಸ್ಕೃತಕಾಲೇಜು ಲೈಬ್ರರಿಯಲ್ಲಿ ರಂಗನಾಥಶರ್ಮರಿಂದ ಹೀಗೆ ತಿದ್ದಲ್ಪಟ್ಟ ಪುಸ್ತಕಗಳನ್ನು ಕಾಣಬಹುದು. ಕೆಲವೊಮ್ಮೆ ವ್ಯಾಕರಣ ವಿರುದ್ಧವಾದ ಪದಗಳಿದ್ದರೆ ಪ್ರಶ್ನಾರ್ಥಕ ಚಿಹ್ನೆ ಹಾಕಿದ್ದೂ ಇದೆ. ಹೀಗೆ ಯಾವುದೇ ಗ್ರಂಥವನ್ನಾದರೂ ಮಂಡೂಕಪ್ಲುತಿಯನ್ನನುಸರಿಸದೆ ಕ್ರಮವಾಗಿ ಅರ್ಥೈಸುತ್ತ ಅಧ್ಯಯನ ಮಾಡುವುದು ಅವರ ವೈಶಿಷ್ಟ್ಯ. ಈ ಸ್ವಭಾವ ಅವರನ್ನು ಈಗಲೂ ಬಿಟ್ಟಿಲ್ಲ. ಈಗ ಗ್ರಂಥಾಧ್ಯಯನ ನಿಂತಿದ್ದರೂ ವಿದ್ವತ್ ಸಲ್ಲಾಪದಲ್ಲಿ ಯಾವುದಾದರೊಂದು ಗಹನ ವಿಷಯ ಬಂದಾಗ ಅದನ್ನು ಆಮೂಲಾಗ್ರವಾಗಿ

ಗ್ರಹಿಸಿ ಅರ್ಥ ಮಾಡಿಕೊಂಡೇ ಪ್ರತಿಕ್ರಯಿಸುತ್ತಾರೆ. ಅವರು ಮೊದಲೇ ಸಂಸ್ಕೃತಾಧ್ಯಯನವನ್ನು ಮಾಡಿದ್ದರಿಂದ ಎಲ್ಲರೂ ಅವರನ್ನು ಸಂಸ್ಕೃತ ಪಂಡಿತರೆಂದೇ ಭಾವಿಸಿಬಿಟ್ಟಿದ್ದಾರೆ. ಕನ್ನಡ ಭಾಷೆಯಲ್ಲಿಯೂ ಅಷ್ಟೇ ಸಮರ್ಥರೆಂದು ಅವರ ಕೆಲವು ಗ್ರಂಥಗಳಿಂದ ಕಂಡುಕೊಂಡರೂ ಅದನ್ನು ಬಹಿರಂಗವಾಗಿ ಒಪ್ಪಿಕೊಳ್ಳಲು ಅನೇಕರಿಗೆ ಹಿಂಜರಿಕೆ. ಅವರ ಕನ್ನಡಭಾಷೆಯ ಈ ಪರಿನಿಷ್ಠಿತ ಪಾಂಡಿತ್ಯಕ್ಕೆ ಸಂಸ್ಕೃತವ್ಯಾಕರಣವೇ ಕಾರಣ ಎಂಬುದನ್ನಂತೂ ಕೆಲವರು ಒಪ್ಪುವುದೇ ಇಲ್ಲ. ಶರ್ಮರು ಈ ಬಗ್ಗೆ ತಾತ್ಸಾರದಿಂದಿದ್ದು ಮೌನವಾಗಿಯೇ ತಮ್ಮ ಕಾಯಕವನ್ನು ಮುಂದುವರಿಸಿದರು. ಹೊಸಗನ್ನಡ ವ್ಯಾಕರಣ, ವ್ಯಾಕರಣಶಾಸ್ತ್ರದ ಪರಿವಾರ, ಎರಡನೆ ನಾಗವರ್ಮ ಈ ಗ್ರಂಥಗಳಲ್ಲಿ ಅವರ ಕನ್ನಡ ಪಾಂಡಿತ್ಯವನ್ನು ಕಾಣಬಹುದು.

ಕೆಲವರು ಸಭೆಯಲ್ಲಿ ಓಜಸ್ವಿಯಾದ ಭಾಷಣ ಮಾಡಬಲ್ಲರು. ಆದರೆ ತಾವು ಹೇಳಿದ ವಿಷಯವನ್ನೇ ಲೇಖನರೂಪವಾಗಿ ಬರೆದುಕೊಡಿ ಎಂದರೆ ಬಹುತೇಕ ಜನರಿಗೆ ಅದು ಸಾಧ್ಯವಾಗುವುದಿಲ್ಲ. ಇವರಲ್ಲಿ ಸಂಸ್ಕೃತಪಂಡಿತರು ಹೆಚ್ಚು ಪ್ರಸಿದ್ಧರು. ಶಾಸ್ತ್ರಗೋಷ್ಠಿಯಲ್ಲಿ ಎರಡು ಮೂರು ತಾಸುಗಳ ಕಾಲ ಶಾಸ್ತ್ರೀಯ ವಿಷಯದ ಮೇಲೆ ನಿರರ್ಗಳವಾಗಿ ಮಾತನಾಡಿದ ಮಹಾನುಭಾವರೂ ಸಹ ತಮ್ಮ ಇಡೀ ಜೀವನದಲ್ಲಿ ನಾಲ್ಕು ಪಂಕ್ತಿಗಳನ್ನೂ ಬರೆಯದೆ ಗತಿಸಿಹೋಗಿದ್ದಾರೆ. ಅವರ ವಿದ್ಯಾಭ್ಯಾಸ ಕ್ರಮವೇ ಹಾಗಿತ್ತು. ಪರೀಕ್ಷಾ ಸಮಯವೊಂದನ್ನು ಬಿಟ್ಟರೆ ತಮ್ಮ ಇಡೀ ವಿದ್ಯಾರ್ಥಿ ಜೀವನದಲ್ಲಿ ಕಾಗದ ಪೆನ್ನುಗಳನ್ನು ಮುಟ್ಟುವ ಪ್ರಸಂಗವೇ ಅವರಿಗೆ ಬರುತ್ತಿರಲಿಲ್ಲ. ಶರ್ಮರೂ ಇದೇ ಕ್ರಮದಲ್ಲಿ ವಿದ್ಯಾಭ್ಯಾಸ ಮಾಡಿದರೂ ಸಹ ಸ್ವಂತ ಪರಿಶ್ರಮದಿಂದ ಬರವಣಿಗೆಯನ್ನು ರೂಢಿಸಿಕೊಂಡರು. ಭಾಷಣದಷ್ಟೇ ಲೇಖನದಲ್ಲಿಯೂ ಪ್ರಗಲ್ಭತೆಯನ್ನು ಮೆರೆದಿದ್ದಾರೆ. "ಈ ವಿಷಯದಲ್ಲಿ ಪರಿಸ್ಥಿತಿಯೇ ನನ್ನ ಗುರು" ಎನ್ನುತ್ತಾರೆ. ಬಾಲ್ಯದಲ್ಲಿ ಅವರಿಗೆ ಪಾಠ್ಯಗ್ರಂಥಗಳನ್ನು ಕೊಳ್ಳಲು ಹಣವಿರಲಿಲ್ಲ. ಲೈಬ್ರರಿಯಿಂದ ಪುಸ್ತಕಗಳನ್ನು ಎರವಲು ತಂದು ಅದನ್ನು ಖಾಲಿ ಹಾಳೆಗಳ ಮೇಲೆ ಪ್ರತಿ ಮಾಡಿಕೊಂಡು ಓದುತ್ತಿದ್ದರಂತೆ. ಹಾಗೆ ಬರೆದುಕೊಳ್ಳುವಾಗ ಪ್ರತಿಪುಟದ ಕೆಳಗೂ ಸ್ವಲ್ಪ ಜಾಗ ಬಿಡುತ್ತಿದ್ದರಂತೆ. ಪಾಠದ ಸಮಯದಲ್ಲಿ ಗುರುಗಳು ಹೇಳಿದ ವಿಶೇಷ ವಾಕ್ಯ, ವ್ಯಾಖ್ಯಾನದಲ್ಲಿರುವ ವಿಶೇಷ, ತಮಗೆ ಹೊಳೆದ ಹೊಸ ವಿಷಯ, ಮೂಲಕ್ಕೆ ಸಂಬಂಧಪಟ್ಟಂತೆ ಬೇರೆ ಗ್ರಂಥಗಳಲ್ಲಿ ಬಂದ ವಾಕ್ಯಗಳ ಉದ್ಧರಣ ಇವುಗಳಿಗಾಗಿ ಆ ಸ್ಥಾನ ಮೀಸಲಾಗಿರುತ್ತಂತೆ. ಹೀಗೆ ಬರೆದು

ಬರೆದು ಲೇಖನ ಕಲೆಯಲ್ಲೂ ಸಿದ್ಧಹಸ್ತರಾದರು. ಲೇಖನ ಭಾಷಣಗಳೆರಡರಲ್ಲೂ ಸಿದ್ಧಹಸ್ತರಾದರು. ಕನ್ನಡದ ಹಿರಿಯ ಲೇಖಕರೊಬ್ಬರು ಹೇಳಿದ್ದಾರೆ. "ಓದು ಬರಹದ ಶತ್ರು" ಎಂದು. ರಂಗನಾಥ ಶರ್ಮರ ವಿಷಯದಲ್ಲಿ ಮಾತ್ರ ಈ ಮಾತು ಸಂಪೂರ್ಣ ಸುಳ್ಳಾಯಿತು. ಶರ್ಮರ ಕಾರ್ಯಶಕ್ತಿ ಓದು, ಬರಹ, ಭಾಷಣ ಈ ಮೂರೂ ದಾರಿಗಳಲ್ಲಿ ಹರಿದು ತ್ರಿಪಥಗಾಮಿನಿ ಗಂಗೆಯಾಯಿತು. ಮೊದಮೊದಲು ಅವರು ಯಾವುದಾದರೊಂದು ವಿಷಯದ ಮೇಲೆ ಪ್ರತಿದಿನ ಕನಿಷ್ಠ ಹತ್ತು ಪುಟಗಳನ್ನಾದರೂ ಬರೆಯುತ್ತಿದ್ದರಂತೆ. ತೀರ ಇತ್ತೀಚಿನವರೆಗೆ ಅಂದರೆ ಅವರ ಕಣ್ಣುಗಳು ಶಕ್ತಿಹೀನವಾಗುವವರೆಗೂ ಎರಡುಮೂರು ಪುಟಗಳನ್ನಾದರೂ ಬರೆಯುತ್ತಿದ್ದರು. ಅವರು ಅಭ್ಯಾಸ ಮಾಡುತ್ತಿದ್ದ ರೂಮಿನಲ್ಲಿ ಮೇಜಿನ ಮೇಲೆ ಕೆಲವೊಂದಿಷ್ಟು ಬಿಳಿಯ ಹಾಳೆಗಳು ಎರಡು ಮೂರು ಪೆನ್ನುಗಳು, ಒಂದು ಪೆನ್ಸಿಲ್, ಒಂದು ಕೆಂಪು ಇಂಕಿನ ಪೆನ್ನು ಇವಿಷ್ಟು ಇರುವುದು ಸಹಜವಾಗಿತ್ತು. ಅವರಿಗೆ ಮೂಡ್ ಬಂದಾಗೆಲ್ಲ ಬರವಣಿಗೆಯಲ್ಲಿ ತಲ್ಲೀನರಾಗಿಬಿಡುತ್ತಿದ್ದರು. ಅವರ ಮಗಳು ಜಯಶ್ರೀಯವರು ಹೇಳುವಂತೆ – "ಓದುವಾಗ, ಬರೆಯುವಾಗ, ಚಿಂತನೆಯಲ್ಲಿದ್ದಾಗ ಅವರ ಏಕಾಗ್ರತೆ ತೀವ್ರವಾದದ್ದು. ನಾವು ಅವರ ಎದುರೇ ಬಂದರೂ ಪಕ್ಕದಲ್ಲೇ ಹಾಯ್ದರೂ ಅವರಿಗೆ ಗೊತ್ತಾಗುತ್ತಿರಲಿಲ್ಲ. ತೀವ್ರ ಚಿಂತನೆಯಲ್ಲಿ ಮುಳುಗಿದ್ದಾಗ ನಾವೇನಾದರೂ ಕೇಳಿದರೆ ಪ್ರತ್ಯುತ್ತರಿಸಿದವರು ಆಮೇಲೆ ನೀನು ನನಗೆ ಯಾವಾಗ ಹೇಳಿದೆ ಎಂದು ಕೇಳುತ್ತಿದ್ದರು. ಯಾವ ಸಮಯದಲ್ಲಿ ಅವರನ್ನು ಮಾತನಾಡಿಸಬೇಕು ಎಂಬುದನ್ನು ನಾವೇ ಕಲಿತೆವೆನ್ನಿ" – ಹೀಗಿದೆ ಅವರ ಏಕಾಗ್ರತೆ. ಇದನ್ನೇ ಪ್ರಾಚೀನರು ತಪಸ್ಸು ಎಂದು ಕರೆಯುತ್ತಿದ್ದುದು. "ಮನಸಶ್ಚೇಂದ್ರಿಯಾಣಾಂ ಚ ಹ್ಯೇಕಾಗ್ರ್ಯಂ ತಪ ಉಚ್ಯತೇ" ಮನಸ್ಸು ಮತ್ತು ಇಂದ್ರಿಯಗಳ ಏಕಾಗ್ರತೆಯೇ ತಪಸ್ಸು. ಇಂಥ ತಪಸ್ಸು ಇಲ್ಲವಾದರೆ ಅಂಥ ಶ್ರೇಷ್ಠ ಗ್ರಂಥಗಳು ಹೊರಬರುವುದಾದರೂ ಹೇಗೆ?

ಈಗ ಶ್ರೀ ರಂಗನಾಥ ಶರ್ಮರು ರಚಿಸಿ ಸಾರಸ್ವತ ಲೋಕಕ್ಕೆ ಇತ್ತ ಗ್ರಂಥಗಳತ್ತ ಒಮ್ಮೆ ದೃಷ್ಟಿ ಹರಿಸಬಹುದು. ಶ್ರೀಯುತರು ಸಂಸ್ಕೃತದಲ್ಲಿ ಕೆಲವು ಉತ್ತಮ ಗ್ರಂಥಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಸಂಸ್ಕೃತಂ ನಾಮ ದೈವೀ ವಾಕ್, ಗುರುಪರಂಪರಾಚರಿತಂ, ಶಂಕರಚರಿತಾಮೃತಮ್, ಕುಸುಮಾಂಜಲಿಃ, ಶ್ರೀಬಾಹುಬಲಿ ವಿಜಯಮ್, ಏಕಚಕ್ರಮ್ ಇವು ಪ್ರಮುಖವಾದವು. ಇವುಗಳಲ್ಲಿ ಕೊನೆಯ

ಎರಡು ನಾಟಕಗಳು. ಇವುಗಳ ಭಾಷೆ, ಶೈಲಿ ಅದ್ಭುತವಾಗಿದೆ. ಸಂಸ್ಕೃತ ಪ್ರಾಚೀನ ನಾಟಕಗಳನ್ನು ಓದಿ ಓದಿ ರಕ್ತಗತ ಮಾಡಿಕೊಂಡ ಶರ್ಮರು ಅನಾಯಾಸವಾಗಿ ಅದೇ ಶೈಲಿಯಲ್ಲಿ ನಾಟಕಗಳನ್ನು ರಚಿಸಿದ್ದಾರೆ. ಹಿರಿಯರೊಬ್ಬರು ಹೇಳುವ ಹಾಗೆ ಇವುಗಳಲ್ಲಿ 'ಲೇಖಕರು ರಂಗನಾಥ ಶರ್ಮಾ' ಎಂಬ ಹೆಸರನ್ನು ಬದಿಗಿರಿಸಿ ಓದಿದರೆ ಕಾಳಿದಾಸ, ಭವಭೂತಿ, ಭಟ್ಟನಾರಾಯಣರ ಕಾಲದ ಕೃತಿಗಳನ್ನು ಓದುತ್ತಿದ್ದೇವೇನೋ ಅನ್ನುವುದು ಓದಿದವರ ಅನುಭವ. ರಂಗಪ್ರಯೋಗಕ್ಕೂ ಸೈ ಅನ್ನಿಸಿಕೊಳ್ಳಬಲ್ಲ ಈ ನಾಟಕಗಳು ಸಂಸ್ಕೃತಸಾಹಿತ್ಯಕ್ಕೊಂದು ಉತ್ತಮ ಸೇರ್ಪಡೆ. ಶಂಕರಚರಿತಾಮೃತ ಹೆಸರೇ ಹೇಳುವಂತೆ ಶಂಕರರ ದಿವ್ಯ ಚರಿತೆಯನ್ನು ಸಾರುವ ಅನುಷ್ಟುಪ್ ಛಂದಸ್ಸಿನ ಇನ್ನೂರಾನಲವತ್ತು ಶ್ಲೋಕಗಳ ಲಘು ಕಾವ್ಯ. ಗಾತ್ರದಲ್ಲಿ ಚಿಕ್ಕದಾದರೂ ಗುಣದಲ್ಲಿ ದೊಡ್ಡದು. ಪ್ರಾಯಶಃ ರಂಗನಾಥಶರ್ಮರ ಕೃತಿಗಳಲ್ಲೆಲ್ಲ ಇದು ಸರ್ವಶ್ರೇಷ್ಠವಾದದ್ದು. ಆಚಾರ್ಯರ ಚರಿತ್ರೆಯನ್ನು ಬಣ್ಣಿಸುವ ಅನೇಕ ಗ್ರಂಥಗಳಿದ್ದಾಗ್ಯೂ ವಿಚಾರವಂತರೂ ವಿವೇಕಿಗಳೂ ಆದ ಭಕ್ತರು ಮೆಚ್ಚುವಂಥ ನಿರಾಭರಣಸುಂದರವಾದ, ಆದರೆ ಇರಲೇಬೇಕಾದ ಸಕಲಗುಣಪರಿಪೂರ್ಣವಾದ ಕೃತಿಯೊಂದು ಬೇಕಿತ್ತು ಎಂದು ವಿದ್ವಜ್ಜನರು ಬಯಸುತ್ತಿರುವಾಗಲೆ ಮೂಡಿಬಂದ ಕೃತಿ ಇದು. ಶೃಂಗೇರಿ ಪೀಠಾಧಿಪತಿಗಳು ಇದನ್ನು ನಿತ್ಯಪಾರಾಯಣಕ್ಕೆ ಅರ್ಹವಾದ ಕೃತಿ ಎಂದು ಘೋಷಿಸಿದ್ದಾರೆ. ಈ ಪುಸ್ತಕಗಳನ್ನಲ್ಲದೆ ವ್ಯಾಕರಣಕ್ಕೆ ಸಂಬಂಧಪಟ್ಟ ಅನೇಕ ಪುಸ್ತಕಗಳನ್ನು ಸಂಸ್ಕೃತದಲ್ಲಿ ರಚಿಸಿದ್ದಾರೆ. ಸಂಸ್ಕೃತಭಾಷೆಯ ಬಗ್ಗೆ ರಂಗನಾಥ ಶರ್ಮರಿಗಿದ್ದ ಅತೀವ ಶ್ರದ್ಧಾಭಕ್ತಿಯ ಫಲವಾಗಿ ಮೂಡಿ ಬಂದ ಕೃತಿ 'ಸಂಸ್ಕೃತಂ ನಾಮ ದೈವೀ ವಾಕ್.'

ಶರ್ಮರನ್ನು ಕನ್ನಡಿಗರಲ್ಲಿ ವಿಶೇಷ ಪ್ರಸಿದ್ಧಿಗೆ ತಂದ ಗ್ರಂಥ ವಾಲ್ಮೀಕಿರಾಮಾಯಣದ ಕನ್ನಡಾನುವಾದ. ಭಾರತೀಯರ ಶ್ರದ್ಧಾಕೇಂದ್ರವಾದ ರಾಮಾಯಣವನ್ನು ಈಗಾಗಲೆ ಒಬ್ಬಿಬ್ಬರು ಅನುವಾದಿಸಿದ್ದರೂ ಅಷ್ಟು ಪ್ರಸಿದ್ಧವಾಗಿರಲಿಲ್ಲ. ಧಾರ್ಮಿಕಗ್ರಂಥವೊಂದನ್ನು ಕನ್ನಡಭಾಷೆಗೆ ಅನುವಾದಿಸುವಲ್ಲಿ ಶ್ರದ್ಧಾಭಕ್ತಿಗಳ ಜೊತೆಗೆ ಭೀತಿಯೂ ಕೆಲಸ ಮಾಡುತ್ತದೆ. ಮೂಲವೆಲ್ಲ ಅನುವಾದದಲ್ಲಿ ಯಥಾವತ್ತಾಗಿ ಬರಲೇಬೇಕು, ಒಂದು ಶಬ್ದ ಹೆಚ್ಚು, ಒಂದು ಶಬ್ದ ಕಡಿಮೆ ಆಗಕೂಡದು. ಆದರೆ ಮೂಲಕ್ಕೆ ಅಪಚಾರ – ಈ ಭಾವನೆಯಿಂದ ಅನುವಾದಿಸಿದಾಗ ಅನುವಾದ ಕೃತ್ರಿಮವೂ ನೀರಸವೂ ಆಗುತ್ತದೆ. ಎರಡೂ

ಭಾಷೆಗಳಲ್ಲಿ ಪ್ರಭುತ್ವವಿದ್ದು ಮೂಲದ ಭಾವವನ್ನು ಸ್ಪಷ್ಟವಾಗಿ ಗ್ರಹಿಸಿಕೊಂಡು ಅನುವಾದಿಸಿದಾಗ ಮಾತ್ರ ಅನುವಾದವು ಮೂಲದಷ್ಟೇ ಪ್ರಭಾವಶಾಲಿಯಾದೀತು. ರಂಗನಾಥಶರ್ಮರು ಉಭಯಭಾಷಾ ಪರಿಣತರು. ಆದುದರಿಂದಲೇ ಅವರು ಸಂಸ್ಕೃತದ ಭಾವವನ್ನು ನಿರಾಯಾಸದಿಂದ ಸುಲಲಿತವಾಗಿಯೇ ಕನ್ನಡಿಸಿದ್ದಾರೆ. ಕವಿಯೊಬ್ಬ ಹೇಳುವಂತೆ 'ಪ್ರತಿಯೊಂದು ಭಾಷೆಗೂ ತನ್ನದೇ ಆದ ಮಾಧುರ್ಯವಿದೆ. ಭಾಷೆಯನ್ನು ತರ್ಜುಮೆ ಮಾಡಬಹುದೇ ವಿನಾ ಮಾಧುರ್ಯವನ್ನಲ್ಲ.' ಆದರೆ ರಂಗನಾಥಶರ್ಮರು ವಾಲ್ಮೀಕಿಯ ಭಾಷೆ ಮಾಧುರ್ಯ ಎರಡನ್ನೂ ಅನುವಾದಿಸಿದ್ದಾರೆ. ಈ ಅನುವಾದದ ಅನಂತರ ಅವರಿಗೆ ಅನೇಕ ಗ್ರಂಥಗಳ ಅನುವಾದಕ್ಕಾಗಿ ಬೇಡಿಕೆ ಬರಲಾರಂಭಿಸಿತು. ಶ್ರೀ ವಿಷ್ಣುಪುರಾಣ, ಶ್ರೀಮದ್ಭಾಗವತ 10, 11, 12ನೇ ಸ್ಕಂಧಗಳು, ಶ್ರೀ ಮಾಧವೀಯ ಶಂಕರದಿಗ್ವಿಜಯ ಮುಂತಾದವು ಅವರ ಅನುವಾದಪಾಟವದ ಕೀರ್ತಿಸ್ತಂಭಗಳು. ಅವರ ಈ ಸಾಮರ್ಥ್ಯವನ್ನು ಕಂಡ ಶೃಂಗೇರಿಜಗದ್ಗುರುಗಳು ಅವರಿಗೆ ಶಂಕರದಿಗ್ವಿಜಯದ ಅನುವಾದ ಕಾರ್ಯವನ್ನು ವಹಿಸಿದರು. ಗ್ರಂಥವನ್ನು ಅನುವಾದಿಸುವವರಿಗೆ ಅಲಂಕಾರ, ವ್ಯಾಕರಣ, ನಾನಾ ದರ್ಶನಗಳ ಪರಿಚಯ ಅನಿವಾರ್ಯ. ಅವೆಲ್ಲವನ್ನೂ ಬಳಸಿಕೊಂಡು ಶರ್ಮರು ಅನುವಾದವನ್ನು ಪರಿಪೂರ್ಣವೆನ್ನುವಂತೆ ಮಾಡಿದ್ದಾರೆ. ವ್ಯಾಸತಾತ್ಪರ್ಯ ನಿರ್ಣಯ ಇವರ ಮತ್ತೊಂದು ಸಮರ್ಥ ಅನುವಾದ. ಅಣ್ಣಯ್ಯ ದೀಕ್ಷಿತರು ಬರೆದ ಈ ಮೂಲ ಸಂಸ್ಕೃತ ಗ್ರಂಥವೇ ಆಸಕ್ತಿಯನ್ನು ಕೆರಳಿಸುವಂಥಾದ್ದು. ವ್ಯಾಸರೆಂದು ಪ್ರಸಿದ್ಧರಾದ ಬಾದರಾಯಣರ ಸೂತ್ರಗಳಿಗೆ ದ್ವೈತಾದ್ವೈತ ವಿಶಿಷ್ಟಾದ್ವೈತಪರವಾಗಿ ಭಾಷ್ಯ ಬರೆದಿದ್ದಾರೆ. ಶಂಕರಾಚಾರ್ಯರದು ಅದ್ವೈತ ಪರವಾದ ಭಾಷ್ಯ. ಆದರೆ ಇವುಗಳಲ್ಲಿ ವ್ಯಾಸರಿಗೆ ಯಾವುದು ಇಷ್ಟವಾಗಿತ್ತು? ವ್ಯಾಸ ಮತಾನುಯಾಯಿಗಳಲ್ಲಿ ಈ ವಿಷಯದಲ್ಲಿ ಐಕಮತ್ಯವಿಲ್ಲ. ನಿಜ. ವ್ಯಾಸರ ಪ್ರತಿಪಕ್ಷದವರನ್ನೇ ಕೇಳಿದರೆ? ವ್ಯಾಸರು ತಮ್ಮ ಗ್ರಂಥದಲ್ಲಿ ಸಾಂಖ್ಯ, ಜೈನ, ಬೌದ್ಧ, ಕಾಣಾದ, ಜೈಮಿನೀಯ ಮತಗಳನ್ನು ಖಂಡಿಸಿದ್ದಾರೆ. ಹಾಗೇ ಆ ಮತಗಳವರೂ ವ್ಯಾಸರ ಮತವನ್ನು ಖಂಡಿಸಿದ್ದಾರಲ್ಲ! ಅಲ್ಲಿ ಅವರು ಯಾವ ಸಿದ್ಧಾಂತವನ್ನು ವ್ಯಾಸರದೆಂದಿಟ್ಟುಕೊಂಡು ಖಂಡಿಸಿದ್ದಾರೆ ಎಂಬುದನ್ನು ನೋಡಿದರೆ ಬಾದರಾಯಣವ್ಯಾಸರ ಸಿದ್ಧಾಂತವೇನು ಎಂಬುದು ತಿಳಿದುಬರುತ್ತದೆ. ಈ ದಾರಿಯಲ್ಲಿ ಹೊರಟ ಅಣ್ಣಯ್ಯ ದೀಕ್ಷಿತರು ಶಂಕರರ ಅದ್ವೈತವೇ ಬಾದರಾಯಣರ

ತಾತ್ಪರ್ಯವೆಂದು ನಿರೂಪಿಸಿದ್ದಾರೆ. ಇಲ್ಲಿಯವರೆಗೆ ಈ ಗ್ರಂಥಕ್ಕೆ ಮೂರು ಕನ್ನಡಾನುವಾದಗಳಿವೆ. ಅವುಗಳಲ್ಲಿ ಶ್ರೀ ಶರ್ಮರದೇ ಭಾಷೆ ಹಾಗೂ ವಿಷಯ ಪ್ರಸ್ತುತಿಯ ದೃಷ್ಟಿಯಿಂದ ಸರ್ವೋತ್ತಮವಾದುದು.

ವಾಕ್ಯಪದೀಯವು ಭರ್ತೃಹರಿ ಎಂಬ ಮಹಾವಿದ್ವಾಂಸನು ರಚಿಸಿದ. ವ್ಯಾಕರಣಶಾಸ್ತ್ರಕ್ಕೆ ಸಂಬಂಧಪಟ್ಟ ಒಂದು ಮಹಾಕೃತಿ. ಇದನ್ನು ಶರ್ಮರು ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಅನುವಾದದ ಬಗ್ಗೆ ಎರಡೇ ಮಾತುಗಳನ್ನಾಡಬಹುದು. ಈ ಗ್ರಂಥವನ್ನು ರಂಗನಾಥಶರ್ಮರಂಥವರು ಮಾತ್ರವೇ ಅನುವಾದಿಸಲು ಸಾಧ್ಯ. ಒಂದು ವೇಳೆ ಶರ್ಮರು ಈ ಕೆಲಸವನ್ನು ಮಾಡದೇ ಇದ್ದಿದ್ದರೆ ಎಷ್ಟೋ ವರ್ಷಗಳ ವರೆಗೆ ಕನ್ನಡ ಲೋಕ ಈ ಆಲೋಕದಿಂದ ವಂಚಿತವಾಗುತಿತ್ತು. 'ಇದಮಂಧಂ ತಮಃ ಕೃತ್ಸ್ನಂ....'

ವೇದಾಂತಕ್ಕೆ ಸಂಬಂಧಪಟ್ಟಂತೆ ಕೆಲವು ಗ್ರಂಥಗಳನ್ನೂ ಅವರು ಬರೆದಿದ್ದಾರೆ. ಪಂಚದಶೀ ಪ್ರವಚನ, ಮಾಂಡೂಕ್ಯ ಪ್ರವಚನ, ತೈತ್ತರೀಯ ಪ್ರವಚನಗಳು ಇಲ್ಲಿ ಉದಾಹರಣೆಗೆ ಯೋಗ್ಯವಾದವುಗಳು. ಪಂಚದಶಿಯು ತಿಳಿಯಾದ ಭಾಷೆಯಲ್ಲಿ ವೇದಾಂತದ ಸಾರವನ್ನೆಲ್ಲ ವಿವರಿಸತಕ್ಕ ಕೃತಿ. ವೇದಾಂತಕ್ಕೆ ಸಂಬಂಧಪಟ್ಟ ಅನೇಕ ಕೃತಿಗಳಿರುವಲ್ಲಿ ಶರ್ಮರು ಈ ಮೂರನ್ನು ವಿಶೇಷವಾಗಿ ಆಯ್ಕೆ ಮಾಡಿರುವುದರಲ್ಲಿ ಔಚಿತ್ಯವಿದೆ. ಹಿಂದೆ ಹೇಳಿದಂತೆ ಪಂಚದಶಿಯು ಸಾಫಲ್ಯಕ್ಕೆ ಹೆಸರಾದರೆ ಮುಂದಿನ ಎರಡು ಉಪನಿಷತ್ತುಗಳು ಅವಸ್ಥಾತ್ರಯ ವಿವೇಚನೆ, ಪಂಚಕೋಶವಿವೇಚನೆಗಳ ಮೂಲಕ ಆತ್ಮಶೋಧನೆಗೆ ಸಹಾಯಕವಾಗುವಂಥವು. ಆಚಾರ್ಯರು ಬ್ರಹ್ಮವಿದ್ಯೆಯ ಅನುಭವಾವಸಾನವಾಗಬೇಕು ಎಂದಿದ್ದಾರೆ. ಕೇವಲ ಅವಚ್ಛೇದಕಾವಚ್ಛಿನ್ನಗಳ ಝಟಾಪಟಿಯಲ್ಲ. ವಿವರಣೆ ಸಾಧ್ಯವಾದಷ್ಟೂ ಸರಳ ಹಾಗೂ ಸ್ಪಷ್ಟವಿರಬೇಕು ಎನ್ನುತ್ತಾರೆ. ಅಂಥ ಸರಳತೆಯಿಂದಾಗಿಯೇ ಪಂಚದಶಿಯಂಥ ಶ್ರೇಷ್ಠ ಗ್ರಂಥ ಪಂಡಿತರ ಆದರವನ್ನು ಗಳಿಸಲಾಗಲಿಲ್ಲ ಎಂದು ಕಟಾಕ್ಷಿಸುತ್ತಾರೆ. ಆದರೆ ಶಾಸ್ತ್ರರಕ್ಷಣೆಯ ಬಗ್ಗೆ ಮಾತು ಬಂದಾಗ ವಿರೂಪಾಕ್ಷ ಶಾಸ್ತ್ರಿಗಳು, ನವೀನಂ, ರಾಮಚಂದ್ರ ಸೋಮಯಾಜಿಗಳು, ನಾರಾಯಣ ಭಟ್ಟರು ಮುಂತಾದ ವೇದಾಂತ ಪಂಡಿತರನ್ನು ನೆನೆಯುತ್ತಾರೆ. ಶಾಂಕರತತ್ತ್ವ ಪ್ರಚಾರದ ವಿಷಯ ಬಂದಾಗ ಅವರು ಹೃದಯ ತುಂಬ ಹೇಳುವ ಹೆಸರೊಂದೆ. ಅದು ಹೊಳೆನರಸೀಪುರದ ಸಚ್ಚಿದಾನಂದೇಂದ್ರ ಸರಸ್ವತಿ ಸ್ವಾಮಿಗಳು. "ಇಡೀ ಭಾರತದಲ್ಲಿ

ಅವರಂತೆ ಆಚಾರ್ಯರಿಗಾಗಿ ಅಹರ್ನಿಶಿ ದುಡಿದವರು ಮತ್ತೊಬ್ಬರಿಲ್ಲ. ಅವರು ಬರೆದುದನ್ನು ಓದಲೇ ಈಗಿನವರಿಗೆ ಒಂದು ಆಯುಷ್ಯ ಬೇಕು" ಎನ್ನುತ್ತಾರೆ. ಇಷ್ಟಾದರೂ ಅವರು ಸಮರ್ಥಿಸುವ ಮೂಲಾವಿದ್ಯಾನಿರಾಸ ಮುಂತಾದ ಕೆಲವು ಅಭಿಪ್ರಾಯಗಳನ್ನು ಶರ್ಮರು ಒಪ್ಪುವುದಿಲ್ಲ. ಅದಕ್ಕೆ ಕಾರಣ ಅವರ ಸಂಪ್ರದಾಯ ಶರಣತೆಯಲ್ಲ, ಸಂಪ್ರದಾಯ ಒಪ್ಪಿಕೊಂಡು ಬಂದ ಎಲ್ಲ ವಿದ್ವಾಂಸರೂ ಇದುವರೆಗೆ ಮಾನ್ಯ ಮಾಡಿದ ಒಂದು ಪ್ರಕ್ರಿಯೆಯನ್ನು ತಿರಸ್ಕರಿಸಲು ಬಲವಾದ ಕಾರಣ ಬೇಕು. ಇವರು ವಿವರಿಸಿದ್ದು ನನ್ನ ತಲೆಗೆ ಹತ್ತಲಿಲ್ಲ. ಅದೂ ಅಲ್ಲದೆ ಭಾಷ್ಯದಲ್ಲಿ ಒಂದು ಕಡೆ ಹೇಳಿದ ಅರ್ಥವನ್ನು ಅದೇ ರೀತಿಯ ಸಂದರ್ಭದಲ್ಲಿ ಎಲ್ಲ ಕಡೆಗೂ ಅನ್ವಯಿಸಲು ಬರುವಂತಿರಬೇಕು. ಒಂದೊಂದು ಕಡೆ ಒಂದೊಂದು ಅರ್ಥ ಹೇಳಬಾರದು ಎನ್ನುತ್ತಾರೆ. ಆದರೆ ಎಂದಾದರೊಂದು ದಿನ ಆ ಹೊಸ ವಾದವೇ ಸರಿಯೆನಿಸಿದರೆ ನಿಸ್ಸಂಕೋಚವಾಗಿ ಹೊಸ ದಾರಿಯನ್ನು ಅಂಟಿಕೊಳ್ಳುವ ಔದಾರ್ಯವೂ ಅವರಿಗುಂಟು.

ಭರ್ತೃಹರಿಯ ಶ್ರೇಷ್ಠಕೃತಿ ವಾಕ್ಯಪದೀಯವನ್ನು ಅನುವಾದಿಸಿ ಕನ್ನಡಿಗರಿಗೆ ಮಹೋಪಕಾರ ಮಾಡಿದಂತೆ ಡಿವಿಜಿಯವರು ಸಣ್ಣ ಸಣ್ಣ ಚೀಟಿಯಲ್ಲಿ ಬರೆದಿಟ್ಟಿದ್ದು ಚದುರಿದಂತೆ ಇದ್ದ ಮರುಳ ಮುನಿಯನ ಕಗ್ಗವನ್ನು ಸಂಪಾದಿಸಿ ಕೊಟ್ಟಿದ್ದು. ಎಷ್ಟೋ ಕಡೆ ಅಕ್ಷರಗಳೇ ಅಳಿಸಿಹೋಗಿದ್ದವು. ಪದಗಳೇ ಇರಲಿಲ್ಲ. ಛಂದಸ್ಸು ಶಿಥಿಲವಾಗಿದ್ದೂ ಇತ್ತು. ಅನೇಕ ವರ್ಷಗಳ ಒಡನಾಟದಿಂದ ಡಿವಿಜಿಯವರ ಭಾವವನ್ನರಿತಿದ್ದ ಶರ್ಮರು ಡಿವಿಜಿಯವರು ಗತಿಸಿದ ನಂತರವೂ ದೊರೆತ ಆ ಕಾವ್ಯದ ತುಣುಕುಗಳನ್ನೆಲ್ಲ ಸೇರಿಸಿ, ಬೇಕಾದೆಡೆಗಳಲ್ಲಿ ಅಕ್ಷರಗಳನ್ನೊ ಪದಗಳನ್ನೊ ತುಂಬಿ, ಡಿವಿಜಿಯವರ ಅಭಿಪ್ರಾಯಕ್ಕೆ ಸರಿಹೊಂದುವಂತೆ ಸಂಪಾದಿಸಿ ಪ್ರಕಟಿಸಿದ್ದಾರೆ. ಹೀಗೆ ಶರ್ಮರಿಂದ ಬೆಳಗಿದ ಅನೇಕ ಕೃತಿನಕ್ಷತ್ರಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಎಣಿಸುವ ಪ್ರಯತ್ನ ಮಾಡಿದ್ದೇನೆ. ಎಲ್ಲವನ್ನೂ ಸ್ಪರ್ಶಿಸಲಾಗದ ಕೊರತೆಯನ್ನು ಜನರು ಅರ್ಥಮಾಡಿಕೊಳ್ಳಬಲ್ಲರು.

ಲೇಖನಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಂತೆ ಶರ್ಮರು ನಾನಾ ಕಡೆಗಳಿಗೆ ಆಹ್ವಾನಿತರಾಗಿ ಹೋಗಿ ಭಾಷಣಗಳನ್ನೂ ಮಾಡಿದ್ದಾರೆ. ಲೇಖನದಂತೆ ಭಾಷಣದಲ್ಲೂ ಅವರು ಸಿದ್ಧಹಸ್ತರು. ಹೇಳಬೇಕಾದುದನ್ನು ಸ್ಪಷ್ಟವಾಗಿ, ಗಟ್ಟಿಯಾಗಿ, ತಾತ್ಪರ್ಯದಲ್ಲಿ ಸಂದೇಹಕ್ಕೆಡೆಯಿಲ್ಲದಂತೆಯೇ ಹೇಳುತ್ತಾರೆ. ಇದಕ್ಕೆ ಅವರ

ಕಂಠಸಿರಿಯೂ ಅನುಕೂಲವಾಗಿದೆ. ಯಾವಾಗಲೂ ನಿಂತುಕೊಂಡೇ ಭಾಷಣ ಮಾಡುತ್ತಾರೆ. ಕೇವಲ ಇತ್ತೀಚೆಗೆ (2010ರ ನಂತರ) ಕಾಲುಗಳು ಶಕ್ತಿಯನ್ನು ಕಳೆದುಕೊಳ್ಳುತ್ತಿರುವಾಗ ಕೆಲವೆಡೆ ಸಂಘಟಕರ ಒತ್ತಾಯಕ್ಕೆ ಮಣಿದು ಕುಳಿತುಕೊಂಡು ಭಾಷಣ ಮಾಡಿದ್ದಿದೆ. ಆದರೆ ಅವರಿಗೆ ಸಮಾಧಾನವಿಲ್ಲ. ಮುಂದೆ ಚೀಟಿಯನ್ನಿಟ್ಟುಕೊಂಡು ಭಾಷಣ ಮಾಡಿದವರಲ್ಲ. ವಿಷಯಗಳನ್ನು ತಮ್ಮ ಸ್ಮೃತಿಪಟಲದಿಂದ ಒಂದೊಂದಾಗಿ ತೆಗೆದು ಹೊರಗಿಡುವ ಪರಿ ಅನ್ಯಾದೃಶವಾದುದು. ನಾನಾ ಸಭೆ ಸಮ್ಮೇಳನಗಳಲ್ಲಿ ಅಧ್ಯಕ್ಷರಾಗಿ, ಭಾಷಣಕಾರರಾಗಿ ಹೋಗಿ ಉಪನ್ಯಾಸಗಳನ್ನು ಕೊಟ್ಟಿದ್ದಾರೆ. ಅವುಗಳನ್ನೆಲ್ಲ ಸಂಗ್ರಹಿಸಲು ಸಾಧ್ಯವಾದರೆ ಅದೊಂದು ಅತ್ಯುತ್ತಮ ಸಂಗ್ರಹವೇ ಆದೀತು.

ರಂಗನಾಥ ಶರ್ಮರು ಪಾಂಡಿತ್ಯದಿಂದ ಎಷ್ಟು ದೊಡ್ಡವರೊ ಗುಣದಿಂದಲೂ ಅಷ್ಟೇ ದೊಡ್ಡವರು. ಎಂಥ ಸಂದರ್ಭದಲ್ಲೂ ಇನ್ನೊಬ್ಬರೆದುರಿಗೆ ಕೈಚಾಚದ ಅವರ ಅಯಾಚಕ ಸ್ವಭಾವ ಸದಾ ಅವರನ್ನು ಮೇಲಿನ ಸ್ಥಾನದಲ್ಲಿಯೇ ಇರಿಸಿತ್ತು. ಒಮ್ಮೆ ಕೆಆರ್‌ನಗರದಿಂದ ಬೆಂಗಳೂರಿಗೆ ಬರುವಾಗ ಸಂಸ್ಕೃತದಲ್ಲಿ ಎರಡು ನಿಮಿಷ ಕೂಡ ಸರಿಯಾಗಿ ಮಾತನಾಡಲು ಬಾರದ ಆದರೆ ವಿದ್ವತ್ ಪರೀಕ್ಷೆಯ ಎರಡು ಮೂರು ಪೇಪರುಗಳಿಗೆ ಪರೀಕ್ಷಕನಾಗಿರುವ ಮಹಾಪಂಡಿತನೊಬ್ಬನ ವಿಷಯ ಬಂದಿತು. ಆಗ ಅವರು ನಮ್ಮ ಈ ಪಂಡಿತರು ಹಣಕ್ಕಾಗಿ ತಮ್ಮನ್ನು ಮಾರಿಕೊಳ್ತಾರೆ ಕಣ್ರೀ. ಅವನಿಂದ ದುಡ್ಡು ತಗೊಂಡು ಫಸ್ಟ್‌ಕ್ಲಾಸಿನಲ್ಲಿ ಪಾಸು ಮಾಡಿಸಿದ್ದಾರೆ. ಈಗ ಅವನು ಇವರ ತಲೆಯ ಮೇಲೇ ಕೂತ್ಕೊಳ್ತಾನೆ. ಏನೊ ಮೇಲಿನವರ ಭಾರೀ ಒತ್ತಡ ಬಂತೂನ್ನಿ. ಆಗ ಕಾಸನ್ನೂ ಮುಟ್ಟದೆ ಏನೊ ಪಾಸೂಂತ ಮಾಡಿ ಕಳಿಸ್ಬಹುದಿತ್ತು. ಆದರೆ ಹಣ ತಗೊಂಡು ಸ್ಥಾನ ಗೌರವವನ್ನೇ ಕೆಡಿಸಿಬಿಟ್ರು. ಹೀಗೆ ಹೇಳಿ ಮುಗಿಸುವಾಗ ವೇದಾಂತದೇಶಿಕರ ಕಾಚಾಯ ನೀಚಂ ಕಮನೀಯ ವಾಚಾ...ಎಂಬ ಪದ್ಯದ ಅರ್ಥವನ್ನು ವಿವರಿಸಿದ್ದು ಇಂದಿಗೂ ನೆನಪಿನಲ್ಲಿದೆ.

ತಾವು ಇನ್ನೊಬ್ಬರ ಮುಂದೆ ಕೈಚಾಚಲಿಲ್ಲ ಇಷ್ಟೇ ಅಲ್ಲ, ತಮ್ಮ ಮಿತವಾದ ಆದಾಯದಲ್ಲೇ ಸ್ವಲ್ಪ ಉಳಿಸಿ ಪಾಠಶಾಲೆಗಳಿಗೆ ವಿದ್ಯಾರ್ಥಿಗಳಿಗಾಗಿ ದತ್ತಿಯನ್ನು ಇಟ್ಟಿದ್ದಾರೆ. ಅತಿಥಿ ಸತ್ಕಾರ ಅವರ ರಕ್ತದಲ್ಲಿ ಬಂದದ್ದು. ಆದರೆ ಕೆಲಕಾಲ ಈ ವಿಷಯದಲ್ಲಿ ಅವರು ಅಸಹಾಯಕರಾಗಿದ್ದರು. ಮನೆಯಲ್ಲಿ ಒಬ್ಬರೇ ಇರಬೇಕಾಗಿ ಬರುತ್ತಿತ್ತು. ಅಂಥ ಸಮಯದಲ್ಲೂ ಅವರು ಬಂದವರಿಗೆ ಸ್ವತಃ ಕಾಫಿ ಮಾಡಿ

ತಂದುಕೊಡುತ್ತಿದ್ದರು. ಅದೂ ಸಾಧ್ಯವಾಗದಿದ್ದಾಗ ಒಂದು ಕಲ್ಲುಸಕ್ಕರೆ ತುಂಡನ್ನಾದರೂ ಕೈ ಮೇಲೆ ಇಡುತ್ತಿದ್ದರು. ಅವರ ಮೇಜಿನ ಮೇಲೆ ಸದಾ ಒಂದು ಕಲ್ಲುಸಕ್ಕರೆ ಭರಣಿ ಇರುತ್ತಿತ್ತು. ವಿಜಯನಗರವನ್ನು ಬಿಟ್ಟು ಗಿರಿನಗರಕ್ಕೆ ಬಂದು ವಾಸವಾಡತೊಡಗಿದ ಮೇಲೆ ಹೆಚ್ಚು ಅನುಕೂಲತೆಗಳುಂಟಾದವು. ಅಮೇರಿಕದಲ್ಲಿ ಅವರ ಮಗಳ ಮನೆಯಲ್ಲಿದ್ದು ಅಡುಗೆ ಮಾಡುತ್ತಿದ್ದ ಜಾನಕಮ್ಮ ಈಗ ಇಲ್ಲಿ ಬಂದು ಇರತೊಡಗಿದಳು. ಆಕೆ ಶರ್ಮರನ್ನು ಚೆನ್ನಾಗಿ ನೋಡಿಕೊಂಡಳು. ಕಾಲೇಜಿಗೆ ಹೋಗುತ್ತಿದ್ದ ಮೊಮ್ಮಗನೂ ಶರ್ಮರನ್ನು ಸೇರಿಕೊಂಡ. ಹೀಗಾಗಿ ಶರ್ಮರದು ಆಗ ಸಂತುಷ್ಟ ಜೀವನವಾಗಿತ್ತು. ಮನೆಗೆ ಬಂದವರಿಗೆ ಕಾಫಿ, ಕಷಾಯ ಯಾವುದನ್ನಾದರೂ ಕೊಡದೇ ಕಳಿಸುತ್ತಲೇ ಇರಲಿಲ್ಲ. ಒಂದೆರಡು ವರ್ಷಗಳ ಅನಂತರ ಗಿರಿನಗರದಲ್ಲೇ ಮನೆಯನ್ನು ಬದಲಾಯಿಸಿದರೂ ಶರ್ಮರಿಗೆ ತೊಂದರೆಯಾಗಲಿಲ್ಲ. ಅಡುಗೆಯ ಜಾನಕಮ್ಮನಿಗೆ ಆರೋಗ್ಯ ಕೆಟ್ಟು ಊರಿಗೆ ಹೋದರೂ ಅವರ ಹಿರಿಯ ಸೊಸೆ ಮಾವನ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತುಕೊಂಡು ಸೇವೆ ಮಾಡಿದರು. ಹಿರಿಯ ಮಗ ಸದಾನಂದ ಬ್ಯಾಂಕ್ ಸೇವೆಯಿಂದ ನಿವೃತ್ತರಾದ ಮೇಲೆ ಸದ್ಯ ಮೈಸೂರಿನಲ್ಲಿ ಮನೆ ಮಾಡಿದ್ದಾರೆ. ಅಲ್ಲಿ ಶರ್ಮರು ಮಗ ಮತ್ತು ಸೊಸೆಯೊಡನೆ ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ. ಬೆಂಗಳೂರಿನಲ್ಲಿದ್ದಂತೆ ಅನೇಕ ವರ್ಷಗಳಿಂದ ಅವರು ಸಂಪಾದಿಸಿದ ಶಿಷ್ಯರ, ಅಭಿಮಾನಿಗಳ ಗುಂಪು ಪದೇ ಪದೇ ಬಂದು ಅವರನ್ನು ಭೇಟಿ ಮಾಡುತ್ತಿಲ್ಲ ನಿಜ. ಆದರೆ ದಿನಕ್ಕೆ ಒಬ್ಬಿಬ್ಬರಾದರೂ ಬರುತ್ತಾರೆ. ಈ ವಯಸ್ಸಿನಲ್ಲಿ ಅವರಿಗೆ ಅತ್ಯವಶ್ಯವಾದ ವಿಶ್ರಾಂತಿ ಸಿಗುತ್ತಿದೆ. ಅದೇ ಸಮಾಧಾನದ ವಿಷಯ.

ಪ್ರಾಚೀನ ವಿದ್ಯಾಭ್ಯಾಸ ಕ್ರಮದಲ್ಲಿ ಗುರು ಶುಶ್ರೂಷೆ ಒಂದು ಅವಿಭಾಜ್ಯ ಅಂಗ. ಅನೇಕ ವಿದ್ವಾಂಸರು ತಮ್ಮ ಶಿಷ್ಯರಿಂದ ಸಣ್ಣಪುಟ್ಟ ಕೆಲಸಗಳನ್ನು ಮಾಡಿಸಿಕೊಳ್ಳುತ್ತಿದ್ದರು. ಈಗಲೂ ಮಾಡಿಸಿಕೊಳ್ಳುತ್ತಿದ್ದಾರೆ. ಈ ವಿಷಯದಲ್ಲೂ ರಂಗನಾಥಶರ್ಮರು ಅಪವಾದ. ಅನಿವಾರ್ಯವಾದ ಸಂದರ್ಭದಲ್ಲಿ ಮಾತ್ರ ಅವರು ಶಿಷ್ಯರ ಸಹಾಯ ಬಯಸುತ್ತಿದ್ದರು. ಅದೂ ಅವರಿಗೆ ಯಾವುದೇ ರೀತಿಯಲ್ಲೂ ಭಾರವಾಗದಂತೆ. ವರ್ಷದಲ್ಲಿ ಒಂದೆರಡು ಬಾರಿ ಅವರು ತಮ್ಮ ಊರಿಗೆ (ಸೊರಬಕ್ಕೆ) ಹೋಗಿ ಬರುತ್ತಿದ್ದರು. ಆಗ ಬೆಂಗಳೂರಿನಿಂದ ಸಾಗರದವರೆಗೆ ರೇಲ್ವೆ ರಿಜರ್ವೇಶನ್ ಮಾಡಿಸಬೇಕಾಗುತ್ತಿತ್ತು. ಅದಕ್ಕಾಗಿ ವಿದ್ಯಾರ್ಥಿಗಳನ್ನು

ಕಳುಹಿಸುತ್ತಿದ್ದರು. ಆಗ ರೇಲ್ವೆ ದರದೊಡನೆ ವಿದ್ಯಾರ್ಥಿಗಳಿಗೆ ಸ್ಟೇಶನ್‌ವರೆಗೆ ಹೋಗಿಬರಲು ಸಿಟಿಬಸ್ ಚಾರ್ಜನ್ನು ಸ್ವಲ್ಪ ಹೆಚ್ಚಾಗಿಯೇ ಕೊಟ್ಟು ಕಳುಹಿಸುತ್ತಿದ್ದರು. ವಿದ್ಯಾರ್ಥಿಗಳು ಅನಾರೋಗ್ಯದಿಂದಾಗಿ ತರಗತಿಗೆ ಬಾರದೇ ಇದ್ದರೆ ತಾವೇ ಹಾಸ್ಟೆಲ್‌ವರೆಗೆ ಹೋಗಿ ವಿಚಾರಿಸಿಕೊಂಡು ಬರುತ್ತಿದ್ದರು. ಒತ್ತಾಯಪೂರ್ವಕವಾಗಿ ಸ್ವಲ್ಪ ಹಣವನ್ನೂ ವಿದ್ಯಾರ್ಥಿಗಳ ಕೈಯಲ್ಲಿಡುತ್ತಿದ್ದರು. ತಮ್ಮ ಶಿಷ್ಯಪ್ರಶಿಷ್ಯರು ಯಾರಾದರೂ ಪರೀಕ್ಷೆಗಳಲ್ಲಿ, ಸ್ಪರ್ಧೆಗಳಲ್ಲಿ ಸಂಮಾನಿತರಾದರೆ ತಮ್ಮ ಮಕ್ಕಳಿಗೇ ಸಂಮಾನವಾದಷ್ಟು ಸಂತೋಷ ಇವರಿಗೆ. ಇಂದೂ ಸಹ ಶಿಷ್ಯರ ಯೋಗಕ್ಷೇಮವನ್ನು ಆಗಾಗ್ಗೆ ವಿಚಾರಿಸುತ್ತಲೇ ಇರುತ್ತಾರೆ. ಒಮ್ಮೆ ಅವರ ಪ್ರಶಿಷ್ಯನೊಬ್ಬ ಅವರ ಮನೆಗೆ ಬಂದಿದ್ದ. ಆತ ಶಾಸ್ತ್ರವೇದಗಳೆರಡರಲ್ಲಿಯೂ ಪಟುವಾಗುತ್ತಿರುವುದನ್ನು ಗಮನಿಸಿ ಒಂದು ಒಳ್ಳೆಯ ಜರಿ ಶಾಲನ್ನು ಹೊದಿಸಿ ಆಶೀರ್ವದಿಸಿದರು. ಕೆಲವು ದಿನಗಳಲ್ಲಿ ಆ ಶಾಲು ಕಳೆದುಹೋಯಿತು. ದೊಡ್ಡವರು ಆಶೀರ್ವಾದ ನೀಡಿಕೊಟ್ಟ ಶಾಲು ಕಳೆದುಹೋಯಿತೆಂದು ಆತ ತುಂಬಾ ನೊಂದುಕೊಂಡ. ಇದು ಶರ್ಮರಿಗೆ ಗೊತ್ತಾಗಿ ತಮ್ಮ ಶಿಷ್ಯರಾದ ಮಹಾಬಲೇಶ್ವರ ಭಟ್ಟರಲ್ಲಿ ಹೇಳಿದರು – "ಆ ನಿನ್ನ ಶಿಷ್ಯನಿಗೆ ನಮ್ಮ ಮನೆಗೆ ಬರಲು ಹೇಳು. ಶಾಲು ಕಳೆದುಕೊಂಡಿದ್ದಾನಂತೆ. ಇನ್ನೊಂದು ಶಾಲು ಕೊಡುತ್ತೇನೆ. ಆದರೆ ಈ ವಿಷಯ ಹೇಳಬೇಡ. ನಮ್ಮ ಮನೆಗೆ ಬರದೇ ಇದ್ದಾನು." ಹೀಗೆ ಆತನನ್ನು ಮನೆಗೆ ಕರೆಸಿ ಶಾಲು ಹೊದೆಸಿ ಆಶೀರ್ವದಿಸಿದರು. ಓದುವ ವಿದ್ಯಾರ್ಥಿಗಳನ್ನು ಕಂಡರೆ ಅವರಿಗೆ ಅಷ್ಟು ಅಕ್ಕರೆ.

ಅನೇಕ ಸಂಘ ಸಂಸ್ಥೆಗಳು ಶ್ರೀ ಶರ್ಮರನ್ನು ಗೌರವಿಸಿವೆ. ಬಿರುದು ಬಾವಲಿಗಳನ್ನು ನೀಡಿವೆ. ಮೊದಮೊದಲು ಅವರಿಗೆ ಈ ಸಂಮಾನಗಳು ಸಂತೋಷ ಕೊಡುತ್ತಿದ್ದವೊ ಏನೊ. ಆದರೆ ಕೊನೆಕೊನೆಗೆ ಅವುಗಳ ವಿಷಯದಲ್ಲಿ ನಿರ್ವಿಕಾರಭಾವನೆ. ಒಮ್ಮೆ ತಿರುಪತಿ ರಾಷ್ಟ್ರೀಯ ಸಂಸ್ಕೃತವಿದ್ಯಾಪೀಠವು ಅವರಿಗೆ 'ಮಹಾಮಹೋಪಾಧ್ಯಾಯ' ಬಿರುದನ್ನು ನೀಡಿ ಸಂಮಾನಿಸಿತು. ಆಗ ಅವರನ್ನು ಕಂಡು ನಮಸ್ಕರಿಸಿ ಬರಲು ಅವರ ಶಿಷ್ಯರಾದ ಶ್ರೀಮಾನ್ ಮಹಾಬಲೇಶ್ವರ ಭಟ್ಟ ಮತ್ತು ಶ್ರೀ ಸೋ.ತಿ. ನಾಗರಾಜ ಇಬ್ಬರೂ ಅವರ ಮನೆಗೆ ಹೋದರು. ಕುಶಲ ಪ್ರಶ್ನೆಗಳಾದ ಮೇಲೆ ತಮಗೆ ಮಹಾಮಹೋಪಾಧ್ಯಾಯ ಪದವಿ ನೀಡಿದ್ದಾರೆಂದು ಗೊತ್ತಾಯಿತು. ತಮ್ಮನ್ನು ನೋಡಿ ಹೋಗೋಣವೆಂದು ಬಂದೆವು ಅಂದರು. ಅದಕ್ಕೆ ಶರ್ಮರು – ಕೊಟ್ಟಿದ್ದಾರೆ. ಹಿಂದೆ ಹಾನಗಲ್ ವಿರೂಪಾಕ್ಷಶಾಸ್ತ್ರಿಗಳಿಗೂ

ಕೊಟ್ಟಿದ್ದರು. (ವಿರೂಪಾಕ್ಷಶಾಸ್ತ್ರಿಗಳು ಅಖಿಲಭಾರತ ಮಟ್ಟದ ವಿದ್ವಾಂಸರು. ಶೃಂಗೇರಿಯ ಪೀಠಾಧೀಶ್ವರರಾಗಿದ್ದ ಚಂದ್ರಶೇಖರಭಾರತಿಮಹಾಸ್ವಾಮಿಗಳಿಗೂ ಪಾಠ ಹೇಳಿದವರು) ಈಗ ನನಗೂ ಕೊಟ್ಟಿದ್ದಾರೆ. ಕಾಲ ಇಲ್ಲಿಗೆ ಬಂದಿದೆ ಏನು ಮಾಡುವುದು? ಶಿಷ್ಯರು – ತಮ್ಮಂಥವರೂ ಹೀಗೆ ಹೇಳಿದರೆ ಇಂಥ ಪದವಿಯನ್ನು ಇನ್ನಾರಿಗೆ ನೀಡಬೇಕು?

ಶರ್ಮರು – ನನಗೆ ಇದು ಬಹಳ ಮುಜುಗರವನ್ನುಂಟುಮಾಡಿದೆ. ಇನ್ನು ನೀವೆಲ್ಲ ನಾವು ಮಹಾಮಹೋಪಾಧ್ಯಾಯರ ಶಿಷ್ಯರು ಎಂದು ಹೇಳಿಕೊಳ್ಳಬಹುದು – ಎಂದು ಹೇಳಿ ದೊಡ್ಡದಾಗಿ ನಕ್ಕರು – ಅವರು ಸ್ವಾಭಾವಿಕವಾಗಿಯೇ ಯಾವುದೇ ಸಂಮಾನ ಪ್ರಶಸ್ತಿಗಳ ಆಕಾಂಕ್ಷಿಗಳಲ್ಲ. ಸಿಕ್ಕಾಗ ಸಂತೋಷ, ಸಿಗದಿದ್ದಾಗ ವ್ಯಥೆ ಯಾವುನ್ನೂ ಹೊಂದದ ನಿರ್ವಿಕಾರ ಭಾವನೆ. ಆದರೂ ಅನೇಕ ಪ್ರಶಸ್ತಿಗಳು ಅವರನ್ನು ಬೆನ್ನಟ್ಟಿ ಬಂದಿವೆ.

ಜಿಜ್ಞಾಸಾಭಾವ ಕೂಡ ಅವರ ಹುಟ್ಟುಗುಣಗಳಲ್ಲೊಂದು. ಯಾವುದಾದರೊಂದು ವಿಷಯ ಅವರ ತಲೆಯನ್ನು ಹೊಕ್ಕುಬಿಟ್ಟರೆ ಸಾಕು ಸದಾ ಅದರ ಬಗ್ಗೆಯೇ ಯೋಚಿಸತೊಡಗುತ್ತಾರೆ. ಅದು ಯಾವುದಾದರೊಂದು ಪದದ ಅರ್ಥದ ಬಗ್ಗೆ ಆಗಿರಬಹುದು, ವ್ಯಾಕರಣ ಅಥವಾ ಮತ್ತಾವುದೇ ಶಾಸ್ತ್ರದಲ್ಲಿ ಬಂದ ಸಮಸ್ಯೆಯ ಬಗ್ಗೆ ಆಗಿರಬಹುದು, ಉತ್ತರ ಸಿಗುವವರೆಗೂ ಸಮಾಧಾನವಿಲ್ಲ. ಒಮ್ಮೊಮ್ಮೆ ಆಯಾ ವಿಷಯಕ್ಕೆ ಸಂಬಂಧಪಟ್ಟ ಪರಿಚಿತ ವಿದ್ವನ್ಮಿತ್ರರಿಗೆ ಫೋನ್ ಮಾಡುತ್ತಾರೆ. "ನಿಮ್ಮಲ್ಲಿ ಇದಕ್ಕೆ ಏನು ಅರ್ಥ?" ಅವರಿಂದ ಉತ್ತರ ಪಡೆದು ತಮ್ಮ ವಿಚಾರವನ್ನು ಮುಂದುವರಿಸುತ್ತಾರೆ. ಪ್ರಪಂಚವನ್ನು ಬೆರಗುಗಣ್ಣುಗಳಿಂದ ನೋಡಿ ಅದರ ರಹಸ್ಯವನ್ನರಸುವ ಕುತೂಹಲ ಪ್ರವೃತ್ತಿಯನ್ನು ಇನ್ನೂ ಅವರು ಉಳಿಸಿಕೊಂಡಿದ್ದಾರೆ. ಒಮ್ಮೆ ಮಾತಿನಲ್ಲಿ ತಮ್ಮ ಬಾಲ್ಯದ ಘಟನೆಯೊಂದನ್ನು ವಿವರಿಸಿದ್ದು ಹೀಗೆ – ಇದು ಅವರ ಹದಿನೈದನೆಯ ವಯಸ್ಸಿಗಿಂತ ಮುಂಚೆ. ಅವರಿಗೊಬ್ಬ ಆಪ್ತ ಸ್ನೇಹಿತನಿದ್ದನಂತೆ. ನಾನಾ ವಿಷಯಗಳ ಬಗ್ಗೆ ಅವರಿಬ್ಬರೂ ಹರಟುತ್ತಿದ್ದರಂತೆ. ಒಮ್ಮೆ ಸಾವಿನ ವಿಷಯ ಬಂತು. ಸತ್ತಮೇಲೆ ಏನಾಗುತ್ತದೆ? ಸತ್ತವನು ಎಲ್ಲಿಗೆ ಹೋಗುತ್ತಾನೆ? ಇಬ್ಬರು ನಚಿಕೇತರೂ ತುಂಬಾ ತಲೆ ಕೆಡಿಸಿಕೊಂಡರು. ಉತ್ತರ ಸಿಗಲಿಲ್ಲ. ಕೊನೆಗೊಂದು ಒಪ್ಪಂದ ಮಾಡಿಕೊಂಡರು. ನಮ್ಮಿಬ್ಬರಲ್ಲಿ ಯಾರೇ ಮೊದಲು ಸಾಯಲಿ ಅವರು ಬದುಕಿರುವವನ ಬಳಿ

ಬಂದು ಸಾವಿನ ಅನಂತರದ ವಿಷಯುವನ್ನೆಲ್ಲ ಹೇಳಬೇಕು ಎಂದು. ಇದಾದ ಕೆಲವು ತಿಂಗಳುಗಳಲ್ಲಿ ಇವರ ಆ ಮಿತ್ರ ತೀರಿಕೊಂಡನಂತೆ. ದಹನವೂ ಆಯಿತು. ಮಾರನೆಯ ದಿನವಿಡೀ ಶರ್ಮರು ಅವನಿಗಾಗಿ ಕಾದರಂತೆ. ಅವನು ಬರಲೇ ಇಲ್ಲ. ಮೂರನೆಯ ದಿನ ಇವರೇ ಅವನನ್ನು ದಹಿಸಿದ ಸ್ಥಳಕ್ಕೆ ಯಾರೂ ಕಾಣದಂತೆ ಹೋಗಿ ಅವನನ್ನು ಕರೆದರಂತೆ. 'ಎಲ್ಲಿದ್ದೀಯೊ? ನಾನು ಬಂದಿದ್ದೇನೆ. ಏನು ಮಾಡುತ್ತಿದ್ದೀಯೆ? ತಿಳಿಸೊ. ನಮ್ಮ ಒಪ್ಪಂದ ಮರೆತೆಯೇನೊ?.." ಏನು ಕೇಳಿದರೂ ಉತ್ತರವಿಲ್ಲ. ಅದೇ ರೀತಿ ಇನ್ನೂ ಎರಡು ಮೂರು ದಿನ ಹೋಗಿ ಕೂಗಿ ಕರೆದರಂತೆ. ಉತ್ತರ ಸಿಗಲಿಲ್ಲ. ಕೊನೆಗೆ ಆ ಪ್ರಯತ್ನವನ್ನು ಬಿಟ್ಟರಂತೆ! ಈಗ ಅದನ್ನು ನೆನೆಸಿಕೊಂಡರೆ ನಗು ಬರುತ್ತದೆ ಎನ್ನುತ್ತಾರೆ. ಆದರೆ ಈ ಜಿಜ್ಞಾಸಾ ಪ್ರವೃತ್ತಿಯೇ ಮುಂದೆ ಅವರನ್ನು ಮಹಾವಿದ್ವಾಂಸರನ್ನಾಗಿ ಮಾಡಿತು ಎಂಬುದು ಸುಳ್ಳಲ್ಲ.

ಅವರು ಸಂಸ್ಕೃತ ವಿದ್ವಾಂಸರಾದರೂ ಪುಸ್ತಕದಲ್ಲೇ ಮುಳುಗಿದ್ದವರಲ್ಲ. ಸುತ್ತಮುತ್ತಲಿನ ಪ್ರಪಂಚವನ್ನು ಗಮನಿಸುವವರು, ದೇಶನಿಷ್ಠೆಯುಳ್ಳವರು. ತಾವು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಲಿಲ್ಲವಾದರೂ ಹಾಗೆ ಭಾಗವಹಿಸಿದವರಿಗೆ ಕೈಲಾದ ಸಹಾಯ ಮಾಡುತ್ತಿದ್ದರು. ಖಾದಿಯನ್ನೇ ಧರಿಸುತ್ತಿದ್ದರು. ತಲೆಯ ಮೇಲೊಂದು ಗಾಂಧೀಟೋಪಿ ಇರುತ್ತಿತ್ತಂತೆ. ಇವರು ಸಂಸ್ಕೃತ ಕಾಲೇಜಿಗೆ ಪಾಠ ಮಾಡಲು ಹೋಗುವಾಗ ಕಂಪೌಂಡ್ ಮೇಲೆ ಕುಳಿತು ಹರಟೆ ಹೊಡೆಯುತ್ತಿದ್ದ ಪಡ್ಡೆ ಹುಡುಗರು ಇವರನ್ನು ಕಂಡು ಹಾಸ್ಯ ಮಾಡಿಕೊಳ್ಳುತ್ತಿದ್ದರಂತೆ. ಆದರೆ ಇವರದನ್ನು ಲಕ್ಷ್ಯಕ್ಕೆ ತಂದುಕೊಳ್ಳುತ್ತಿರಲಿಲ್ಲ. ಒಂದು ದಿನ ಪರಿಚಿತರಾದ ಸದ್ಗೃಹಸ್ಥರೊಬ್ಬರು ಇವರನ್ನು ಕಂಡು 'ಸ್ವಾಮಿ! ಇನ್ನು ಮುಂದೆ ನೀವು ಗಾಂಧೀಟೋಪಿ ಧರಿಸಬೇಡಿ' ಎಂದರಂತೆ. ಇವರು ಆಶ್ಚರ್ಯದಿಂದ ಯಾಕೆ ಎಂದರು. ಅವರು 'ಒಂದು ಕಾಲಕ್ಕೆ ಅದು ತ್ಯಾಗ, ದೇಶಭಕ್ತಿಯ ಸಂಕೇತವಾಗಿತ್ತು. ಈಗ ಅದು ಭೋಗ, ಭ್ರಷ್ಟತೆಯ ಗುರುತಾಗಿದೆ. ಅದನ್ನು ಧರಿಸಿದವರನ್ನು ಕಂಡು ಜನ ನಗುತ್ತಾರೆ. ಅದು ನಿಮ್ಮಂಥವರ ತಲೆಯ ಮೇಲಿರಬಾರದು' ಎಂದರು. ಶರ್ಮರಿಗೆ ಏನೆನಿಸಿತೊ ಗೊತ್ತಿಲ್ಲ ಅಂದಿನಿಂದ ಟೋಪಿಯನ್ನು ಧರಿಸಲು ಹೋಗಲಿಲ್ಲ. 'ಅವರು ಹೇಳಿದ್ದಕ್ಕೇ ನಾನು ಬಿಟ್ಟೆ ಅಂತಲ್ಲ. ನಮ್ಮ ದೇಶಭಕ್ತಿಯನ್ನು ಟೋಪಿಯ ಮೂಲಕವೇ ಪ್ರದರ್ಶಿಸಬೇಕೇಕೆ? ಎನ್ನಿಸಿತು, ಬಿಟ್ಟುಬಿಟ್ಟೆ' ಎನ್ನುತ್ತಾರೆ.

ಶರ್ಮರ ವಿದ್ಯೆ ವಿನಯಗಳು ಅವರಿಗೆ ಅನೇಕ ದೊಡ್ಡ ಮನುಷ್ಯರ ಪ್ರೀತ್ಯಾದರಗಳನ್ನು ಗಳಿಸಿಕೊಟ್ಟಿವೆ. ಆ ದೊಡ್ಡವರಲ್ಲಿ ಮೊದಲು ಎಣಿಸಬೇಕಾದವರು ಡಿವಿಜಿಯವರು. ಕನ್ನಡದ ಮೇರು ಪರ್ವತವಾದ ಅವರು ಸುಲಭವಾಗಿ ಎಲ್ಲರನ್ನೂ ಮೆಚ್ಚತಕ್ಕವರಲ್ಲ. ಅಂಥವರು ಶರ್ಮರ ವಿದ್ವತ್ತಿಗೆ ಬೆರಗಾದರು. ಶರ್ಮರ ಸಂಪರ್ಕವನ್ನು ಅವರಾಗಿಯೇ ಬಯಸಿ ಪಡೆದರು. ಅವರಿಬ್ಬರಲ್ಲಿ ಪರಸ್ಪರ ಅನೇಕ ವಿಷಯಗಳಲ್ಲಿ ಕೊಡು–ತೆಗೆದುಕೊಳ್ಳುವಿಕೆ ನಡೆಯಿತು. ಯಾರಿಗೆ ಯಾರಿಂದ ಎಷ್ಟು ಲಾಭವಾಯಿತು ಹೇಳಲು ಬಾರದು. ಆದರೆ ಇವರಿಬ್ಬರ ಸಮಾಗಮದಿಂದ ಕನ್ನಡವಾಙ್ಮಯಕ್ಕೆ ಲಾಭವಾಯಿತು. ರಾಮಾಯಣ ಭಾಗವತದಂಥ ಶ್ರೇಷ್ಠ ಗ್ರಂಥಗಳ ಉತ್ತಮ ಅನುವಾದ ಕನ್ನಡಿಗರಿಗೆ ಸಿಕ್ಕಿತು.

"ಜೀವೇಮ ಶರದಃಶತಂ" ಎಂಬ ಋಷಿಗಳ ಆಶಯವನ್ನು ಪೂರ್ಣಗೊಳಿಸುತ್ತಿರುವ ರಂಗನಾಥಶರ್ಮರ ಶರೀರ ಬಳಲಿದೆ. ಆದರೆ ಅವರ ಬುದ್ಧಿ ಮಾತ್ರ ಇನ್ನೂ ಎಳೆಯದಾಗಿದೆ. ವ್ಯಾಕರಣಶಾಸ್ತ್ರ ಇನ್ನೂ ಅವರ ತಲೆಯಲ್ಲಿ ನರ್ತಿಸುತ್ತಿದೆ. ಕೆಲವೇ ದಿನಗಳ ಹಿಂದೆ ಅವರ ಶಿಷ್ಯರಾದ ಜಿ. ಮಹಾಬಲೇಶ್ವರ ಭಟ್ಟರು ಇನ್ನೊಬ್ಬ ವಿದ್ವಾಂಸರೊಡನೆ ಶರ್ಮರನ್ನು ಕಾಣಲು ಹೋಗಿದ್ದರಂತೆ. ಸ್ವಲ್ಪ ಹೊತ್ತು ಸಂಭಾಷಣೆಯಾದ ನಂತರ ಆ ವಿದ್ವಾಂಸರು ಹೊರಡಲು ಬಯಸಿದರಂತೆ. ಆಗ ಭಟ್ಟರು ಗುರುಗಳಿಗೆ ಇವರನ್ನು ಹೊರಗೆ ಕಳಿಸಿ ಬರುತ್ತೇನೆ ಎನ್ನುವುದಕ್ಕೆ ಏತಾನ್ ಸಂಪ್ರೇಷ್ಯ ಆಗಮಿಷ್ಯಾಮಿ ಎಂದು ಸಂಸ್ಕೃತದಲ್ಲಿ ಹೇಳಿದರಂತೆ. ಕೂಡಲೇ ಶರ್ಮರು 'ಸಂಪ್ರೇಷ್ಯ' ಹಾಂ ಹಾಂ 'ಪ್ರೇಷಯಿತ್ವಾ' ಅಂತಲೂ ಆಗಬಹುದಲ್ಲವೆ? ಎಂದರಂತೆ! ವ್ಯಾಕರಣದ ಸಣ್ಣ ಸಣ್ಣ ವಿಷಯವೂ ಅವರಿಗೆ ಬೇಕೆಂದಾಗ ಸಿಗುವಂತೆ ಮಿದುಳಿನಲ್ಲಿ ವ್ಯವಸ್ಥಿತವಾಗಿ ಇಟ್ಟಂತೆ ತೋರುತ್ತದೆ.

ಶರ್ಮರ ಇನ್ನೊಂದು ವೈಶಿಷ್ಟ್ಯವೆಂದರೆ ಅಭಿಪ್ರಾಯದಲ್ಲಿ ಸ್ಪಷ್ಟತೆ. ಎಲ್ಲ ವಿಷಯದಲ್ಲಿಯೂ ಅವರು ಸ್ಪಷ್ಟವಾದ ಧೋರಣೆಯನ್ನು ಹೊಂದಿದ್ದಾರೆ. ಸಂಶಯಕ್ಕೆಡೆಯಿಲ್ಲದಂತೆ ವಿಷಯವನ್ನು ನಿಶ್ಚಯ ಮಾಡಿಕೊಂಡಿರುತ್ತಾರೆ. ಏನೇ ಆಡುವದಿದ್ದರೂ ಏನೇ ಬರೆಯುವದಿದ್ದರೂ ಅದಕ್ಕೆ ಅನುಸಾರವಾಗಿಯೇ ಇರುತ್ತದೆ. ಅವರು ಆಸ್ತಿಕರು. ಆದರೆ ಅವರ ಆಸ್ತಿಕತೆ ವಿಚಾರದ ಮೇಲೆ ನಿಂತಿದ್ದು, ಮೂಢನಂಬಿಕೆ ಅವರದಲ್ಲ. ತಮಗೆ ಗೊತ್ತಿದ್ದ, ವಿಷಯವನ್ನು ಸ್ಪಷ್ಟವಾಗಿ ಮುಂದಿಡುತ್ತಾರೆ. ತಮ್ಮ ಅನುಭವಕ್ಕೆ ಬಾರದ ಆದರೆ ಬಹುಜನರು ಒಪ್ಪಿದ

ವಿಷಯುವನ್ನು ಅದೇ ರೀತಿಯಲ್ಲಿ ಜನರ ಮುಂದಿಡುತ್ತಾರೆ. ಸುಂದರಕಾಂಡದ ಪೀಠಿಕೆಯಲ್ಲಿ ಅವರು ಬರೆದ ಎರಡು ಪರಿಚ್ಛೇದಗಳನ್ನು ನೋಡಬಹುದು.

1. ವಾಲ್ಮೀಕಿಗಳು ಚಿತ್ರಿಸಿದ ನೀತಿ ನಿಲುವುಗಳು ನಮ್ಮ ಅಂತರಂಗದ ಮೇಲೆ ಮಹತ್ತರವಾದ ಪ್ರಭಾವವನ್ನು ಬೀರುತ್ತವೆ. ಧರ್ಮಬೋಧೆ, ಹಿತೋಪದೇಶಗಳು ಸಕ್ಕರೆಯಲ್ಲಿ ಹುದುಗಿಸಿದ ಔಷಧದಂತೆ ಅಂತರಂಗವನ್ನು ಪ್ರವೇಶಿಸಿ ಕಾಮಕ್ರೋಧಾದಿ ಮನೋರೋಗಗಳನ್ನು ನಾಶಪಡಿಸುತ್ತವೆ.... ನಮಗರಿವಿಲ್ಲದಂತೆ ನಮ್ಮ ಅಂತಃಕರಣ ಶುದ್ಧವಾಗುತ್ತ ಹೋಗುತ್ತದೆ.

2. ರಾಮಾಯಣದ ಪಾರಾಯಣದಿಂದ ನಾನಾ ಬಗೆಯ ಸಾಂಸಾರಿಕ ಕಷ್ಟಗಳು ನೀಗುತ್ತವೆಯೆಂದೂ ಭಗವಂತನ ಅನುಗ್ರಹಕ್ಕೆ ಪಾತ್ರರಾಗುತ್ತೇವೆಂದೂ ಆಸ್ತಿಕರು ದೃಢವಾಗಿ ನಂಬಿದ್ದಾರೆ.

ರಂಗನಾಥಶರ್ಮರು ವಿದ್ಯೆಯಲ್ಲಿ ಎಷ್ಟು ಉನ್ನತರೊ, ಗುಣದಲ್ಲಿಯೂ ಅಷ್ಟೇ ಉನ್ನತರು. ಅವರನ್ನು ನೋಡದವರಿಗೆ, ನೋಡಿದರೂ ಸಮೀಪದ ಒಡನಾಟ ಇಲ್ಲದವರಿಗೆ ಅವರ ನಿರ್ಮಲ ಮನಸ್ಸನ್ನೂ, ಉದಾರತೆಯನ್ನೂ ಪರಿಚಯಿಸುವುದು ಕಷ್ಟ. ಸಜ್ಜನರಿಗೂ, ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಿಯವಾದ ವ್ಯಕ್ತಿತ್ವ ಅವರದು. ಅವರೊಡನೆ ಕಳೆದ ಕೆಲ ನಿಮಿಷಗಳು ಕೂಡ ನಮ್ಮ ಮೇಲೆ ವಿಶೇಷ ಪ್ರಭಾವವನ್ನು ಬೀರಬಲ್ಲವಾಗಿದ್ದವು. ಅಂಥ ಕೆಲವು ಪ್ರಸಂಗಗಳು ಇಲ್ಲಿವೆ. ಈ ಘಟನೆಗಳು ಅತ್ಯಂತ ಚಿಕ್ಕವುಗಳಾದರೂ ಶರ್ಮರ ವ್ಯಕ್ತಿತ್ವವನ್ನು ಅರ್ಥಮಾಡಿಕೊಳ್ಳುವ ನಿಟ್ಟಿನಲ್ಲಿ ಸಹಾಯವಾಗಬಲ್ಲವೆಂದು ಅವುಗಳನ್ನು ನಾನಿಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

ಸಂಸ್ಕೃತ ಭಾರತಿಯ ಬೆಂಗಳೂರಿನ ಶಾಖೆಯಾದ 'ಅಕ್ಷರಂ' ಕಾರ್ಯಾಲಯದ ಮುಖ್ಯಸ್ಥರಾದ ಜನಾರ್ದನ ಹೆಗಡೆ ತಮ್ಮ ಅನುವಾದ ಸಾಹಿತ್ಯಕ್ಕಾಗಿ ಕೇಂದ್ರ ಅಕಾಡೆಮಿಯ ಪ್ರಶಸ್ತಿಗೆ ಭಾಜನರು. ಅವರು ಶರ್ಮರ ಪ್ರಥಮ ಪರಿಚಯದ ಒಂದು ಸಂದರ್ಭವನ್ನು ಹೀಗೆ ನೆನೆಸಿಕೊಳ್ಳುತ್ತಾರೆ. ಮಧ್ಯಾಹ್ನದ ಸಮಯದಲ್ಲಿ ಬೆಂಗಳೂರಿನ ಶಂಕರಪುರಂ ಪ್ರದೇಶದಲ್ಲಿ ಶರ್ಮರು ನಡೆದುಕೊಂಡು ಹೋಗುತ್ತಿದ್ದರು. ಆಗ ಅವರು ವಿಜಯನಗರದಲ್ಲಿ ವಾಸವಾಗಿದ್ದರು. ಜನಾರ್ದನ ಹೆಗಡೆಯವರು ಅವರನ್ನು ಕಂಡು 'ನಮಸ್ಕಾರ! ತಾವು ಇಲ್ಲಿ?' ಎಂದು ಕೇಳಿದರಂತೆ. ಅದಕ್ಕೆ ಶರ್ಮರು "ವೇದಾಂತದಲ್ಲಿ ಒಂದು ಸಣ್ಣ ಸಂದೇಹ ಉಂಟಾಯಿತು.

ಇಲ್ಲೇ ಶಂಕರಮಠದಲ್ಲಿ ಕೃಷ್ಣ ಜೋಯಿಸರು ಇದ್ದಾರಲ್ಲ, ಅವರನ್ನು ಕಂಡು ಸಂದೇಹ ಪರಿಹರಿಸಿಕೊಳ್ಳೋಣ ಎಂದು ಬಂದೆ" ಎಂದರು. ಮಧ್ಯಾಹ್ನದ ಬಿರುಬಿಸಿಲು! ಎಪ್ಪತ್ತು ವರ್ಷದ ವೃದ್ಧರು! ವಿಜಯನಗರದಿಂದ ಶಂಕರಪುರಕ್ಕೆ ವೇದಾಂತ ಶಾಸ್ತ್ರದ ಸಂದೇಹವೊಂದನ್ನು ನಿವಾರಿಸಿಕೊಳ್ಳಲು ಬಂದಿದ್ದಾರೆ! ಅವರ ಜ್ಞಾನ ಪಿಪಾಸೆಗೆ ಇದೊಂದು ಸಣ್ಣ ಉದಾಹರಣೆ.

ಸಂಸ್ಕೃತ ಭಾರತಿಯ ಹಿರಿಯ ಕಾರ್ಯಕರ್ತರೂ, ಸಂಸ್ಕೃತ ಸಂಭಾಷಣ ಶಿಬಿರಗಳಿಂದಾಗಿ ಸಂಸ್ಕೃತವಲಯದಲ್ಲಿ ಚಿರಪರಿಚಿತರೂ ಆದ ಚ.ಮೂ. ಕೃಷ್ಣಶಾಸ್ತ್ರಿಗಳು ತಮ್ಮ ಸ್ವಾರಸ್ಯಪೂರ್ಣ ಅನುಭವವನ್ನು ಹೀಗೆ ಬಿಚ್ಚಿಡುತ್ತಾರೆ. ಅವರೊಮ್ಮೆ ಶರ್ಮರ ಬಳಿಗೆ ಹೋಗಿ 'ತಾವು ನನಗೆ ವ್ಯಾಕರಣ ಪಾಠ ಹೇಳಿಕೊಡುತ್ತೀರಾ' ಎಂದು ಕೇಳಿದರಂತೆ. ಅದಕ್ಕೆ ಶರ್ಮರು ಸಂತೋಷದಿಂದ 'ಆಗಲಿ ಮನೆಗೆ ಬನ್ನಿ' ಎಂದು ಹೇಳಿ ಒಂದು ಶುಭದಿನದಲ್ಲಿ ಸಿದ್ಧಾಂತಕೌಮುದಿಯನ್ನು ಪ್ರಾರಂಭಿಸಿದರಂತೆ. ಆಗ ಕೃಷ್ಣಶಾಸ್ತ್ರಿಗಳು ಹಗಲು ಇರುಳು ಎನ್ನದೆ ಸಂಸ್ಕೃತಕಾರ್ಯಕ್ಕಾಗಿ ಊರೆಲ್ಲ ಸುತ್ತುತ್ತಿದ್ದರು. ಸಮಯಕ್ಕೆ ಸರಿಯಾಗಿ ಊಟ, ನಿದ್ದೆ ಇಲ್ಲದುದರಿಂದಾಗಿ ಪಾಠಕ್ಕೆ ಕುಳಿತಾಗ ತೂಕಡಿಕೆ ಬರುತ್ತಿತ್ತು. ಹೇಗೋ ಕಷ್ಟಪಟ್ಟು ತಡೆದುಕೊಳ್ಳುತ್ತಿದ್ದರು. ಒಂದು ದಿನ ಪಾಠ ನಡೆಯುತ್ತಿದ್ದಾಗ ಹಾಗೇ ಒಂದು ನಿಮಿಷ ಕಣ್ಣುಮುಚ್ಚಿತು. ಕಣ್ಣು ತೆರೆದು ನೋಡಿದಾಗ ಎದುರಿಗೆ ಶರ್ಮರು ಇರಲಿಲ್ಲ. 'ಅರೆ! ಈಗ ತಾನೆ ಇದ್ದರಲ್ಲ. ಎಲ್ಲಿ ಹೋದರು?' ಎಂದು ಇವರು ಚಡಪಡಿಸುತ್ತಿರುವಾಗಲೆ ಶರ್ಮರು ರೂಮನ್ನು ಪ್ರವೇಶಿಸಿದರು. ಅವರ ಕೈಯಲ್ಲಿ ಒಂದು ಟೀ ಕಪ್ಪು. ಅದನ್ನು ಶಾಸ್ತ್ರಿಗಳ ಕೈಗೆ ಕೊಡುತ್ತಾ ಹೇಳಿದರಂತೆ 'ಶಾಸ್ತ್ರಿಗಳೆ! ಸದ್ಯ ಟೀ ಕುಡಿಯಿರಿ. ತುಂಬಾ ದಣಿದಿದ್ದೀರಿ. ಒಂದು ವಾರ ವಿಶ್ರಾಂತಿ ತೆಗೆದುಕೊಳ್ಳಿ. ಆಮೇಲೆ ಬನ್ನಿ. ನಾನು ನಿಮಗೆ ಖಂಡಿತವಾಗಿ ಪಾಠ ಮಾಡುತ್ತೇನೆ' ಶಾಸ್ತ್ರಿಗಳಿಗೆ ಏನು ಹೇಳಲೂ ತೋಚದೆ ಮೂಕರಾದರಂತೆ!

ಸಂಸ್ಕೃತ ಕಾಲೇಜಿನಲ್ಲಿ ಒಮ್ಮೆ ನಡೆದ ಪ್ರಸಂಗ. ವೀರ ರಾಘವಾಚಾರ್ ಎನ್ನುವವರು ರಂಗನಾಥ ಶರ್ಮರ ಸಹೋದ್ಯೋಗಿಗಳು. ಒಮ್ಮೆ ಅವರಿಬ್ಬರಲ್ಲಿ ಯಾವುದೊ ಒಂದು ವಿಷಯದ ಬಗ್ಗೆ ಮತಭೇದವುಂಟಾಗಿ ಸ್ವಲ್ಪ ವಿಕೋಪಕ್ಕೆ ತಿರುಗಿತು. ಇಬ್ಬರೂ ಎತ್ತರಿಸಿದ ದನಿಯಲ್ಲಿ ಮಾತಿನ ವಿನಿಮಯ ಮಾಡಿಕೊಂಡರು. ಹೊರಗಡೆ ಇದ್ದ ಕಾಲೇಜು ವಿದ್ಯಾರ್ಥಿಗಳಿಗೆಲ್ಲ ಆಶ್ಚರ್ಯ. 'ಇದೇನು! ರಂಗನಾಥ

ಶರ್ಮರೂ ಇಷ್ಟು ದೊಡ್ಡದಾಗಿ ಜಗಳವಾಡುತ್ತಾರಾ!' ಎಂದು. ಸ್ವಲ್ಪ ಹೊತ್ತಿಗೆ ಜಗಳ ನಿಂತಿತು. ಆಮೇಲೆ ಶರ್ಮರು ಯಾರ ಮೂಲಕವೊ ಎರಡು ಲೋಟ ಹಾಲನ್ನು ತರಿಸಿದರು. ವೀರ ರಾಘವಾಚಾರ್ಯರನ್ನು ಕರೆದರು. "ರೀ ಆಚಾರ್ರೆ, ಬರ್ರಿ ಇಲ್ಲಿ. ಕೂತ್ಕೊಳ್ಳಿ. ಈ ಹಾಲನ್ನು ಕುಡಿದು ಸ್ವಲ್ಪ ತಂಪು ಮಾಡ್ಕೊಳ್ಳಿ" ಎಂದರು. ಸ್ವಲ್ಪ ಹೊತ್ತಿನಲ್ಲಿ ಏನೂ ಆಗಿಲ್ಲವೆಂಬಂತೆ ಇಬ್ಬರೂ ನಗು ನಗುತ್ತ ಮಹಡಿಯಿಂದ ಕೆಳಗೆ ಇಳಿದು ಬರುತ್ತಿದ್ದುದನ್ನು ನೋಡಿ ವಿದ್ಯಾರ್ಥಿಗಳಿಗೆಲ್ಲ ಮತ್ತೊಮ್ಮೆ ಆಶ್ಚರ್ಯ.

ಶರ್ಮರ ಆದರಾತಿಥ್ಯದ ಬಗ್ಗೆ ಸಂಸ್ಕೃತ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಮಲ್ಲೇಪುರಂ ವೆಂಕಟೇಶರವರು ಹೀಗೆ ಹೇಳುತ್ತಾರೆ – "1999ರ ಯುಗಾದಿ ಹಬ್ಬದ ಸಂಜೆ ಅವರು ವಾಸವಾಗಿದ್ದ ವಿಜಯನಗರದ ಮನೆಗೆ ನಾನೂ ಶತಾವಧಾನಿ ರಾ. ಗಣೇಶ ಇಬ್ಬರೂ ಹೋದೆವು. ನಮ್ಮನ್ನು ಕಂಡವರೇ ಶರ್ಮರು ಶುಭಾಶಯಗಳನ್ನು ಹೇಳಿ ಆದರಿಸಿದರು. ಕ್ಷೇಮ ಸಮಾಚಾರಗಳನ್ನು ವಿಚಾರಿಸಿಕೊಂಡರು. ಅನಂತರ ಮನೆಯ ಒಳಗೆ ಹೋಗಿ ಬಿಸಿ ಬಿಸಿ ಹೋಳಿಗೆಗಳನ್ನು ತಂದು ಅದರ ಮೇಲೆ ತುಪ್ಪವನ್ನು ಸುರಿದು ನಮ್ಮಿಬ್ಬರಿಗೂ ಕೊಟ್ಟರು. ನಾನು ಸಂಕೋಚಪಡುವಾಗ ನನ್ನ ಬಳಿ ಬಂದು 'ನೀವು ತರುಣರು. ಹಬ್ಬದ ದಿನ ಬಂದಿದ್ದೀರಿ. ಇದು ನನ್ನ ಭಾಗ್ಯ. ಸ್ವೀಕರಿಸಬೇಕು' ಎಂದರು. ಅವರ ಮಾತಿನಲ್ಲಿ ಹುದುಗಿದ್ದ ಆಳವಾದ ಪ್ರೀತಿ, ಬೆರಗು, ವಿನಯ ನನ್ನನ್ನು ವಿಸ್ಮಯಗೊಳಿಸಿತು."

ಮೇಲಿನ ಪ್ರಸಂಗಗಳಲ್ಲಿ ಕಂಡುಬಂದ ಶರ್ಮರ ವ್ಯಕ್ತಿತ್ವ ಕೇವಲ ಅವರ ಕಲಿತ ವಿದ್ಯೆಯ ಫಲವಾಗಿರದೆ, ಅರಗಿಸಿಕೊಂಡ ವಿದ್ಯೆಯ ಪರಿಣಾಮವಾಗಿತ್ತು. ಸುಭಾಷಿತಕಾರನೊಬ್ಬ ಹೇಳುತ್ತಾನೆ 'ಹಣ್ಣು ಬಿಟ್ಟ ಮರ ಬಾಗುತ್ತದೆ' ಎಂದು. ಶರ್ಮರು ವಿದ್ಯಾಫಲದಿಂದಾಗಿ ಬಾಗಿದ್ದರು. ಮಾಗಿದ್ದರೂ ವಿನಯ ಅವರ ಸಹಜ ಗುಣವೊ ಎಂಬಂತಾಗಿತ್ತು. 'ವಿದ್ಯಾ ದದಾತಿ ವಿನಯಂ' ಎಂಬ ಮಾತಿಗೆ ಪ್ರತ್ಯಕ್ಷ ಸಾಕ್ಷಿಯಾಗಿದ್ದರು.

***

# ಮಕ್ಕಳು, ಶಿಷ್ಯರು ಹಾಗೂ ಆಪ್ತರು ಕಂಡಂತೆ ಶ್ರೀ ಶರ್ಮರು

######

## ನಮ್ಮ ತಂದೆಯನ್ನು ನಾನು ಕಂಡಂತೆ

ಶ್ರೀಮತೀ ಎನ್.ಆರ್. ಜಯಶ್ರೀ.

ನಮ್ಮ ತಂದೆ ಎಂದ ಕೂಡಲೇ ಥಟ್ಟನೆ ನನಗೆ ನೆನಪಾಗುವುದು ಬಾಲ್ಯದ ಒಂದು ಘಟನೆ. ಆಗ ನಾನು 6-7 ವರ್ಷದವಳಿರಬಹುದು. ವಠಾರವೊಂದರಲ್ಲಿ ನಮ್ಮ ವಾಸ. ನನ್ನ ಅಣ್ಣ, ಅಕ್ಕ, ತಮ್ಮ ಹಾಗೂ ನಾನೂ ಸೇರಿದಂತೆ ವಠಾರದ ಅಕ್ಕಪಕ್ಕದ ಮಕ್ಕಳನ್ನು ಕಲೆಹಾಕಿ ನಮ್ಮ ತಂದೆ ಸಂಸ್ಕೃತ ಹೇಳಿಕೊಡುತ್ತಿದ್ದರು. ಪ್ರತಿನಿತ್ಯ ಹಿಂದಿನ ದಿನದ ಬಾಯಿಪಾಠ ತಪ್ಪದೇ ಒಪ್ಪಿಸಬೇಕಾಗುತ್ತಿತ್ತು. ಆ ದಿನ ನಿಗದಿಗೊಳಿಸಿದ್ದ ಅಮರಕೋಶದ ಸಾಲುಗಳನ್ನು ಆಟದ ಹುಮ್ಮಸ್ಸಿನಲ್ಲಿ ನಾನು ಕಂಠಸ್ಥ ಮಾಡಿಕೊಂಡಿರಲಿಲ್ಲ. ಉಳಿದವರೆಲ್ಲರೂ ತಪ್ಪದೇ ಹೇಳುತ್ತಿದ್ದಾರೆ. ನನಗೆ ಒಳಗೇ ತೀವ್ರ ಆತಂಕ. ಮಿಕ್ಕವರ ಎದುರು ಅವಮಾನವಾಗುತ್ತದೆ ಎಂಬ ಅಳುಕಿಗಿಂತ ಬಾಯಿಪಾಠ ತಪ್ಪಿಸಿದ್ದಕ್ಕೆ ತಂದೆಯವರ ಸಿಟ್ಟನ್ನು ಎದುರಿಸಬೇಕಲ್ಲ ಎಂದು. ಇನ್ನೇನು ನನ್ನ ಸರದಿ ಬಂದೇ ಬಿಟ್ಟಿತು ಎನ್ನುವಾಗ ಹುಸಿ ಕೆಮ್ಮು ನಟಿಸಲಾರಂಭಿಸಿದೆ. ತಂದೆಯವರು ಕಾದೆ ಕಾದರು. ನನ್ನ ಕೆಮ್ಮು ನಿಲ್ಲುವ ಸೂಚನೆ ಕಾಣಲಿಲ್ಲ. ಬೇಸತ್ತ ಅವರು ಹೊರಗೆ ನಡಿ ಎಂದು ಗದರಿಸಿದರು. ಪಾರಾದೆ ಎಂದು ತಕ್ಷಣ ಅಲ್ಲಿಂದ ಜಾಗ ಖಾಲಿ ಮಾಡಿದೆ. ಈ ಘಟನೆಯನ್ನು ಏಕೆ ಹೇಳುತ್ತಿದ್ದೀನಿ ಎಂದರೆ, ಕಲಿಯುವಿಕೆಯಲ್ಲಿ ಅವರಿಗಿದ್ದ ಶಿಸ್ತು, ಕಟ್ಟುನಿಟ್ಟು ಕಲಿಸುವಿಕೆಯಲ್ಲೂ ತೋರಿಬರುತ್ತಿತ್ತು. ಇವತ್ತಿಗೂ ಅಧ್ಯಯನದಲ್ಲಿ ಅವರಿಗಿರುವ ಶ್ರದ್ಧೆ ಬೆರಗುಗೊಳಿಸುವಂತಹುದು. ಪ್ರತಿನಿತ್ಯ ಹಲವಾರು ಘಂಟೆಗಳು ಅಧ್ಯಯನ, ಬರವಣಿಗೆಗೆ ಮೀಸಲು. ಬರೆದೂ ಬರೆದೂ ಅವರ ಬಲಗೈಯ ಮಧ್ಯದ ಬೆರಳಿನಲ್ಲಿ ಶಾಶ್ವತ ಗಂಟೇ ಉಂಟಾಗಿದೆ! ಅವರ ಬರವಣಿಗೆ ಬಾಲ್ಯದಲ್ಲಿಯೇ ನಮ್ಮ ಮೇಲೆ ಎಷ್ಟು ಪರಿಣಾಮ ಬೀರಿತ್ತೆಂದರೆ ಹಾಳೆಗಳ ಮೇಲೆ ಗೀಚುವುದೇ ನಮ್ಮ ಮುಖ್ಯ ಆಟವಾಗಿತ್ತು. ನಮ್ಮ ತಾಯಿ ನಾವು ಕೇಳಿದ ಕೂಡಲೇ ಸಿಗುವಂತೆ ಹಾಳೆಗಳನ್ನು, ಪೆನ್ಸಿಲ್‌ಗಳನ್ನು ಪ್ರತ್ಯೇಕವಾಗಿ ಇಡುತ್ತಿದ್ದರು.

ಓದುವಾಗ, ಬರೆಯುವಾಗ ಹಾಗೂ ಚಿಂತನೆಯಲ್ಲಿದ್ದಾಗ ಅವರಿಗಿರುವ ಏಕಾಗ್ರತೆ ತೀವ್ರವಾದದ್ದು. ರಸ್ತೆಯಲ್ಲಿ ನಾವು ಅವರ ಎದುರೇ ಬಂದರೂ, ಪಕ್ಕದಲ್ಲೇ ಹಾಯ್ದರೂ ಅವರಿಗೆ ಗೊತ್ತಾಗುತ್ತಿರಲಿಲ್ಲ. ತೀವ್ರ ಚಿಂತನೆಯಲ್ಲಿ

ಮುಳುಗಿದ್ದಾಗ ನಾವೇನಾದರೂ ಕೇಳಿದರೆ ಪ್ರತ್ಯುತ್ತರಿಸಿದವರು ಆಮೇಲೆ ನೀನು ನನಗೆ ಯಾವಾಗ ಹೇಳಿದೆ ಎಂದು ಕೇಳುತ್ತಿದ್ದರು. ಯಾವ ಸಮಯದಲ್ಲಿ ಅವರನ್ನು ಮಾತನಾಡಿಸಬೇಕು ಎಂದು ನಾವೇ ಕಲಿತೆವೆನ್ನಿ.

ಯಾವ ವಿಷಯವನ್ನು ಅರಿಯುವುದಾದರೂ ಅವರಿಗೆ ಅದರ ಆಳಕ್ಕೆ ಹೋಗಬೇಕು. ಸಣ್ಣಪುಟ್ಟ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡಬೇಕು. ಅಮೇರಿಕಾಗೆ ನನ್ನ ಅಕ್ಕನ ಮನೆಗೆ ಬಂದಾಗ, ಅವಳ ಮನೆ ಎದುರಿಗೆ ಯಾರೋ ಮನೆಯೊಂದನ್ನು ಕಟ್ಟುತ್ತಿದ್ದರು. ಸ್ಥಳದಲ್ಲಿಯೇ ನಿಂತು ಕಟ್ಟುವ ಶೈಲಿಯನ್ನು ತಿಳಿದುಕೊಂಡದ್ದೇ ಅಲ್ಲದೆ, ಪುಸ್ತಕಾಲಯದಿಂದ ಪುಸ್ತಕಗಳನ್ನು ತರಿಸಿಕೊಂಡು ಓದಿ ಕೆಲವು ವರ್ಷಗಳಿಂದ ಅಲ್ಲಿ ವಾಸವಿದ್ದ ನಮಗೇ ವಿವರಿಸಿ ಹೇಳಿದರು. ಪ್ರೇಕ್ಷಣೀಯ ಸ್ಥಳಗಳನ್ನು ನೋಡುತ್ತಲೇ ಎರಡೂವರೆ ತಿಂಗಳುಗಳ ಕಾಲ ಅಲ್ಲಿದ್ದ ಅವರು ಭಾರತದಲ್ಲಿ ಸಮಾರಂಭ, ಭಾಷಣ ಎಂದು ಸಮಯವೇ ಸಿಕ್ಕುವುದಿಲ್ಲ, ಇಲ್ಲಾದರೆ ಯಾವ ಕಾಟವೂ ಇಲ್ಲ ಎನ್ನುತ್ತ ಭಾಗವತ ಏಕಾದಶ ದ್ವಾದಶ ಸ್ಕಂದಗಳ ಅನುವಾದ ಮಾಡಿ ಮುಗಿಸಿಬಿಟ್ಟರು. ಆದರೆ ಜೇನಿರುವುದನ್ನು ದುಂಬಿಗೆ ಹೇಳಿಕೊಡಬೇಕೇ? ಅವರು ಬಂದಿರುವ ವಿಷಯ ತಿಳಿದು ಕನ್ನಡ ಸಂಘದವರು ಭಾಷಣಕ್ಕೆ ಕರೆದರು. ನ್ಯೂಜರ್ಸಿಯಿಂದ ಪೆನ್ಸಿಲ್ವೇನಿಯಾಗೆ ಪ್ರಯಾಣಿಸುತ್ತಿದ್ದಾಗ ಕಾರಿನ ಹಿಂದಿನ ಸೀಟಿನಲ್ಲಿ ನಿಶ್ಚಿಂತೆಯಿಂದ ನಿದ್ರಿಸುತ್ತಿದ್ದ ಅವರನ್ನು ಕಂಡು ಭಾಷಣ ಮಾಡುವುದು ಅವರಾದರೂ, ಉದ್ವೇಗ ನಮಗಿದೆಯೇ ಹೊರತು ಅವರಿಗಲ್ಲ ಎಂದು ಬೆರಗಾದೆವು.

ಉತ್ಥಾನ ಪತ್ರಿಕೆಯಲ್ಲಿ 'ವಿಶ್ವಾಮಿತ್ರ' ಎಂಬ ಕಾವ್ಯನಾಮದಲ್ಲಿ ಬರೆಯುತ್ತಿದ್ದ ವಿಷಯ ನಮ್ಮ ತಾಯಿಗೇ ಗೊತ್ತಿರಲಿಲ್ಲವಂತೆ. ಅವರು 'ಇದ್ಯಾರೋ ವಿಶ್ವಾಮಿತ್ರ ಎನ್ನುವವರು ತುಂಬಾ ಚೆನ್ನಾಗಿ ಬರೆಯುತ್ತಾರೆ' ಎಂದು ಹೇಳುತ್ತಿದ್ದರಂತೆ! ನಮ್ಮ ತಾಯಿಯ ಅಕಾಲಿಕ ಮರಣ ನಮ್ಮೆಲ್ಲರಿಗೂ ತೀವ್ರ ಆಘಾತವನ್ನುಂಟುಮಾಡಿದರೂ, ಅವರು ಮಾಡಬೇಕಾಗಿದ್ದ ಕರ್ತವ್ಯಗಳನ್ನು ಇವತ್ತಿಗೂ ನಮ್ಮ ತಂದೆಯವರು ಮಾಡುತ್ತಿದ್ದಾರೆ. ಅವರಿಗಿರುವ ಕರ್ತವ್ಯಪ್ರಜ್ಞೆ ಅತ್ಯಂತ ನಿಖರವಾದುದು. ನನಗೆ ಇದು ಎಷ್ಟೋ ಸಲ 'ಅತಿ' ಎಂದು ಅನಿಸಿ, ಏಕೆ ಇನ್ನೂ ಕರ್ತವ್ಯ ಕರ್ತವ್ಯ ಎಂದು ಒದ್ದಾಡುತ್ತೀರಿ ಎಂದು ಹೇಳಿದ್ದುಂಟು.

ಇತ್ತೀಚೆಗೆ ಮೊಮ್ಮಗನ ಕೈಹಿಡಿದು, ಅವನು ಕೇಳಿದನೆಂದ ಕೂಡಲೇ ಬರೆಯುತ್ತಿದ್ದುದನ್ನು ಬಿಟ್ಟು ಪಾರ್ಕ್, ದೇವಸ್ಥಾನಗಳಿಗೆ ಹೋಗುತ್ತಿದ್ದ ದೃಶ್ಯ ಸರ್ವೇ ಸಾಮಾನ್ಯವಾಗಿತ್ತು. ಈ 'Luxury' ನಮಗಿಲ್ಲವಾಗಿದ್ದರೂ, ನೋಡುತ್ತಿದ್ದೇವೆ ಎಂದು ನಾನು ಹಾಸ್ಯ ಮಾಡಿದ್ದುಂಟು.

ಸಂಪ್ರದಾಯಸ್ಥ ಮನೆತನದಲ್ಲಿ ಹುಟ್ಟಿ ಇವತ್ತಿಗೂ ಅದನ್ನು ಮುಂದುವರೆಸಿಕೊಂಡು ಬಂದಿರುವ ಅವರು ನಮ್ಮ ಮೇಲೆ ಯಾವ ಅಭಿಪ್ರಾಯಗಳನ್ನೂ ಹೇರಿದವರಲ್ಲ. ವಿದ್ಯಾಭ್ಯಾಸ, ವಿವಾಹ ಮೊದಲಾದ ಮುಖ್ಯ ತೀರ್ಮಾನಗಳನ್ನು ನಮಗೇ ಬಿಟ್ಟವರು. ನನ್ನ ಅಕ್ಕ ವೈದ್ಯಳಾಗಲು ಹೊರಟಾಗ ಹುಡುಗಿಗೆ ಏಕೆ ಇದು ಎಂದು ಕೆಲವರು ಹೇಳಿದರೂ, ನಮ್ಮ ತಂದೆಯವರ ವಿರೋಧ ತಿಲವಷ್ಟೂ ಇರಲಿಲ್ಲ. ಜೀವನದಲ್ಲಿ ಯಾವ ವಿದ್ಯೆಯನ್ನೇ ಕಲಿಯಲಿ, ಯಾವ ಕೆಲಸವನ್ನೇ ಮಾಡಲಿ ಅದರಲ್ಲಿ ಶ್ರದ್ಧೆ, ಅಚ್ಚುಕಟ್ಟುಗಳು ಇರಬೇಕು ಎನ್ನುವುದೇ ಅವರ ಸೂತ್ರ. ಓದಿಗಾಗಿ ಚಿಕ್ಕ ವಯಸ್ಸಿನಲ್ಲಿಯೇ ಮನೆಯಿಂದ ಹೊರಟು, ವಾರಾನ್ನದಲ್ಲಿ ಮುಂದೆ ಬಂದ ಅವರಿಗೆ ಜೀವನದ ಯಾವ ತಿರುವುಗಳೂ ಸುಲಭವಾಗಿರಲಿಲ್ಲ.

ಶೋಕಸ್ಥಾನ ಸಹಸ್ರಾಣಿ ಭಯಸ್ಥಾನ ಶತಾನಿ ಚ ।
ದಿವಸೇ ದಿವಸೇ ಮೂಢಮಾವಿಶಂತಿ ನ ಪಂಡಿತಮ್ ॥

ಎನ್ನುವಂತೆ ಅವು ಯಾವುವೂ ಅವರ ಸಾಧನೆಯನ್ನು ಕುಂಠಿತಗೊಳಿಸಲಿಲ್ಲ.

ಹೀಗೆ ಹೇಳಹೊರಟರೆ ನೆನಪುಗಳು, ಅನುಭವಗಳು ಹಾಗೂ ಅನಿಸಿಕೆಗಳು ಒಂದರ ಮೇಲೊಂದು ಬರುತ್ತವೆ. ಒಂದು ಮಧುರ ನೆನಪಿನೊಂದಿಗೆ ಮುಕ್ತಾಯ ಮಾಡುತ್ತೇನೆ. ನಾನು 2–3 ವರ್ಷದವಳಿದ್ದಾಗ ಪ್ರತಿದಿನ ಸಂಜೆ ಎರಡು ಘಂಟೆಗೆ ನಮ್ಮ ತಂದೆಗಾಗಿ ಮನೆಯ ಹೊರಗಡೆ ಕಾಯುತ್ತಿದ್ದೆ. ಯಾರು ಏನು ಹೇಳಿದರೂ ಕುಳಿತ ಜಾಗದಿಂದ ಕದಲುತ್ತಿರಲಿಲ್ಲ. ಅವರು ಬರುವ ಸಮಯವಾಯಿತು ಎಂದು ಹೇಗೆ ಗೊತ್ತಾಗುತ್ತಿತ್ತು ಎಂದು ಈಗಲೂ ನನಗೆ ಅರ್ಥವಾಗಿಲ್ಲ. ಅದಕ್ಕಿಂತ ಹೆಚ್ಚಾಗಿ ಅಷ್ಟು ಚಿಕ್ಕವಳಿದ್ದಾಗಿನ ಅನುಭವ ಇವತ್ತಿಗೂ ಇಷ್ಟು ಹಚ್ಚ ಹಸಿರಾಗಿರುವುದು ಇನ್ನೂ ಆಶ್ಚರ್ಯ. ನಾನು ಕಾಯುತ್ತಿರುತ್ತೇನೆಂದು ಅವರು ಧಾವಂತದಿಂದ ಬರುತ್ತಿದ್ದರು. ಎತ್ತಿಕೊಂಡು ಒಳಗೆ ಬಂದ ಕೂಡಲೇ ಕೆಳಗಿಳಿದು ಓಡಿಬಿಡುತ್ತಿದ್ದೆ. ಒಮ್ಮೆ ಕಾಲೇಜಿನಿಂದ ಇನ್ನೆಲ್ಲಿಗೋ ಸ್ನೇಹಿತರ ಜೊತೆ ಹೋಗಬೇಕಾದ ಪ್ರಸಂಗ ಬಂದಿತಂತೆ. ನಾನು ಕಾಯುತ್ತಿರುತ್ತೇನೆಂದು ಒಂದು ಕ್ಷಣ ಮನೆಗೆ ಹೋಗಿ ನಂತರ ಹೋಗೋಣ ಎಂದು ಸ್ನೇಹಿತರನ್ನೂ ಜೊತೆಗೇ ಕರೆದುಕೊಂಡು ಬಂದಿದ್ದರಂತೆ. ಮೃದು ಹಾಗೂ ಬಿಗು ವ್ಯಕ್ತಿತ್ವಗಳ ಹಿಂದಿರುವ ಅವರ ಅಂತಃಸತ್ತ್ವ ಪರಿಣಾಮಕಾರಿಯಾದುದು.

(1994ರಲ್ಲಿ ಪ್ರಕಟವಾದ 'ರಂಗಾಭಿನಂದನ' ಗ್ರಂಥದಿಂದ ಉದ್ಧೃತ)

****

## ಶಿಷ್ಯ ಕಂಡಂತೆ

ವಿದ್ವಾನ್. ಜಿ. ಮಹಾಬಲೇಶ್ವರ ಭಟ್ಟ,
ಬೆಂಗಳೂರು

'ನನ್ನ ಪೂಜ್ಯ ಗುರುಗಳು ವಿದ್ವಾನ್ ಎನ್. ರಂಗನಾಥಶರ್ಮರು ಎಂದು ಹೃದಂಪುತುಂಬಿ ಬಾಯಿತುಂಬ ಯಾವಾಗಲೂ ಹೇಳಿಕೊಳ್ಳುವದು ಒಂದು ಸೌಭಾಗ್ಯಾತಿಶಯವೇ. ಅಲಂಕಾರಶಾಸ್ತ್ರವು ನನಗೆ ಆಸಕ್ತಿಯ ವಿಷಯವಾಗಿತ್ತು. ಆದ್ದರಿಂದ ಬೆಂಗಳೂರಿನ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿ ಅಲಂಕಾರಶಾಸ್ತ್ರದ ವಿಭಾಗದಲ್ಲಿ ಪ್ರವೇಶ ಪಡೆದೆ. ಉತ್ತರ ಕನ್ನಡದ ಹಳ್ಳಿಯಿಂದ ಬಂದ ನಾನು ಉದ್ದಾಮ ಪಂಡಿತರಾದ ಶ್ರೀ. ಕೆ.ಪಿ. ಶಂಕರಶಾಸ್ತ್ರಿಗಳು ಮತ್ತು ಶ್ರೀ ಎನ್. ರಂಗನಾಥಶರ್ಮರ ಹೆಸರನ್ನು ಕೇಳಿ ಬಲ್ಲವನಾಗಿದ್ದೆ. ಸಂಸ್ಕೃತ ಕಾಲೇಜಿನಲ್ಲಿರುವ ಅಧ್ಯಾಪಕರೆಲ್ಲರೂ ಶಾಸ್ತ್ರಿಗಳು ಶರ್ಮರಂತೆ ಘನವಿದ್ವಾಂಸರೆಂಬ ಭಾವನೆ ಇತ್ತು. ಆದರೆ ವಸ್ತುಸ್ಥಿತಿಯ ಅರಿವಾಗುವ ಹೊತ್ತಿಗೆ ಮೂರುನಾಲ್ಕು ತಿಂಗಳುಗಳು ಗತಿಸಿದ್ದವು. ಅದಕ್ಕೆ ತೆತ್ತ ಬೆಲೆ ಒಂದು ವರ್ಷ. ಮರುವರ್ಷ ವ್ಯಾಕರಣವಿಭಾಗದಲ್ಲಿ ಪುನಃ ಮೊದಲನೆಯ ವರ್ಷದಲ್ಲಿ ನನ್ನ ಹೆಸರನ್ನು ನೋಂದಾಯಿಸಿದೆ. ಶ್ರೀ ಶರ್ಮರು ಮತ್ತು ಶ್ರೀ ಎನ್.ಟಿ. ಶ್ರೀನಿವಾಸ ಅಯ್ಯಂಗಾರ್ಯರು ನನಗೆ ಗುರುಗಳಾಗಿ ದೊರಕಿದ್ದು ಹೀಗೆ. ಸರಿಯಾದ ಕಾಲ ಸನ್ನಿಹಿತವಾಗುವವರೆಗೂ ಯೋಗ್ಯಗುರುಗಳ ಪ್ರಾಪ್ತಿಯೂ ದುರ್ಲಭವೆಂದು ತೋರುತ್ತದೆ. ಅಂದು ಒಂದು ವರ್ಷ ನಷ್ಟವಾದರೂ ಜೀವಮಾನದ ಅವಶಿಷ್ಟ ವರ್ಷಗಳು ಸಾರ್ಥಕವಾಗುವುದಕ್ಕೆ ಶ್ರೀ ಶರ್ಮರಲ್ಲಿ ಅಂತೇವಾಸಿತ್ವ ಪಡೆದಿರುವುದೇ ಎನ್ನುವದು ನನ್ನ ದೃಢವಾದ ನಂಬಿಕೆ.

### ವೈದುಷ್ಯ

ಸಂಸ್ಕೃತ ಬಲ್ಲವರನ್ನೆಲ್ಲ ಪಂಡಿತರೆಂದು ಕರೆಯುವದು ಈಗ ರೂಢಿಯಾಗಿದೆ. ಇಷ್ಟೆ ಅಲ್ಲದೆ ವೇದ, ವೇದಾಂತ, ಭಗವದ್ಗೀತೆ, ಜ್ಯೋತಿಷ, ಪೂಜಾವಿಧಾನ, ತರ್ಕ, ವ್ಯಾಕರಣ, ಕಾವ್ಯ, ನಾಟಕ ಮತ್ತು ಸಕಲ ದರ್ಶನಗಳನ್ನೂ ಈ ಪಂಡಿತ ತಿಳಿದಿರುತ್ತಾನೆ ಎನ್ನುವ ಸಾಮಾನ್ಯ ತಿಳುವಳಿಕೆಯು ಲೋಕದಲ್ಲಿ ಇದೆ. ಆದರೆ ಇಲ್ಲಿ ವಿವಿಚ್ಯ ಜ್ಞಾತವ್ಯಾಂಶ ಒಂದಿದೆ. ಸಂಸ್ಕೃತದಲ್ಲಿ ಕಾವ್ಯಲೋಕ ಒಂದಾದರೆ ಶಾಸ್ತ್ರಸಾಮ್ರಾಜ್ಯ ಇನ್ನೊಂದು. ಸಂಸ್ಕೃತದಲ್ಲಿ ಕಾವ್ಯವೆಂದರೆ ಗದ್ಯ-ಪದ್ಯ, ಚಂಪೂ, ರೂಪಕಗಳೆಲ್ಲವೂ ಒಳಗೊಳ್ಳುತ್ತವೆ. ಸಂಸ್ಕೃತಭಾಷೆಯನ್ನು ಈ ಕಾವ್ಯಗಳ ಮೂಲಕವೇ

ಅಭ್ಯಾಸವಮಾಡಬೇಕು. ನಾಟಕಾಂತ ಸಾಹಿತ್ಯಾಭ್ಯಾಸವನ್ನು ಐದಾರು ವರ್ಷಗಳ ಕಾಲ ಸರಿಯಾದ ಕ್ರಮದಲ್ಲಿ ಮಾಡಿದರೆ ಸಂಸ್ಕೃತ ಭಾಷೆಯಲ್ಲಿ ಒಂದು ಹಿಡಿತ ಬರುತ್ತದೆ. ಇವರು ವ್ಯಾಖ್ಯಾನಗಳ ಸಹಾಯದಿಂದ ಕಾವ್ಯದ ಎಲ್ಲ ಪ್ರಕಾರಗಳನ್ನು ಅರ್ಥೈಸಲು ಸಮರ್ಥರಾಗಿರುತ್ತಾರೆ. ಇವರೆಲ್ಲ ಸಂಸ್ಕೃತಜ್ಞರಾಗಿದ್ದು ಅಭಿನಂದನೀಯರೇ ಸರಿ. ಆದರೆ ಇವರು ಪೂರ್ವಮೀಮಾಂಸಾ, ಉತ್ತರಮೀಮಾಂಸಾ (ವೇದಾಂತ), ವ್ಯಾಕರಣ, ತರ್ಕ, ಅಲಂಕಾರ, ಜ್ಯೋತಿಷ್ಯ ಮೊದಲಾದ ಶಾಸ್ತ್ರಗಳನ್ನು ಅರ್ಥಮಾಡಿಕೊಳ್ಳಲಾರರು. ಅದಕ್ಕಾಗಿ ನಾಟಕಾಂತ ಸಾಹಿತ್ಯವನ್ನು ಓದಿದವನು ಅಂದರೆ ವ್ಯುತ್ಪನ್ನನು ಹಿಂದೆ ಹೇಳಿದ ಶಾಸ್ತ್ರಗಳಲ್ಲಿ ಯಾವುದಾದರೂ ಒಂದು ಶಾಸ್ತ್ರವನ್ನು ಆಯ್ಕೆಮಾಡಿಕೊಂಡು ಗುರುಮುಖದಿಂದಲೇ ಕನಿಷ್ಠ ಐದು ವರ್ಷಗಳ ಕಾಲವಾದರೂ ಅದೊಂದೇ ಶಾಸ್ತ್ರವನ್ನು ಓದಬೇಕು. ಹೀಗೆ ಓದಿದವನನ್ನು ಪಂಡಿತಲೋಕವು ಶಾಸ್ತ್ರಜ್ಞನೆಂದು ಗುರುತಿಸುತ್ತದೆ. ಮುಂದೆಯೂ ಎಂಟು ಹತ್ತು ವರ್ಷಗಳ ಕಾಲ ಈ ಶಾಸ್ತ್ರದ ನಿರಂತರ ಅಧ್ಯಯನ ಅಧ್ಯಾಪನಗಳನ್ನು ಮಾಡಿ ಪ್ರಮೇಯಭಾಗವನ್ನು 'ಇದಮಿತ್ಥಂ' ಎಂದು ಹೇಳಬಲ್ಲವನನ್ನು ಆಯಾ ಶಾಸ್ತ್ರಕ್ಕೆ ಸಂಬಂಧಪಟ್ಟಂತೆ ವೈಯಾಕರಣ, ನೈಯಾಯಿಕ, ಮೀಮಾಂಸಕ, ಜ್ಯೋತಿಷಿಕ, ವೇದಾಂತಿ, ಆಲಂಕಾರಿಕ ಎಂದು ಲೋಕ ಗುರುತಿಸುತ್ತದೆ. ಹಾಗಾಗಿ ಸಂಸ್ಕೃತಜ್ಞರೆಲ್ಲ ಶಾಸ್ತ್ರಜ್ಞರಲ್ಲ ಆದರೆ ಶಾಸ್ತ್ರಜ್ಞರೆಲ್ಲ ಸಂಸ್ಕೃತಜ್ಞರಾಗಿಯೇ ಇರುತ್ತಾರೆ. 'ಏಕಸ್ಮಿನ್ ಜನ್ಮನಿ ಏಕಮೇವ ಶಾಸ್ತ್ರಂ' ಒಂದು ಜನ್ಮದಲ್ಲಿ ಒಂದೇ ಶಾಸ್ತ್ರ ಎನ್ನುವುದು ಶಾಸ್ತ್ರಗಳ ಅಧ್ಯಯನದ ಗಭೀರತೆಯನ್ನು ತಿಳಿಸಿಕೊಡುತ್ತದೆ. ಹೀಗೆ ಸಾಂಪ್ರದಾಯಿಕಾಧ್ಯಯನ ಕ್ರಮದಲ್ಲಿ ಎರಡು ಹಂತ. ಈ ಕ್ರಮದಲ್ಲಿ ಅಪಾರ ಪರಿಶ್ರಮದಿಂದ ವ್ಯಾಕರಣ ಮತ್ತು ಅಲಂಕಾರಶಾಸ್ತ್ರಗಳನ್ನು ಅಧ್ಯಯನ ಮಾಡಿ, ಗುರುಮುಖದಿಂದಲೇ ವೇದಾಂತ ಶಾಸ್ತ್ರವನ್ನೂ ಸಂಪ್ರದಾಯಬದ್ಧವಾಗಿ ಓದಿದವರು ಶ್ರೀ ಶರ್ಮರು. ಅಧ್ಯಾಪನವನ್ನು ಎಪ್ಪತ್ತೈದು ವರ್ಷಗಳಿಗೂ ಮೀರಿ ನಿರಂತರವಾಗಿ ಮಾಡಿದ ಮಾಡುತ್ತಿರುವ ಶ್ರೀ ಶರ್ಮರ ಪರಿಪಕ್ವವಾದ ಶಾಸ್ತ್ರವೈದುಷ್ಯವನ್ನು ಲೇಖನಿಯ ಮೂಲಕ ತಿಳಿಸುವದು ಅಸಾಧ್ಯ. ವ್ಯಾಕರಣಶಾಸ್ತ್ರದಲ್ಲಿ ಪತಂಜಲಿಯ ಮಹಾಭಾಷ್ಯವೊಂದು ಮೇರುಕೃತಿ. 'ಮಹಾಭಾಷ್ಯಂ ವಾ ಪಠನೀಯಂ ಮಹಾರಾಜ್ಯಂ ವಾ ಶಾಸನೀಯಂ' ಸಾಮ್ರಾಜ್ಯವನ್ನಾದರೂ ಆಳಬೇಕು ಇಲ್ಲವೇ ಮಹಾಭಾಷ್ಯವನ್ನಾದರೂ ಓದಬೇಕು ಎಂಬ ಮಾತು ಮಹಾಭಾಷ್ಯದ ಆಳ, ವೈಶಾಲ್ಯ ಮತ್ತು ಮಹತ್ತ್ವವನ್ನು ತಿಳಿಸುತ್ತದೆ. ಅಲಂಕಾರಶಾಸ್ತ್ರದಲ್ಲಿ ಜಗನ್ನಾಥ ಪಂಡಿತನ ರಸಗಂಗಾಧರವು ಪ್ರೌಢತಮವಾದ

ಗ್ರಂಥ. ಇದನ್ನು ಮೀರಿಸುವ ಗ್ರಂಥ ಅಲಂಕಾರಶಾಸ್ತ್ರದಲ್ಲಿ ಇಲ್ಲ. ವ್ಯಾಕರಣಶಾಸ್ತ್ರದ ಶೇಖರ, ಭೂಷಣಸಾರ, ಮಂಜೂಷಾ ಮೊದಲಾದ ಪ್ರೌಢಗ್ರಂಥಗಳನ್ನು ಓದಿದವನು ಮಹಾಭಾಷ್ಯದ ಬಾಗಿಲುತಟ್ಟಲು ಅರ್ಹನಾದರೆ, ಅಲಂಕಾರಶಾಸ್ತ್ರದ ಧ್ವನ್ಯಾಲೋಕ, ಕಾವ್ಯಪ್ರಕಾಶಾದಿಗಳನ್ನು ಅಭ್ಯಾಸ ಮಾಡಿದವನು ರಸಗಂಗಾಧರವನ್ನು ಪ್ರವೇಶಿಸಬಹುದು. ಈ ಗ್ರಂಥಗಳನ್ನು ಹೃದ್ಗತಮಾಡಿಕೊಂಡವರು ಬಹಳ ವಿರಳ. ಅಖಿಲಭಾರತ ಸ್ತರದಲ್ಲಿ ಹದಿನೈದರಿಂದ ಇಪ್ಪತ್ತು ಜನರಲ್ಲಿ ಶ್ರೀ ಶರ್ಮರೂ ಒಬ್ಬರೆಂದರೆ ಅವರ ವೈದುಷ್ಯದ ಅರಿವಾದೀತು.

**ಕಾವ್ಯವ್ಯಾಸಂಗ**

ಶಾಸ್ತ್ರಗಳ ಆಳವಾದ ಅಭ್ಯಾಸದಲ್ಲಿ ನಿರಂತರವಾಗಿ ತಮ್ಮನ್ನು ತೊಡಗಿಸಿಕೊಂಡವರು ಕಾವ್ಯಗಳತ್ತ ಅಷ್ಟಾಗಿ ತಮ್ಮ ದೃಷ್ಟಿಯನ್ನು ಹರಿಸುವದಿಲ್ಲ. ಹಾಗೆಂದ ಮಾತ್ರಕ್ಕೆ ಇವರಿಗೆ ಕಾವ್ಯಗಳ ಬಗ್ಗೆ ಅನಾದರವೇನೂ ಇಲ್ಲ. ಆದರೆ ಶಾಸ್ತ್ರವ್ಯಾಸಂಗವು ಕಾವ್ಯ ಪರಿಶೀಲನೆಯ ಕಾಲವನ್ನು ತನ್ನದಾಗಿಸಿಕೊಂಡು ಬಿಡುತ್ತದೆ. ಕವಿಯೊಬ್ಬ ಶಾಸ್ತ್ರವ್ಯಾಸಂಗಕ್ಕೆ ತೊಡಗಿ ತನ್ನ ಕವಿತಾ ಶಕ್ತಿಯು ಕುಂಠಿತವಾಗುತ್ತಿರುವದನ್ನು ಗಮನಿಸಿ, 'ನಮಃ ಪ್ರಾಮಾಣ್ಯವಾದಾಯ ಮತ್ಕವಿತ್ವಾಪಹಾರಿಣೇ' ಎಂದು ಹೇಳಿರುವುದು ಈ ಹಿನ್ನೆಲೆಯಲ್ಲಿಯೇ. ಸಂಸ್ಕೃತದಲ್ಲಿ ತೊಂಭತ್ತರಷ್ಟು ಭಾಗವನ್ನು ಪದ್ಯಕಾವ್ಯವೇ ಆಕ್ರಮಿಸಿಕೊಂಡಿದೆ. ಗದ್ಯ, ಚಂಪೂ ಮತ್ತು ರೂಪಕಗಳು ಉಳಿದ ಹತ್ತು ಭಾಗಗಳನ್ನು ತುಂಬಿವೆ. ಸಂಸ್ಕೃತದಲ್ಲಿ ಉಪಲಭ್ಯವಾಗಿರುವ ಪ್ರಸಿದ್ಧ ಮತ್ತು ಅಪ್ರಸಿದ್ಧವಾದ ಎಲ್ಲ ಕಾವ್ಯಗಳನ್ನು ಆದ್ಯಂತವಾಗಿ ಶ್ರೀ ಶರ್ಮರು ಪರಿಶೀಲಿಸಿರುವದಕ್ಕೆ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ಪುಸ್ತಕ ಭಂಡಾರದಲ್ಲಿರುವ ಪುಸ್ತಕಗಳೇ ಸಾಕ್ಷಿ. ಮುದ್ರಣದೋಷವಿದ್ದರೆ ತಿದ್ದುವುದು, ವ್ಯಾಕರಣಕ್ಕೆ ವಿರುದ್ಧವಾದ ಪ್ರಯೋಗಗಳು ಕಂಡುಬಂದರೆ ಪ್ರಶ್ನೆ ಚಿಹ್ನೆ ಹಾಕುವುದು ಅವರ ಸ್ವಭಾವ. ಹೀಗೆ ತಿದ್ದಿದ ಅಕ್ಷರಗಳನ್ನು ಪ್ರಶ್ನೆ ಚಿಹ್ನೆಗಳನ್ನು ಆ ಪುಸ್ತಕಗಳಲ್ಲಿ ಇಂದಿಗೂ ನೋಡಬಹುದು.

ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಎಂ.ಇ.ಎಸ್. ಕಾಲೇಜಿನ ಸಂಸ್ಥಾಪಕರೂ, ವಾಗ್ಮಿಗಳೂ, ಸಂಸ್ಕೃತಜ್ಞರೂ ಆದ ಮಾನ್ಯ ಶ್ರೀ ಎಂ.ಪಿ.ಎಲ್. ಶಾಸ್ತ್ರಿಗಳು ವಿಧಾನ ಪರಿಷತ್ತಿನ ನಾಮಕರಣ ಸದಸ್ಯರೂ ಆಗಿದ್ದರು. ಅವರೊಮ್ಮೆ ಐವತ್ತು ಅರುವತ್ತು ವರುಷಗಳ ಹಿಂದೆ ಸಂಸ್ಕೃತಜ್ಞರ ಸಭೆಯಲ್ಲಿ ಒಂದು ಸವಾಲು ಎಸೆದರಂತೆ. ಸಂಸ್ಕೃತ ಕಾವ್ಯ ಪ್ರಪಂಚದಲ್ಲಿ ಪಂಚಮಹಾಕಾವ್ಯಗಳೆಂದು ಪ್ರಸಿದ್ಧವಾಗಿರುವ ರಘುವಂಶ, ಕುಮಾರಸಂಭವ, ಕಿರಾತಾರ್ಜುನೀಯ, ಮಾಘ ಮತ್ತು ನೈಷಧಗಳನ್ನು

ಆದ್ಯಂತವಾಗಿ ಓದಿದವರು ಯಾರಿದ್ದಾರೆ? ಎಂದು. ಒಬ್ಬರಿಂದಲೂ ಉತ್ತರ ಬರಲಿಲ್ಲ. ಆ ಸಭೆಯಲ್ಲಿ ಶ್ರೀ ಶರ್ಮರೂ ಇದ್ದರಂತೆ. ಎಲಾ! ಏನಿದು! ಒಂದು ಕೈ ನೋಡಿಯೇ ಬಿಡೋಣವೆಂದು ಸಭೆಯಿಂದ ಹಿಂದಿರುಗಿದವರು ಮರುದಿನದಿಂದಲೇ ಮಲ್ಲಿನಾಥನ ವ್ಯಾಖ್ಯಾನದೊಂದಿಗೆ ಒಂದೊಂದೇ ಮಹಾಕಾವ್ಯಗಳನ್ನು ಓದಲಾರಂಭಿಸಿ ಪಂಚಮಹಾಕಾವ್ಯಗಳನ್ನು ಆದ್ಯಂತವಾಗಿ ಒಂದೂ ಶ್ಲೋಕವನ್ನು ಬಿಡದೆ ಕಾವ್ಯ ವ್ಯಾಸಂಗರೀತಿಯಲ್ಲಿ ಅಧ್ಯಯನ ಮಾಡಿದರಂತೆ. ಓದುವಾಗ ತರಗತಿಯಲ್ಲಿ ಅವರೇ ಹೇಳಿದ ಪ್ರಸಂಗವಿದು. 'ಒಂದು ಗ್ರಂಥವನ್ನು ಅವರು ಓದಿದ್ದಾರೆ' ಎಂದರೆ ಒಂದಕ್ಷರವನ್ನು ಬಿಡದೆ ಓದಿದ್ದಾರೆಂದೇ ಅದರ ಅರ್ಥವೆನ್ನುವುದು ಅವರ ಎಲ್ಲ ವಿದ್ಯಾರ್ಥಿಗಳಿಗೂ ಅನುಭವವೇದ್ಯವಾದ ವಿಷಯ. ತರಗತಿಯಲ್ಲಿ ಅವರು ಹೇಳಿದ ಈ ಘಟನೆಯಿಂದ ದಪ್ಪ ಚರ್ಮದ ಈ ಲೇಖಕನಿಗೆ ಯಾವ ಕೆಚ್ಚೂ ಹುಟ್ಟದೇ ಇರುವದು ನಾಚಿಕೆಗೇಡಿನ ವಿಷಯವೇ ಸರಿ. ಎಲ್ಲರಂತೆ ಪಂಚಮಹಾಕಾವ್ಯಗಳ ಒಂದೋ ಎರಡೋ ಸರ್ಗಗಳನ್ನು ಪರೀಕ್ಷೆಗಾಗಿ ಓದಿ ಕಾಲಹಾಕಿದವನೇ ನಾನು. ಇರಲಿ ವಾಲ್ಮೀಕಿ ರಾಮಾಯಣವನ್ನು ನಾಲ್ಕಾರು ವ್ಯಾಖ್ಯಾನಗಳೊಂದಿಗೆ ಅದೆಷ್ಟು ಬಾರಿ ಓದಿರುವರೋ! ಅದರ ಇಪ್ಪತ್ನಾಲ್ಕು ಸಾವಿರ ಶ್ಲೋಕಗಳ ಭಾವವನ್ನು ಕನ್ನಡಭಾಷೆಗೆ ಒಗ್ಗಿಸಿ ಸುಲಭವಾಗಿ ಹೇಳುವದು ಅಪಾರ ಬೌದ್ಧಿಕಶ್ರಮದಿಂದ ಮಾತ್ರ ಸಾಧ್ಯ. ನಾನು ಓದುತ್ತಿರುವ ಸಮಯದಲ್ಲಿಯೇ ಶ್ರೀಮದ್ರಾಮಾಯಣದ ಅನುವಾದ ಕಾರ್ಯವು ನಡೆಯುತ್ತಿತ್ತು. ವಿದ್ವತ್ತರಗತಿಗಳಿಗೆ ಪ್ರೌಢಗ್ರಂಥಗಳನ್ನು ನಾಲ್ಕು ಅವಧಿಗಳ ಕಾಲ ಪಾಠ ಮಾಡುವ ಹೊತ್ತಿಗೆ ಬುದ್ಧಿಯು ದಣಿದು ಹೋಗುತ್ತದೆ. ಆದರೆ ಶ್ರೀ ಶರ್ಮರು ಪಾಠ ಮುಗಿದಕೂಡಲೇ ಅನುವಾದ ಕಾರ್ಯವನ್ನು ಆರಂಭಿಸುತ್ತಿದ್ದರು. ಅಡಿರಟ್ಟಿನ ಮೇಲೆ ಮೂವತ್ತು, ನಲವತ್ತು ಬಿಳಿಯ ಕಾಗದಗಳು, ಕಪ್ಪು ಮತ್ತು ಕೆಂಪು ಶಾಹಿಯ ಎರಡು ಪೆನ್ನುಗಳು ಅವರ ಮೇಜಿನ ಮೇಲೆ ಯಾವಾಗಲೂ ಇದ್ದೇ ಇರುತ್ತಿದ್ದವು. ಬೃಹಸ್ಪತಿಗಳಾದ ನಾವು (ವಿದ್ಯಾರ್ಥಿಗಳು) 'ಏನೋ ಬರೆಯುತ್ತಿದ್ದಾರೆ' ಅಂದುಕೊಂಡು ಉದಾಸೀನರಾಗಿ ತಿಳಿದುಕೊಂಡಿದ್ದೇವೇ ಹೊರತು ಅವರ ಶ್ರಮವನ್ನು ಅರ್ಥಮಾಡಿಕೊಂಡಿರಲಿಲ್ಲ. ನಿವೃತ್ತಿಯಾದ ಮೇಲೆ ಸಂಪೂರ್ಣ ವಿಷ್ಣುಪುರಾಣವನ್ನು ಶ್ರೀಮದ್ಭಾಗವತದ ಹತ್ತು, ಹನ್ನೊಂದು ಮತ್ತು ಹನ್ನೆರಡನೆಯ ಸ್ಕಂಧಗಳನ್ನು ಅನುವಾದಿಸಿದರು. ಭಾಗವತದ ಹನ್ನೊಂದು ಮತ್ತು ಹನ್ನೆರಡನೆಯ ಸ್ಕಂಧಗಳನ್ನು ಅಮೆರಿಕಾದಲ್ಲಿರುವ ಮಗಳನ್ನು ನೋಡಲು ಹೋದಾಗ ಪ್ರವಾಸದ ಅಲ್ಪ ಸಮಯದಲ್ಲಿಯೇ ಅನುವಾದಿಸಿದ್ದು ವಿಶೇಷ.

## ಸ್ವಭಾವ

'ಅಧೃಷ್ಯಶ್ಚಾಭಿಗಮ್ಯಶ್ಚ' ಇದು ಕಾಳಿದಾಸನ ಮಾತು ದಿಲೀಪ ಚಕ್ರವರ್ತಿಯ ಬಗ್ಗೆ. ಶ್ರೀಶರ್ಮರಲ್ಲಿ ಕಾಡುಹರಟೆಗೆ ಅವಕಾಶವಿಲ್ಲ. ಆದ್ದರಿಂದ ಅಧೃಷ್ಯರು. ಶಾಸ್ತ್ರೀಯ ವಿಚಾರವನ್ನೋ ಕಾವ್ಯದ ಪ್ರಸಂಗಗಳನ್ನೋ, ರಾಮಾಯಣ, ಮಹಾಭಾರತ, ಭಾಗವತ ಪುರಾಣಗಳ ಪಾತ್ರಗಳ ಬಗ್ಗೆಯೋ, ಹಳೆಗನ್ನಡದ ಕಾವ್ಯಗಳ ಕುರಿತೋ, ಗ್ರಂಥ ಸಂಶೋಧನೆ, ಪರಿಷ್ಕಾರಗಳ ರೀತಿಯನ್ನೋ, ಪ್ರಸ್ತಾಪ ಮಾಡಿದರೆ ಆತ್ಮೀಯತೆಯಿಂದ ಹೇಳುವ ಪರಿ ವಿಶಿಷ್ಟವಾದದ್ದು. ಹಾಗಾಗಿ ಅಭಿಗಮ್ಯರು. ಕಾಡುಹರಟೆಗೆ ಅವಕಾಶವಿಲ್ಲದಿರಬಹುದು, ಆದರೆ ಬೇರೆಯವರ ಕಷ್ಟ-ನಷ್ಟಗಳನ್ನು ಆತ್ಮೀಯತೆಯಿಂದ ಕೇಳಿ ಪರಿಹಾರವನ್ನು ಹೇಳಿ, ಮತ್ತೆರಡು ದಿನಗಳು ಕಳೆದ ಮೇಲೆ ದೂರವಾಣಿಯ ಮುಖಾಂತರ ಪುನಃ ವಿಚಾರಿಸಿ ಏನಾಯಿತೆನ್ನುವದನ್ನು ಖಾತ್ರಿಮಾಡಿಕೊಳ್ಳುವವರೆಗೂ ಅವರಿಗೆ ಸಮಾಧಾನವಿಲ್ಲ. ಈಗ ಸದ್ಯದಲ್ಲಿ ನನಗೇ ಒಂದು ವಿಪತ್ತು ಒದಗಿತು, ನಾನು ಹೇಳಿರಲಿಲ್ಲ. ಬೇರೆಯವರ ಮುಖಾಂತರ ತಿಳಿದಾಗ ಒಂದು ವಾರ ಸರಿಯಾಗಿ ನಿದ್ರೆಯನ್ನು ಮಾಡಲಿಲ್ಲವೆಂದು ಹೇಳುತ್ತ ನನ್ನನ್ನು ನೋಡಿ ಅವರು ಸಂಕಟಪಟ್ಟ ಬಗೆ ನನ್ನ ಜೀವಮಾನದಲ್ಲಿಯೇ ಮರೆಯಲು ಸಾಧ್ಯವಿಲ್ಲ.

ವಿದ್ಯಾರ್ಥಿಜೀವನದ ಒಂದೆರಡು ಘಟನೆಗಳು ಉಲ್ಲೇಖನೀಯವಾಗಿವೆ. ಒಮ್ಮೆ ಮೂರು ನಾಲ್ಕು ದಿನಗಳು ತರಗತಿಗೆ ಹೋಗಿರಲಿಲ್ಲ, ಅನಾರೋಗ್ಯದಿಂದಾಗಿ. ಬೆಂಗಳೂರಿನ ಚಾಮರಾಜಪೇಟೆಯ ಈಗಿನ ಶಿವಗಂಗಾಶುಭಸದನವು ಸಂಸ್ಕೃತ ಕಾಲೇಜಿನ ವಿದ್ಯಾರ್ಥಿನಿಲಯವಾಗಿತ್ತು. ಅಲ್ಲಿಗೇ ಶ್ರೀ ಶರ್ಮರು ಬಂದು ಕೇಳಿದರು.

ಶ್ರೀ.ಶ. : ಹೇಗಿದ್ದೀಯಾ ಮಹಾಬಲೇಶ್ವರ, ಕೈಯಲ್ಲಿ ದುಡ್ಡಿದೆಯೋ?

ನಾನು : ದುಡ್ಡಿದೆ, ಸದ್ಯದಲ್ಲಿಯೇ ಮನೆಯಿಂದ ಕಳುಹಿಸಿದ್ದಾರೆ.

ಶ್ರೀ.ಶ. : ಹಾಸ್ಟೇಲಿನಲ್ಲಿ ಈಗ ಆಹಾರಕ್ಕೆ ಏನು ಮಾಡಿಕೊಂಡಿದ್ದೀಯಾ?

ನಾನು : ಸಹಪಾಠಿಗಳು ಸ್ಟೌವಿನಲ್ಲಿ ಗಂಜಿಯನ್ನು ಮಾಡಿಕೊಡುತ್ತಿದ್ದಾರೆ. ಯಾವ ತೊಂದರೆಯೂ ಇಲ್ಲ.

ಶ್ರೀ.ಶ. : ದುಡ್ಡಿನ ಅವಶ್ಯಕತೆ ಇರುತ್ತದೆ. ಡಾಕ್ಟರನ್ನು ನೋಡಬೇಕಾಗುತ್ತೆ. ನನ್ನನ್ನು 'ಕೇಳಿ' ದುಡ್ಡನ್ನು ತಗೋಬೇಕು. ಕೊಂಚವೂ ಸಂಕೋಚಕೂಡದು ತಗೋ. ಈಗ ಇರಲಿ ಈ ಐದು ರೂಪಾಯಿಗಳು ನಿನ್ನಲ್ಲಿ. (1966-67ರಲ್ಲಿ 15ರಿಂದ 20

ರೂಪಾಯಿಗಳು ಇದ್ದರೆ ಒಂದು ತಿಂಗಳು ನಾವು ಆರಾಮವಾಗಿ ಇರುತ್ತಿದ್ದ ಕಾಲ)

ವಿದ್ಯಾರ್ಥಿಗಳಿಂದ ಸ್ವಂತಕ್ಕೆ ಸಹಾಯ ಪಡೆಯುವದು ಅವರಲ್ಲಿ ಇಲ್ಲವೇ ಇಲ್ಲ. ಒಮ್ಮೊಮ್ಮೆ ಅನಿವಾರ್ಯವಾದಾಗ ಸಣ್ಣ ಪುಟ್ಟ ಕೆಲಸಗಳನ್ನು ಹೇಳುತ್ತಿದ್ದರು. ಆದರೆ ಅದರಲ್ಲಿಯೂ ನಾವು ಕಲಿಯಬೇಕಾದ ಒಂದಂಶ ಇರುತ್ತಿತ್ತು.

ಶ್ರೀ ಶರ್ಮರ ಊರು ಸೊರಬ ತಾಲೂಕಿನ ನಡಹಳ್ಳಿ. ಅಲ್ಲಿಗೆ ಹೋಗಲು ಸಾಗರದವರೆಗೆ ರೈಲಿನ ಪ್ರಯಾಣ. ಅದಕ್ಕಾಗಿ 'ರಿಝರ್ವೇಶನ್' ಮಾಡಿಸಲು ನನ್ನನ್ನು ಒಂದೆರಡು ಬಾರಿ (ಐದು ವರ್ಷಗಳಲ್ಲಿ) ಕಳುಹಿಸಿದ್ದರು. ಹೀಗೆ ಕಳುಹಿಸಿಕೊಡುವ ಅವರ ಕ್ರಮವನ್ನು ಇಂದು ನಾವು ತಿಳಿದುಕೊಳ್ಳಬೇಕಾಗಿದೆ. ಹೋಗುವ ದಿನಾಂಕ, ವೇಳೆ, ಎಲ್ಲಿಂದ ಎಲ್ಲಿಗೆ ಪ್ರಯಾಣ ಎನ್ನುವ ವಿವರಗಳನ್ನೊಳಗೊಂಡ ಒಂದು ಸಣ್ಣ ಚೀಟಿಯೊಂದಿಗೆ ಟಿಕೆಟ್ಟಿನ ಮತ್ತು ರಿಝರ್ವೇಶನ್‌ನ ದುಡ್ಡನ್ನು ಕೊಟ್ಟು ಆಮೇಲೆ ಎಂಟಾಣೆಯನ್ನು ಇದು ನನ್ನ ಸಿಟಿ ಬಸ್ ಚಾರ್ಜ್ ಎಂದು ಪ್ರತ್ಯೇಕವಾಗಿ ನೀಡುತ್ತಿದ್ದರು. (ಆಗ ಚಾಮರಾಜಪೇಟೆಯಿಂದ ರೈಲ್ವೆ ಸ್ಟೇಷನ್ನಿಗೆ 15 ಪೈಸೆ 15 + 15 = 30 ಹಾಗಾಗಿ 20 ಪೈಸೆ ನಮಗೆ ಉಳಿಯುತ್ತಿತ್ತು) ವಿದ್ಯಾರ್ಥಿಯ ಕೈಯಿಂದ ಒಂದಿನಿತೂ ಖರ್ಚಾಗಬಾರದು. ಆದರೆ ಸ್ವಲ್ಪ ಸಹಾಯವೇ ಆಗಬೇಕೆಂಬ ದೃಷ್ಟಿ ಅವರದ್ದು.

1971ರಲ್ಲಿ ಅಖಿಲ ಭಾರತ ಸಂಸ್ಕೃತ ಶಾಸ್ತ್ರಪ್ರತಿಯೋಗಿತಾ ದಿಲ್ಲಿಯಲ್ಲಿ ನಡೆಯಿತು. ಕರ್ನಾಟಕದಿಂದ ನಾವು ನಾಲ್ಕು ವಿದ್ಯಾರ್ಥಿಗಳು ಭಾಗವಹಿಸಿದ್ದೆವು. ನಾಲ್ವರಿಗೂ ಬಹುಮಾನ ಬಂದ ಕಾರಣ ಆ ವರ್ಷ ಪರ್ಯಾಯ ಪಾರಿತೋಷಕವೂ ಕರ್ನಾಟಕಕ್ಕೇ ಬಂದಿತು. ತಿರುಪತಿಯ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠದ (ಸಂಸ್ಕೃತ ವಿಶ್ವವಿದ್ಯಾನಿಲಯ) ಕುಲಪತಿಗಳಾಗಿ ಈಗ ನಿವೃತ್ತರಾಗಿರುವ ಸಂಮಾನ್ಯ ಶ್ರೀ. ಡಿ. ಪ್ರಹ್ಲಾದಾಚಾರ್ಯರು ನಮ್ಮ ಕಾಲೇಜಿನ ನ್ಯಾಯಶಾಸ್ತ್ರದ ವಿಭಾಗದಲ್ಲಿ ಆಗ ಪ್ರಾಧ್ಯಾಪಕರಾಗಿದ್ದರಿಂದ ನಮಗೆ ಮಾರ್ಗದರ್ಶಕರಾಗಿ ಬಂದಿದ್ದು ಒಂದು ವಿಶೇಷವಾಗಿತ್ತು. ಬಹುಮಾನ ಪಡೆದ ನನಗೆ ನಮ್ಮ ಕಾಲೇಜಿನಲ್ಲಿ ಅಭಿನಂದನೆಯನ್ನು ಮಾಡಿದರು. ಆಗ ಶ್ರೀ ಶರ್ಮರು ಬಹಳ ಸಂತೋಷದಿಂದ ಹರಸಿದ್ದು ಹೀಗೆ – "ನನ್ನ ಶಿಷ್ಯನೊಬ್ಬ ಅಖಿಲ ಭಾರತಮಟ್ಟದಲ್ಲಿ ಅದರಲ್ಲಿಯೂ ಶಾಸ್ತ್ರೀಯ ವಿಷಯದಲ್ಲಿ ಪ್ರಥಮ ಬಹುಮಾನ ಪಡೆದದ್ದು, ಸಾವಿರಾರು ಶ್ಲೋಕಗಳನ್ನು ಕಂಠಪಾಠ ಮಾಡಿ ಅಂತ್ಯಾಕ್ಷರಿಯಲ್ಲಿ ಮೊದಲ ಬಹುಮಾನ ಪಡೆದದ್ದು ನೋಡಿ ಹೃದಯ ತುಂಬಿ ಬರುತ್ತದೆ. ನನ್ನ 'ಮಕ್ಕಳಿಗೆ ಬಹುಮಾನ ಬಂದಿದ್ದರೆ ಇಷ್ಟು

ಸಂತೋಷವಾಗುತ್ತಿರಲಿಲ್ಲ. ಯಾಕೆಂದರೆ ನಾನು ಅವರಿಗೆ ಪಾಠ ಹೇಳಿಕೊಡಲಿಲ್ಲ. (ಶ್ರೀ ಶರ್ಮರ ಮಕ್ಕಳಲ್ಲಿ ಇಬ್ಬರು ಡಾಕ್ಟರರಾಗಿದ್ದಾರೆ. ಇನ್ನಿಬ್ಬರು ಸ್ನಾತಕೋತ್ತರ ಪದವೀಧರರು) ನನ್ನ ವಿದ್ಯೆಯ ವಾರಸುದಾರನಾದ ಈತನು ಶ್ರೇಯೋವಂತನಾಗಿ ಚಿರಕಾಲ ಬಾಳಲಿ." ಹೀಗಿದೆ ನಮ್ಮ ಗುರುಗಳ ಹೃದಯ ಶ್ರೀಮಂತಿಕೆ. ನಿವೃತ್ತಿಯಾದ ಮೇಲೆ ನಮ್ಮ ಕಾಲೇಜಿಗೆ ಒಮ್ಮೆ ಬಂದಿದ್ದರು. ವ್ಯಾಕರಣಕ್ಕೆ ಸಂಬಂಧಪಟ್ಟಂತೆ ಯಾವುದೋ ಸಂದೇಹವನ್ನು ಕೇಳಿದೆ. ಆ ಕ್ಷಣದಲ್ಲಿ ಅವರಿಗೂ ತೋರಲಿಲ್ಲ. ಬೇರೆಯ ಮಾತನ್ನು ಮುಗಿಸಿ ಉತ್ತರವನ್ನು ಚಿಂತಿಸುತ್ತ ಒಂದು ಕಿಲೋಮೀಟರ್‌ನಷ್ಟು ದೂರ ಹೋದವರು ಹಿಂದಿರುಗಿ ಬಂದು 'ನೀನು ಕೇಳಿದ ಸಂದೇಹಕ್ಕೆ ಇದು ಸರಿಯಾದ ಉತ್ತರವೆಂದು' ಹೇಳಿ ಹಿಂತಿರುಗಿದರು.

ಇನ್ನೊಮ್ಮೆ ಅವರ ಮನೆಗೆ ಹೋದಾಗ ಈ ಸಂದೇಹವನ್ನು ಮುಂದಿಟ್ಟೆ. 'ವಿಕಸ್ಯಮಾನಂ', 'ಸ್ಪರ್ಧ್ಯಮಾನಂ' ಇವೇ ಮೊದಲಾದವುಗಳ ಪ್ರಯೋಗ ಹೇಗೆ. ಇವು ಭಾವಾರ್ಥದಲ್ಲಿ ಬಂದ ಶಾನಚ್ ಪ್ರತ್ಯಯಾಂತ ಶಬ್ದಗಳಷ್ಟೆ ! ಎಂದು. 'ಸರಿಯಾದ ಸಂದೇಹವೇ. ಪರಿಶೀಲಿಸಬೇಕು' ಎಂದಷ್ಟೆ ಹೇಳಿದರು. ಉಳಿದಂತೆ ಅವರೊಡನೆ ಮಾತನಾಡಿ ಮನೆಗೆ ನಾನು ಹಿಂದಿರುಗಿದೆ. ಮರುದಿನವೇ ನನಗೆ ಒಂದು ದೀರ್ಘಪತ್ರವನ್ನು ಬರೆದು ಸೂತ್ರಗಳನ್ನು ಉಲ್ಲೇಖಿಸಿ ನನ್ನ ಪ್ರಶ್ನೆಗೆ ಸಮಾಧಾನ ಬರೆದಿದ್ದರು. (ಆಗ ನನ್ನ ಮನೆಗೆ ದೂರವಾಣಿ ಇರಲಿಲ್ಲ). 'ಪುಷ್ಪೇಣ ವಿಕಸ್ಯಮಾನಂ ಪಶ್ಯ', 'ಛಾತ್ರೈಃ ಸ್ಪರ್ಧ್ಯಮಾನಂ ದೃಷ್ಟ್ವಾ ತುಷ್ಯಂತಿ' ಇವೇ ಮೊದಲಾದ ಪ್ರಯೋಗಗಳನ್ನು ಸ್ವಯಂ ಊಹೆ ಮಾಡಿ ಬರೆದು ನನಗೊಂದು ಚಿಕ್ಕ ಪಾಠವನ್ನೇ ಮಾಡಿದ್ದರು. ದೂರವಾಣಿ ಬಂದ ಮೇಲೆ ಅವೆಷ್ಟು ಸಂದೇಹಗಳಿಗೆ ಉತ್ತರಿಸಿದ್ದಾರೆನ್ನುವುದನ್ನು ಲೆಕ್ಕ ಇಟ್ಟಿಲ್ಲ. ಪ್ರಶ್ನೆ ಕೇಳಿದರೆ ಉತ್ತರ ಸಿಗುವವರೆಗೂ ಈ ತೊಂಭತ್ತಮೂರನೆಯ ವಯಸ್ಸಿನಲ್ಲಿಯೂ ಅವರ ಬುದ್ಧಿ ವಿರಮಿಸುವದೇ ಇಲ್ಲ. ರಾತ್ರಿ ನಿದ್ರೆಯೂ ಬರದು. ಉತ್ತರವನ್ನು ದೂರವಾಣಿಯ ಮುಖಾಂತರ ತಿಳಿಸಿದ ಬಳಿಕವಷ್ಟೇ ಬುದ್ಧಿಗೆ ವಿಶ್ರಾಂತಿ. ಇದು ಅವರ ಚಿಂತನೆಯ ಪ್ರಕಾರ.

ವಿನಯ – ವಿನೋದ

ರಾಜ್ಯ ಪ್ರಶಸ್ತಿಯಿಂದ ಆರಂಭಿಸಿ ರಾಷ್ಟ್ರಪತಿ ಪ್ರಶಸ್ತಿಯವರೆಗಿನ ಹತ್ತಾರು ಪ್ರಶಸ್ತಿಗಳಿಗೆ ಭಾಜನರಾಗಿ ಆ ಪ್ರಶಸ್ತಿಗಳಿಗೇ ಒಂದು ಗೌರವವನ್ನು ತಂದುಕೊಟ್ಟವರು ಶ್ರೀ ಶರ್ಮರು. ತಿರುಪತಿಯ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠವು (ಸಂಸ್ಕೃತ ವಿಶ್ವವಿದ್ಯಾನಿಲಯ) ಅವರಿಗೆ ಮಹಾಮಹೋಪಾಧ್ಯಾಯ ಪದವಿಯನ್ನು ನೀಡಿ ಗೌರವಿಸಿತು. ಆಗ ಅವರನ್ನು ನೋಡಿ ನಮಸ್ಕರಿಸಿ ಬರಲು ನಾನು ಮತ್ತು

ಮಿತ್ರರಾದ ಶ್ರೀ ಸೋ.ತಿ. ನಾಗರಾಜರು (ಇವರೂ ಶ್ರೀ ಶರ್ಮರ ಶಿಷ್ಯರು ಸಂಸ್ಕೃತ ಕಾಲೇಜಿನಲ್ಲಿ ವ್ಯಾಕರಣ ಪ್ರಾಧ್ಯಾಪಕರು) ಅವರ ಮನೆಗೆ ಹೋದೆವು. ನಾನು ಸಪತ್ನೀಕನಾಗಿ ಹೋಗಿದ್ದೆ. ಅಭಿವಾದನ ಮಾಡಿ ಕುಳಿತೆವು.

ಶ್ರೀ.ಶ. : ಸಪತ್ನೀಕನಾಗಿ ಬಂದಿದ್ದೀಯ, ಏನಮ್ಮಾ ಚೆನ್ನಾಗಿದ್ದೀಯಾ? ಮನೆಯಲ್ಲಿ ಮಕ್ಕಳೆಲ್ಲ ಚೆನ್ನಾಗಿದ್ದಾರೆಯೇ?

ನಾನು : ಹೌದು ಚೆನ್ನಾಗಿದ್ದೇವೆ.

ಶ್ರೀ.ಶ. : ಏನಯ್ಯ ನಾಗರಾಜ ನೀನು ನೈಷ್ಠಿಕ ಬ್ರಹ್ಮಚಾರಿ! ಕುಶಲ ಪ್ರಶ್ನೆಯನ್ನು ಏನೆಂದು ಮಾಡಲಿ? (ನಗುತ್ತ) "ಅಪಿ ತಪೋವರ್ಧತೇ!" (ಇದು ಶಾಕುಂತಲ ನಾಟಕದಲ್ಲಿ ಬರುವ ಮಾತು. ಶ್ರೀ ನಾಗರಾಜರು ವೇದಜ್ಞರು. ನಿತ್ಯ ವೇದಪಾರಾಯಣವನ್ನು ಮಾಡುವವರು. ಹಾಗಾಗಿ ಈ ಅಪೂರ್ವವಾದ ವಾಕ್ಯವನ್ನು ಹೇಳಿದ್ದು.)

ನಾ.ರಾ.: (ದೊಡ್ಡದಾಗಿ ನಗುತ್ತ) ಎಲ್ಲ ತಮ್ಮ ಆಶೀರ್ವಾದ.

ಶ್ರೀ.ಶ. : ಏನು, ಎಲ್ಲರೂ ಒಟ್ಟಾಗಿ ಬಂದಿದ್ದೀರಿ?

ನಾವು : ತಮಗೆ ಮಹಾಮಹೋಪಾಧ್ಯಾಯ ಪದವಿ ನೀಡಿದ್ದಾರೆಂದು ಗೊತ್ತಾಯಿತು. ಹಾಗಾಗಿ ತಮ್ಮನ್ನು ನೋಡಿ ಹೋಗೋಣವೆಂದು ಬಂದೆವು.

ಶ್ರೀ.ಶ. : ಕೊಟ್ಟಿದ್ದಾರೆ, ಹಿಂದೆ ಹಾನಗಲ್ ಶ್ರೀ ವಿರೂಪಾಕ್ಷ ಶಾಸ್ತ್ರಿಗಳಿಗೂ ಕೊಟ್ಟಿದ್ದಾರೆ. ಈಗ ನನಗೂ ಕೊಟ್ಟಿದ್ದಾರೆ. (ಶ್ರೀ ವಿರೂಪಾಕ್ಷ ಶಾಸ್ತ್ರಿಗಳು ಅಖಿಲಭಾರತ ಮಟ್ಟದ ವಿದ್ವಾಂಸರು, ನೈಯಾಯಿಕರು ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರರೂ ಜಿವನ್ಮುಕ್ತರೂ ಆದ ಶ್ರೀ ಶ್ರೀ ಚಂದ್ರಶೇಖರಭಾರತೀ ಮಹಾಸ್ವಾಮಿಗಳಿಗೆ ಪಾಠ ಹೇಳಿದವರು) ಕಾಲ ಇಲ್ಲಿಗೆ ಬಂದಿದೆ. ಏನು ಮಾಡುವುದು.

ನಾವು : ತಮ್ಮಂತಹವರೂ ಹೀಗೆ ಹೇಳಿದರೆ ಇಂಥ ಪದವಿಯನ್ನು ಯಾರಿಗೆ ನೀಡಬೇಕು?

ಶ್ರೀ.ಶ. : ನನಗೆ ಇದು ಬಹಳ ಮುಜುಗರವನ್ನು ಉಂಟುಮಾಡಿದೆ. (ನಗುತ್ತ) ಒಂದು ಕೆಲಸವನ್ನು ನೀವು ಮಾಡಬಹುದು – ನಾವೆಲ್ಲ ಮಹಾಮಹೋಪಾಧ್ಯಾಯರ ಶಿಷ್ಯರೆಂದು ಹೇಳಿಬಿಡಿ. ಹೀಗೆಂದು ಹೇಳಿ ಅಲ್ಲಿಯೇ ಇದ್ದ ಪ್ರಶಸ್ತಿಯನ್ನು ತೋರಿಸುತ್ತ, ಅದರ ಜೊತೆಗಿದ್ದ

ಲಟ್ಟಣಿಗೆಯಂತಹ ಮರದ ಒಂದು ಕೋಲನ್ನು ತೋರಿಸಿ ವಿನೋದ ಮಿಶ್ರಿತ ಧ್ವನಿಯಲ್ಲಿ "ನೋಡಿ ಒಂದು ದೊಣ್ಣೆಯನ್ನೂ ಕೊಟ್ಟಿದ್ದಾರೆ" ಎಂದು ಹೇಳಿದರು. ಅನೇಕ ಸಂಘ ಸಂಸ್ಥೆಗಳು ಮಠ ಮಾನ್ಯಗಳು ಶ್ರೀ ಶರ್ಮರನ್ನು ಗೌರವಿಸಿವೆ. ಒಮ್ಮೆ ಪ್ರಶಸ್ತಿಪತ್ರವನ್ನು ತೋರಿಸುತ್ತ ಇದೊಂದು 'ಹೊರೆ' ಇನ್ನೊಂದು 'ತೊರೆ' ಎಂದು ಹೇಳುತ್ತ ಶಾಲನ್ನು ತೋರಿಸಿದರು. ಶಾಲುಗಳೆಲ್ಲವನ್ನು ಮನೆಗೆ ಬಂದ ವಿದ್ವಾಂಸರಿಗೆ ಹೊದಿಸಿ ಖಾಲಿಮಾಡಿ ಬಿಡುವದು ಅವರ ಪದ್ಧತಿ. ಶಾಲಿನ ಈ ಪ್ರಸಂಗದಲ್ಲಿಯೇ ಇನ್ನೊಂದನ್ನು ಇಲ್ಲಿಯೇ ಉಲ್ಲೇಖಿಸಿಬಿಡುತ್ತೇನೆ. ವಿದ್ಯಾರ್ಥಿಯೊಬ್ಬ ಶಾಸ್ತ್ರ, ವೇದಗಳೆರಡರಲ್ಲಿಯೂ ಬಹಳ ಪಟುವಾಗುತ್ತಿರುವದನ್ನು ಗಮನಿಸಿ ಒಂದು ಒಳ್ಳೆಯ ಜರಿಶಾಲನ್ನು ಹೊದಿಸಿ ಆಶೀರ್ವದಿಸಿದರು. ಆದರೆ ಆ ಶಾಲು ಕಳೆದುಹೋಯಿತು. ದೊಡ್ಡವರು ಆಶೀರ್ವಾದ ಮಾಡಿ ನೀಡಿದ ಶಾಲು ಕಳೆದುಹೋಯಿತೆಂದು ಆತ ಬಹಳ ನೊಂದುಕೊಂಡ. ಈ ವಿಷಯವು ಶ್ರೀ ಶರ್ಮರ ಕಿವಿಗೆ ಬಿತ್ತು. ಆಗ ನನ್ನ ಹತ್ತಿರ ಹೇಳಿದರು – "ಆ ನಿನ್ನ ಶಿಷ್ಯನಿಗೆ ನಮ್ಮ ಮನೆಗೆ ಬರಲು ಹೇಳು. ಶಾಲು ಕಳೆದುಕೊಂಡಿದ್ದಾನಂತೆ. ಇನ್ನೊಂದನ್ನು ಕೊಡುವೆ. ಶಾಲನ್ನು ಮತ್ತೆ ಕೊಡುವೆನೆಂಬ ವಿಷಯವನ್ನು ಹೇಳಬೇಡ. ನಮ್ಮ ಮನೆಗೆ ಬರದೇ ಇದ್ದಾನು" ಎಂಬ ಎಚ್ಚರಿಕೆಯನ್ನು ಕೊಟ್ಟರು. ಹೀಗೆ ಅವನನ್ನು ಮತ್ತೆ ಮನೆಗೆ ಕರೆಸಿ ಶಾಲು ಹೊದಿಸಿ ಆಶೀರ್ವದಿಸಿದರು. ಓದುವ ವಿದ್ಯಾರ್ಥಿಗಳನ್ನು ಕಂಡರೆ ಅಷ್ಟು ಅಕ್ಕರೆ.

**ಕವಿತ್ವ – ಅನುವಾದ**

ಸಂಸ್ಕೃತ ಕಾವ್ಯಗಳನ್ನು ಅವರಷ್ಟು ಪರಿಶೀಲಿಸಿದವರು ಯಾರೂ ಇರಲಿಕ್ಕಿಲ್ಲವೆಂದು ಹಿಂದೆ ಹೇಳಿದೆಯಷ್ಟೆ. ಅವರು ಬರೆದ ಶ್ಲೋಕಗಳನ್ನು ಲಘುಕಾವ್ಯದಂತಿರುವ 'ಶಂಕರ ಚರಿತಾಮೃತ'ವನ್ನು ಸಹೃದಯರೆಲ್ಲರೂ ಓದಬೇಕಾಗಿದೆ. 'ಬಾಹುಬಲಿವಿಜಯಂ' 'ಏಕಚಕ್ರಂ' ಎನ್ನುವ ಎರಡು ಕೃತಿಗಳು ಸೊಗಸಾದ ರೂಪಕಗಳು. ವಿದ್ವಾನ್ ಎನ್. ರಂಗನಾಥ ಶರ್ಮಾ ಎಂಬ ಹೆಸರನ್ನು ಪಕ್ಕಕ್ಕಿಟ್ಟು ಓದಿದರೆ ಕಾಳಿದಾಸ, ಭವಭೂತಿ, ಭಟ್ಟನಾರಾಯಣರ ಕಾಲದ ಕೃತಿಗಳನ್ನು ಓದುತ್ತಿದ್ದೇವೆಯೋ ಎನ್ನುವದು ಓದಿದವನ ಪ್ರತಿಯೊಬ್ಬನ ಅನುಭವವಾಗಿದೆ. ರೂಪಕಗಳಲ್ಲಿ ಬರುವ ಗದ್ಯಪದ್ಯಗಳಂತೂ ಶೈಲಿಯಲ್ಲಿ ಪರಸ್ಪರ

ಸ್ಪರ್ಧಿಸುತ್ತಿರುವಂತಿವೆ. "ಉಪಪನ್ನಮೇತತ್ ಸತಾಂ ಯದನ್ಯದುಃಖ ಸಂವೇದನವನ್" ಬೇರೆಯವರ ದುಃಖ ಸಜ್ಜನರಿಗೆ ಬೇಗ ಅರ್ಥವಾಗುವದು, ಈ ರೀತಿಯ ಸೊಗಸಾದ ಮಾತುಗಳನ್ನು ರೂಪಕಗಳ ತುಂಬ ಕಾಣಬಹುದು. ಶ್ಲೋಕಗಳು ಅವು ಮುಕ್ತಕಗಳೋ ದೇವತಾ ಸ್ತುತಿಯೊ ಸುಪ್ರಭಾತವೊ, ಸಮಸ್ಯಾಪೂರ್ತಿಯೋ – ಯಾವುದೇ ಪ್ರಕಾರಕ್ಕೆ ಸೇರಿದವವಾಗಿರಬಹುದು, ಅಲ್ಲಿ ಅಲಂಕಾರವನ್ನೋ ಧ್ವನಿಯನ್ನೋ, ಪ್ರಾಸವನ್ನೋ ನೋಡಬಹುದು. ಇವಿಷ್ಟು ಕಾವ್ಯದ ಬಗ್ಗೆ ಸಂಕ್ಷಿಪ್ತ ವಿವರಣೆ. ಆದರೆ ಅವರ ಗದ್ಯದ ಪ್ರಸನ್ನ ಗಂಭೀರ ಶೈಲಿಯನ್ನು 'ಸಂಸ್ಕೃತಂ ನಾಮ ದೈವೀವಾಕ್', 'ಸಂಸ್ಕೃತಭಾಷಾಯಾಃ ವ್ಯಾವಹಾರಿಕೀತ್ವೇ ಪಾಣಿನೀಯ ಶಾಸ್ತ್ರೇಗಮಕಾನಿ', 'ಪಂಚಮ ಸಮ್ಮೇಲನೇ ಅಧ್ಯಕ್ಷಭಾಷಣಂ' ಇವೇ ಮೊದಲಾದ ಪ್ರೌಢಪ್ರಬಂಧಗಳಲ್ಲಿ ನೋಡಿ ಆಸ್ವಾದಿಸಬೇಕು.

ರಾಮಾಯಣ, ವಿಷ್ಣುಪುರಾಣ ಮತ್ತು ಭಾಗವತಗಳ ಅನುವಾದದ ಬಗ್ಗೆ ಹಿಂದೆ ಉಲ್ಲೇಖವಾಗಿದೆ. ಪ್ರೌಢಕಾವ್ಯವಾದ ಶಂಕರದಿಗ್ವಿಜಯ, ಅಮರಕೋಶ, ಶಾಸ್ತ್ರಗ್ರಂಥವಾದ ವಾಕ್ಯಪದೀಯದ ಬ್ರಹ್ಮಕಾಂಡ, ಕಾಲ ಮತ್ತು ಕ್ರಿಯೆ ಇವುಗಳನ್ನು ನಾಮ್ನಾ ಆದರೂ ಅವಶ್ಯ ನಿರ್ದೇಶಿಸಲೇಬೇಕು. ಇವರ ಅನುವಾದದ ಬಗ್ಗೆ ಡಿ.ವಿ.ಜಿ. ಎಂಬ ಮೂರು ಅಕ್ಷರಗಳಿಂದಲೇ ಲೋಕಪ್ರಸಿದ್ಧರಾದ ಸಂಮಾನ್ಯ ಶ್ರೀ. ಡಿ.ವಿ. ಗುಂಡಪ್ಪನವರ ವಾಕ್ಯಗಳನ್ನೆ ಇಲ್ಲಿ ಉದ್ಧರಿಸಿ ಕೊಡುತ್ತಿದ್ದೇನೆ. ಇವು ಡಿ.ವಿ.ಜಿ.ಯವರ ವಾಕ್ಯಗಳು – "ಶ್ರೀ ರಂಗನಾಥಶರ್ಮರವರ ಕನ್ನಡ ಬರಿಯ ತರ್ಜುಮೆಯಲ್ಲ. ಸ್ವತಂತ್ರ ಪ್ರಸನ್ನವಾದದ್ದು. ಕನ್ನಡದಲ್ಲಿ ವ್ಯಾಕರಣದ ಕಡೆ ಹೆಚ್ಚು ಗಮನವಿಟ್ಟರೆ ವಾಕ್ಯವು ಪೆಡಸಾಗುತ್ತದೆ. ಸುಲಭತೆಯ ಕಡೆ ನೋಡಿದರೆ ವಾಕ್ಯವು ದುರ್ಬಲವಾಗುತ್ತದೆ. ಪಾಂಡಿತ್ಯದ ಅತಿಯೂ, ಪಾಮರತೆಯ ಅತಿಯೂ ಇಲ್ಲದಂತೆ ಬರೆಯುವದು ಕನ್ನಡದಲ್ಲಿ ಬಲುಕಷ್ಟ. ನಾಲ್ಕು ಬಗೆಯ ವಾಕ್ಯರಚನೆ ಸಾಧ್ಯವಾಗಿರುವಾಗ ಅದರಲ್ಲಿ ಯಾವದು ರಸಪೋಷಕವೆಂದು ಶ್ರೀ ರಂಗನಾಥಶರ್ಮರು ಹುಡುಕಿ ತಿಳಿದಿದ್ದಾರೆ. ಅವರ ವಾಕ್ಪ್ರವಾಹದಲ್ಲಿ ಸಹಜತೆ, ಲಾಲಿತ್ಯ, ವೈಶದ್ಯ, ಗಾಂಭೀರ್ಯ, ಓಜಸ್ಸು – ಈ ಗುಣಗಳು ಪ್ರಕಾಶಮಾನವಾಗಿವೆ. ಅವರ ಮುಖ್ಯದೃಷ್ಟಿ ರಸಪುಷ್ಟಿಯ ಕಡೆ. ಮಾತು ಮಾತು ಅದಕ್ಕೆ ಸಹಾಯವಾಗಿದೆ. ಒಳ್ಳೆಯ ಕನ್ನಡ ಹೇಗಿರುತ್ತೆಂದು ಕೇಳುವವರಿಗೆ ಇದು ನಾನು ತೋರಿಸುವ ಮಾದರಿ." ಶ್ರೀ ಶರ್ಮರಿಂದ ಅನೂದಿತವಾದ ರಾಮಾಯಣದ ಪ್ರಸ್ತಾವನೆಯಲ್ಲಿರುವ ಮಾತುಗಳಿವು. ಇವು ಎಲ್ಲ ಅನುವಾದ ಕೃತಿಗಳಿಗೂ ಅನ್ವಯವಾಗುತ್ತವೆ.

ಶ್ರೀ ಶರ್ಮರ ಸಂಸ್ಕೃತ ಕೃತಿಗಳು ಹತ್ತರಿಂದ ಹನ್ನೆರಡು ಆಗಬಹುದು. ಇವೆಲ್ಲವೂ ಸ್ವತಂತ್ರ ಕೃತಿಗಳು. ಅನೂದಿತ ಕೃತಿಗಳಲ್ಲ. ಈಗ ಒಂದು ವಾರದ ಹಿಂದೆ 'ಕಾವ್ಯೋದ್ಯಾನಂ' ಎಂಬ ಪುಸ್ತಕದ ಬಿಡುಗಡೆಯಾಯಿತು. ಇದರಲ್ಲಿ ಹಿಂದೆ ಉಲ್ಲೇಖಿಸಿದ 'ಬಾಹುಬಲಿ ವಿಜಯಂ' ಮತ್ತು 'ಏಕಚಕ್ರಂ' ಎರಡು ರೂಪಕಗಳು ಸಮಗ್ರಪದ್ಯ ಸಾಹಿತ್ಯವೂ ಅಡಕವಾಗಿವೆ. ಬೇರೆ ಬೇರೆಯ ಪುಸ್ತಕಗಳಲ್ಲಿ ಹರಡಿ ಹಂಚಿಹೋಗಿದ್ದ ಶ್ರೀ ಶರ್ಮರ ಸಂಸ್ಕೃತ ಕಾವ್ಯ ಪ್ರಪಂಚವನ್ನು ಈ ಒಂದೇ ಪುಸ್ತಕದಲ್ಲಿ ನೋಡಬಹುದು. ಕನ್ನಡದಲ್ಲಿ ಸ್ವತಂತ್ರಕೃತಿಗಳೂ ಇವೆ. ಅನೂದಿತಕೃತಿಗಳೂ ಇವೆ. ಸ್ವತಂತ್ರ ಕೃತಿಗಳಲ್ಲಿ 'ವ್ಯಾಕರಣ ಶಾಸ್ತ್ರದ ಪರಿವಾರ', 'ಹೊಸಗನ್ನಡ ವ್ಯಾಕರಣ' ಶಾಸ್ತ್ರೀಯ ಕೃತಿಗಳು, 'ಶ್ರೀರಾಮಕಥಾಮಂಜರಿ' ಒಂದು ಸೊಗಸಾದ ಗ್ರಂಥ. ಆಬಾಲವೃದ್ಧರು ಓದಿ ರಾಮಾಯಣದ ಕಥೆಯನ್ನು ಆಸ್ವಾದಿಸಬಹುದು. ನಾನೂರ ಐವತ್ತು ಪುಟಗಳಿಗೂ ಮೀರಿರುವ ಈ ಗ್ರಂಥದಲ್ಲಿ ವಾಲ್ಮೀಕಿಯ ರಾಮಾಯಣವನ್ನು ಆಧರಿಸಿ ಕಥೆಯ ಹಂದರಗಳು ಬಿಚ್ಚಿಕೊಂಡಿವೆ. ಪ್ರತಿಯೊಬ್ಬರ ಮನೆಯಲ್ಲೂ ಮನದಲ್ಲೂ ಇರಬೇಕಾದ ಗ್ರಂಥವಿದು. 'ಆಸ್ತಿಕಪರ್ವ'ವು ದೇವರ ಅಸ್ತಿತ್ವವನ್ನು ತಿಳಿಸಿಕೊಡಲು ಇತ್ತೀಚೆಗೆ ಬರೆದ ಒಂದು ಪ್ರಾಮಾಣಿಕ ಗ್ರಂಥ. ಹೀಗೆ ಸುಮಾರು ಇಪ್ಪತ್ತಕ್ಕೂ ಮೀರಿ ಕನ್ನಡ ಸ್ವತಂತ್ರ ಗ್ರಂಥಗಳನ್ನು ಬರೆದಿದ್ದಾರೆ. ಅನೂದಿತ ಕೃತಿಗಳ ಬಗ್ಗೆ ಹಿಂದೆಯೇ ಹೇಳಲಾಗಿದೆ. ಶ್ರೀಮದ್ರಾಮಾಯಣದ ಏಳೂ ಕಾಂಡಗಳನ್ನು ಅನುವಾದ ಮಾಡಿ ಕರ್ನಾಟಕದಾದ್ಯಂತ ವಿಖ್ಯಾತರಾದ ಶ್ರೀ ಶರ್ಮರ ಅನೂದಿತ ಕೃತಿಗಳು ಸುಮಾರು ಇಪ್ಪತ್ತರ ಗಡಿಯನ್ನು ದಾಟಿವೆ. ಸಂಪಾದಿತ ಕೃತಿಗಳಲ್ಲಿ ಡಿವಿಜಿಯವರ 'ಮರುಳ ಮುನಿಯನ ಕಗ್ಗ' ಸುಪ್ರಸಿದ್ಧ.

### ನ್ಯಾಯಾಧೀಶರಲ್ಲಿ ನಂಬಿಕೆ ಹುಟ್ಟಿಸಿದ ವ್ಯಕ್ತಿತ್ವ

ಈ ಲೇಖನ ಬರೆಯಲು ಪ್ರಾರಂಭಿಸುವುದಕ್ಕೆ ಮೊದಲು ಶ್ರೀ ಶರ್ಮರನ್ನು ಕಾಣಲು ಅವರ ಮನೆಗೆ ಹೋದಾಗ ಮಾತಿನ ಮಧ್ಯದಲ್ಲಿ ಸುಮಾರು ಮೂವತ್ತೈದು ನಲವತ್ತು ವರ್ಷಗಳ ಹಿಂದೆ ನಡೆದ ಒಂದು ಘಟನೆಯನ್ನು ಹೇಳಿದರು. ಚಾಮರಾಜಪೇಟೆಯಿಂದ ವಿಜಯನಗರಕ್ಕೆ ಸಿಟಿ ಬಸ್ಸಿನಲ್ಲಿ ತಮ್ಮ ಮನೆಗೆ ಶ್ರೀ ಶರ್ಮರು ಹೋಗುತ್ತಿದ್ದರು. ಅದೇ ಬಸ್ಸಿನಲ್ಲಿ ಅವರ ಪರಿಚಿತರೊಬ್ಬರು ಹಿಂದಿನ ಬಾಗಿಲಿನ ಎದುರಿನ ಸೀಟಿನಲ್ಲಿ ಕುಳಿತಿದ್ದರು. ಮಾಗಡಿರೋಡಿನ ರಾಜಾಜಿನಗರದ ತಿರುವಿನಲ್ಲಿ ವೇಗವಾಗಿ ಬಸ್ಸನ್ನು ತಿರುಗಿಸಿದ್ದರಿಂದ ಆ ರಭಸಕ್ಕೆ ಹಿಂದೆ ಕುಳಿತಿದ್ದ ಇವರ ಪರಿಚಿತರು ಹಿಂಬಾಗಿಲಿನಿಂದ ಹೊರಕ್ಕೆ ಎಸೆಯಲ್ಪಟ್ಟು ಅಲ್ಲಿಯೇ

ಮರಣಹೊಂದಿದರು. ಮುಂದಿನ ಅಂತ್ಯಸಂಸ್ಕಾರದವರೆಗಿನ ವ್ಯವಸ್ಥೆ ಮಾಡಿದ್ದಲ್ಲದೇ ಆರ್ಥಿಕವಾಗಿ ದುರ್ಬಲವಾಗಿದ್ದ ಅವರ ಕುಟುಂಬಕ್ಕೆ ಪರಿಚಿತರ ಮುಖಾಂತರ ಹಣ ಕೊಡಿಸಿ ಮುಂದಿನ ವಿಧಿ ವಿಧಾನಗಳನ್ನು ನಡೆಸಲು ನೆರವನ್ನೂ ಮಾಡಿದರು. ಆದರೆ ಇವರ ಕುಟುಂಬಕ್ಕೆ ಆರ್ಥಿಕವಾಗಿ ಸಹಾಯವಾಗಲೆಂದು ಮೃತರ ಪರಿಚಿತ ವಕೀಲರೊಬ್ಬರು ಇದನ್ನು ನ್ಯಾಯಾಲಯದಲ್ಲಿ ದಾಖಲಿಸಿ ಕೇಸು ನಡೆಸಿದರು. ಆಗ ಸಾಕ್ಷಿ ಹೇಳುವ ಪ್ರಸಂಗವು ಶ್ರೀ ಶರ್ಮರಿಗೆ ಬಂದೊದಗಿತು. "ಬಸ್ಸನ್ನೇರುವ ಮೆಟ್ಟಿಲಿನ ಮೇಲೆ ಆ ವ್ಯಕ್ತಿ ನಿಂತಿದ್ದರಿಂದ ಅವರು ಬಿದ್ದಿದ್ದಾರೆ. ಇದರಲ್ಲಿ ಚಾಲಕನ ತಪ್ಪಿಲ್ಲವೆನ್ನುವುದು" ಪ್ರತಿವಾದಿಗಳ ವಾದ. ಸಾಕ್ಷಿಯಾಗಿ ಬಂದಿದ್ದ ಶ್ರೀ ಶರ್ಮರ ಮಾತನ್ನು ಕೇಳಿ ನ್ಯಾಯಾಧೀಶರು ಹೇಳಿದರಂತೆ – 'ಇವರ ಮಾತನ್ನು ನಂಬುತ್ತೇನೆ' ಎಂದು! ಅನಂತರ ನಗರ ಸಾರಿಗೆಯ ಸಂಸ್ಥೆಯ ಮೂಲಕ ನ್ಯಾಯಾಲಯದ ತೀರ್ಪಿನಂತೆ ಮೃತರ ಕುಟುಂಬಕ್ಕೆ ಪರಿಹಾರ ಧನ ಸಿಕ್ಕಿತಂತೆ. ಇಲ್ಲಿ ಇನ್ನೊಂದು ವಿಷಯವನ್ನು ಹೇಳಿದರು. ಇಲ್ಲಿ ಚಾಲಕನ ತಪ್ಪೇನೂ ಅಷ್ಟಾಗಿ ಇರಲಿಲ್ಲ. ತಿರುವಿನಲ್ಲಿ ಅದು ಸಹಜ. ವಯಸ್ಸಾಗಿದ್ದ ಅವರು ಆ ರಭಸಕ್ಕೆ ಹೊರಗೆ ಬಿದ್ದರು. ಆದರೆ ಒಬ್ಬರಿಗೆ ಉಪಕಾರ ಮಾಡಲು ಹೋಗಿ ಬಡ ಚಾಲಕನಿಗೆ ತೊಂದರೆಯಾಗಬಾರದಷ್ಟೆ. ಅದಕ್ಕಾಗಿ ವಕೀಲರನ್ನು ಕೇಳಿ ಮೊದಲೇ ಖಚಿತಪಡಿಸಿಕೊಂಡಿದ್ದರಂತೆ – ಪರಿಹಾರಕೊಡುವವರು ಸಂಸ್ಥೆಯವರೇ ಹೊರತು ಚಾಲಕನಲ್ಲವೆಂದು.

ಒಬ್ಬ ವ್ಯಕ್ತಿಯ ನಡೆ – ನುಡಿಗಳ ಬಗ್ಗೆ ಇದಕ್ಕೂ ಮಿಗಿಲಾದ ಇನ್ನೊಂದು ಉದಾಹರಣೆ ಸಿಗಲಾರದು. ಪ್ರಾಮಾಣಿಕ, ಪ್ರಾಮಾಣಿಕತೆ ಎಂಬ ಶಬ್ದಗಳೇ ಶಬ್ದಕೋಶದಿಂದ ಬಹುದೂರ ಹೋಗುತ್ತಿರುವ ಈ ಕಾಲದಲ್ಲಿ ಪ್ರಾಮಾಣಿಕತೆಯ ಮೂರ್ತಿಮದ್ರೂಪವಾಗಿರುವ ಶ್ರೀ ಶರ್ಮರನ್ನು ಒಮ್ಮೆಯಾದರೂ ಕಣ್ತುಂಬ ನೋಡಬೇಕು, ಅವರೊಡನೆ ಎರಡು ಮಾತುಗಳನ್ನಾದರೂ ಆಡಬೇಕು.

ಮುಂದೆ ಹೇಳುವ ಘಟನೆಯೊಂದಿಗೆ ಈ ಲೇಖನವನ್ನು ಉಪಸಂಹರಿಸಲು ಬಯಸುತ್ತೇನೆ. 'ಶ್ರೀ ಶಂಕರಚರಿತಾಮೃತಂ' ಎಂಬ ಲಘುಕಾವ್ಯವನ್ನು ಬರೆದ ಮೇಲೆ ಶ್ರೀಶೃಂಗೇರಿಯ ಶಾರದಾಪೀಠಾಧೀಶ್ವರರಾದ ಜಗದ್ಗುರು ಶ್ರೀ ಶ್ರೀ ಶ್ರೀ ಭಾರತೀತೀರ್ಥಮಹಾಸ್ವಾಮಿಗಳ ದರ್ಶನ ಪಡೆದು ಕಾವ್ಯವನ್ನು ಶ್ರೀ ಶರ್ಮರು ಅವರ ಮುಂದಿಟ್ಟು ಅನುಗ್ರಹಸಂದೇಶವನ್ನು ಕೇಳಿದರು. ಸ್ವಯಂ ಕವಿಗಳೇ ಬಂದಿದ್ದೀರಿ. ತಮ್ಮ ಮುಖದಿಂದಲೇ ಓದಿಸಿ ಕೇಳಿಸಿ ಎಂದು ಹೇಳಿ ನಾಲ್ಕೈದು

ದಿನಗಳ ಕಾಲ ನಿಯತ ಸಮಯದಲ್ಲಿ ಇನ್ನೂರ ನಲುವತ್ತು ಶ್ಲೋಕಗಳನ್ನು ಜಗದ್ಗುರುಗಳು ಆಲಿಸಿ ಪ್ರತಿನಿತ್ಯವೂ ಬಹಳ ಆನಂದಪಟ್ಟು ಅನುಗ್ರಹಸಂದೇಶವನ್ನಿತ್ತರಂತೆ. ಜಗದ್ಗುರುಗಳವರಿಗೆ ಗ್ರಂಥ ನೀಡಿದ ಮೇಲೆ ಅವರು ಸ್ವಯಂ ಪರಿಶೀಲಿಸಿ ಅನುಗ್ರಹ ಸಂದೇಶ ನೀಡುವುದು ಪದ್ಧತಿ. ಆದರೆ ಈ ರೀತಿಯ ವಿಶೇಷಾನುಗ್ರಹಕ್ಕೆ ಪಾತ್ರರಾದವರು ಶ್ರೀ ಶರ್ಮರು ಮಾತ್ರ ಆಗಿರಬೇಕು. ಅದಕ್ಕೆ ಕಾರಣವೂ ಇದೆ. ಶೃಂಗೇರಿಯಲ್ಲಿ ಜಗದ್ಗುರುಗಳ ಸಾನ್ನಿಧ್ಯದಲ್ಲಿಯೇ ನಡೆಯುವ ಮಹಾಗಣಪತಿ ವಾಕ್ಯಾರ್ಥಸಭೆಯು ದೇಶ-ವಿದೇಶಗಳಲ್ಲೂ ಪ್ರಸಿದ್ಧ. ಈ ಸಭೆಯಲ್ಲಿ ಅಗಾಧಪಾಂಡಿತ್ಯವನ್ನು ಪಡೆದವರು ಮಾತ್ರ ಪ್ರವೇಶಮಾಡಲು ಅರ್ಹರಾಗಿರುತ್ತಾರೆ. ಶೃಂಗೇರಿಯ ಮಹಾಗಣಪತಿಯ ವಾಕ್ಯಾರ್ಥಸಭೆಯಲ್ಲಿ ಭಾಗವಹಿಸುವ ವಿದ್ವಾಂಸನೆಂದರೆ ವಿದ್ವತ್ಸಮಾಜದಲ್ಲಿಯೇ ಒಂದು ಗೌರವವಿದೆ. ಆ ಸಭೆಗೆ ಭಾಗವಹಿಸಲು ಆಮಂತ್ರಣ ಬಂದಿದೆ ಎನ್ನುವುದೇ ವಿದ್ವಾಂಸನ ವೈದುಷ್ಯಕ್ಕೆ ಒಂದು ಪ್ರಮಾಣಪತ್ರ. ಭಾರತದ ಎಲ್ಲ ರಾಜ್ಯಗಳಿಂದಲೂ ಬಂದ ವಿದ್ವನ್ಮೂರ್ಧನ್ಯರು ಈ ಸಭೆಯಲ್ಲಿ ವಿಷಯಮಂಡನೆಯನ್ನು ಜಗದ್ಗುರುಗಳ ಸನ್ನಿಧಿಯಲ್ಲಿ ಮಾಡುತ್ತಾರೆ. ಈ ಸಭೆಯಲ್ಲಿ ಶಾಸ್ತ್ರವಿಷಯಗಳ ಪ್ರಸ್ತಾವಕ್ಕೆ ಮಾತ್ರ ಅವಕಾಶ. ಇಂಥ ಸಭೆಗೆ ಹಲವಾರು ವರ್ಷಗಳವರೆಗೆ ಹೋಗಿ ವ್ಯಾಕರಣಶಾಸ್ತ್ರದ ವಿಷಯವನ್ನು ಮಂಡಿಸಿದವರು ಶ್ರೀ ಶರ್ಮರು. ಈಗ ವಾರ್ಧಕ್ಯದಿಂದಾಗಿ ಪ್ರವಾಸಮಾಡಲು ಆಗದೆ ಸಭೆಯಲ್ಲಿ ಭಾಗವಹಿಸಲಾಗುತ್ತಿಲ್ಲವೆಂಬ ವಿಷಾದ ಅವರ ಹೃದಯದಲ್ಲಿದೆ. ಹೀಗೆ ಶಾಸ್ತ್ರದಲ್ಲಿ ಅಗಾಧ ಪಾಂಡಿತ್ಯ ಹೊಂದಿದ ಶ್ರೀ ಶರ್ಮರ ಕಾವ್ಯಮುಖವನ್ನೂ ಅವರ ಮುಖದಿಂದಲೇ ಓದಿಸಿ ಕೇಳಲು ಜಗದ್ಗುರುಗಳು ಇಷ್ಟಪಟ್ಟಿದ್ದು.

ಈ ಲೇಖನದಲ್ಲಿ ಶ್ರೀ ಶರ್ಮರ ಸಮಯ ಪಾಲನೆ, ಕರಡು ತಿದ್ದುವ ರೀತಿ, ಗೌರವಪೂರ್ವಕವಾಗಿ ನಿವೇಶನವೊಂದನ್ನು ದಾನ ನೀಡಲು ಮುಂದಾದವರಿಗೆ 'ನನಗೆ ವಾಸಕ್ಕೆ ಸ್ವಂತ ಮನೆ ಇದೆ, ಅದರ ಅವಶ್ಯಕತೆ ಇಲ್ಲ' ಎಂದು ಹೇಳಿ ಆದರಪೂರ್ವಕವಾಗಿ ಅವರನ್ನು ಹಿಂದಿರುಗಿಸಿದ್ದು, ಮನೆಗೆ ಬಂದ ಪ್ರತಿಯೊಬ್ಬರಿಗೂ ಗೌರವ ನೀಡುವ ಬಗೆ ಮತ್ತು ಅತಿಥಿ ಸತ್ಕಾರ ಇವೇ ಮೊದಲಾದವನ್ನು ವಿಸ್ತರಿಸಿ ಬರೆಯಲಾಗದ್ದಕ್ಕೆ ಕ್ಷಮೆಯನ್ನು ಕೋರಿ ಈ ಪುಟ್ಟ ಲೇಖನವನ್ನು ಶ್ರೀ ಶರ್ಮರ ಚರಣಗಳಿಗೆ ಅರ್ಪಿಸುತ್ತೇನೆ.

(2009ರಲ್ಲಿ ಪ್ರಕಟವಾದ 'ಶಿಷ್ಯರು ಕಂಡಂತೆ ಗುರುಗಳು' ಎಂಬ ಪುಸ್ತಕದಿಂದ ಉದ್ಧೃತ)

*****

## ನೆನಪು

ವಿದ್ವಾನ್. ಯಲ್ಲಾಪುರ ಕೃಷ್ಣಶರ್ಮಾ, ಬೆಂಗಳೂರು

ವಿದ್ವಾನ್. ಎನ್. ರಂಗನಾಥ ಶರ್ಮಾ ಅವರು ಇತ್ತೀಚಿನ ಆರೆಂಟು ವರ್ಷಗಳಿಂದ ತಮ್ಮಿಬ್ಬರು ಮೊಮ್ಮಕ್ಕಳ ಕಾಲೇಜು ವಿದ್ಯಾಭ್ಯಾಸದ ನಿಮಿತ್ತ ಬೆಂಗಳೂರು ಗಿರಿನಗರ ಬಡಾವಣೆಯಲ್ಲೊಂದು ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದರು. ನನಗೆ ಅವರ ಪರಿಚಯವಿತ್ತಾದರೂ ಸಾಮೀಪ್ಯದ ಬಳಕೆಯಿರಲಿಲ್ಲ. ನಾನೊಬ್ಬ ಸಾಮಾನ್ಯರಲ್ಲಿ ಸಾಮಾನ್ಯನಾದುದರಿಂದ ನನಗೆ ಆ ಮಹಾಮಹಿಮರ ಸಾಮೀಪ್ಯದ ಅವಕಾಶವು ಸಾಧ್ಯವೂ ಇರಲಿಲ್ಲ. ಇದೀಗ ಅವರು ಗಿರಿನಗರದಲ್ಲೇ ವಾಸವಾಗಿದ್ದಾರೆಂದು ಕೇಳಿ ತುಂಬಾ ಸಂತಸವಾಯಿತು.

ಶ್ರೀಮಾನ್ ರಂಗನಾಥ ಶರ್ಮರು ರಾಷ್ಟ್ರಖ್ಯಾತಿಯ ಸುಪ್ರಸಿದ್ಧ ವೈಯಾಕರಣರು ಹಾಗೂ ಕನ್ನಡದ ಶ್ರೇಷ್ಠ ಲೇಖಕರಲ್ಲಿ ಒಬ್ಬರು. ಆದರೆ ಅವರ ನಡೆನುಡಿಗಳೆಲ್ಲವೂ ತುಂಬ ಸರಳ. ಎಲ್ಲರನ್ನೂ ಕೂಡ ವಿಶ್ವಾಸದಿಂದ ಆತ್ಮೀಯತೆಯಿಂದ ಕಾಣುವ ಸ್ವಭಾವ ಅವರದು. ಅಪರಿಚಿತರನ್ನೂ ಸಹ ಚಿರಪರಿಚಿತರೆಂಬಂತೆ ಸ್ನೇಹ ಸೌಹಾರ್ದದಿಂದ ಕಂಡು ಆದರಾತಿಥ್ಯ ನೀಡಿ, ಕಾಣಲು ಬಂದವರ ಜಿಜ್ಞಾಸೆಗಳಿಗೆ ಸಮಂಜಸದ ಸಮಾಧಾನ ಹೇಳಿ ಮನೆಯಂಗಳದ ತುದಿಯವರೆಗೂ ಹೋಗಿ ಆತ್ಮೀಯತೆಯಿಂದ ಬೀಳ್ಕೊಡುವ ಜಾಯಮಾನ ಅವರದು. ನನ್ನಂತಹ ಸಾಮಾನ್ಯನಲ್ಲೂ ಕೂಡ ಅವರ ಈ ಬಗೆಯ ಸೌಜನ್ಯಾತಿಶಯವನ್ನು ಕಂಡು ನಮ್ಮಷ್ಟಕ್ಕೆ ನಾವು ಮುಜುಗರದಿಂದ ಕುಗ್ಗಿಹೋಗುತ್ತೇವೆ.

ಶ್ರೀ ಶರ್ಮರ ಅಭಿಮಾನಿ ಬಳಗ ದೊಡ್ಡದು. ದಿನವೂ ಹತ್ತಾರು ಜನ ಅವರನ್ನು ಕಾಣಲು ಬರುತ್ತಿದ್ದರು. ಅವರಿಂದ ಏನಾದರೂ ಪಾಠವನ್ನು ಹೇಳಿಸಿಕೊಳ್ಳಬೇಕೆಂಬುದು ಬಹುಜನರ ಅಪೇಕ್ಷೆ. ಸಿದ್ಧಾಂತಕೌಮುದೀ, ವೇದಾಂತಪರಿಭಾಷೆ, ಭಗವದ್‌ಗೀತೆ ಹೀಗೆ ಒಂದಿಲ್ಲೊಂದು ಗ್ರಂಥದ ಪಾಠಪ್ರವಚನವನ್ನು ಶ್ರೀ ಶರ್ಮರ ಮುಖದಿಂದ ಕೇಳಬಯಸಿ ಕೆಲವರು ಬರುತ್ತಿದ್ದರು. ಶ್ರೀ ಶರ್ಮರು ಕೊಂಚವೂ ಬೇಸರಿಸದೇ ಒಂದೊಂದು ದಿನ ಒಂದೊಂದು ಗ್ರಂಥದ ಪ್ರವಚನ ಇಟ್ಟುಕೊಳ್ಳುತ್ತಿದ್ದರು. 'ಶ್ರೋತ್ರಾರ್ಹಂತೀಚಣ್ಯೈರ್ಗುಣ್ಯೈಃ' ಎಂತಲೋ 'ಕರ್ಮಣ್ಯಕರ್ಮ ಯಃ ಪಶ್ಯೇತ್' ಎಂತಲೋ ಪಾಠ ಜರುಗುತ್ತಿರುವಾಗ ಒಮ್ಮೊಮ್ಮೆ ನಾನೂ ಅಲ್ಲೇ ಕುಳಿತು "ಶ್ರುತಂ ಹರತಿ ಪಾಪಾನಿ" ಎಂದುಕೊಂಡು ಪಾಠ ಕೇಳುತ್ತಿದ್ದೆ. ಯಾವ ಸಂಸ್ಕಾರವಾಗಲಿ ವ್ಯುತ್ಪತ್ತಿಯಾಗಲಿ ಇಲ್ಲದ ನನಗೆ ಆ

ಪಾಠದ ಅರ್ಥವನ್ನು ಗ್ರಹಿಸಲಾಗುತ್ತಿರಲಿಲ್ಲವೆಂಬುದು ಬೇರೆ ವಿಚಾರ.

ನಾಲ್ಕಾರು ಸಲ ಅವರಲ್ಲಿಗೆ ಹೋಗಿ ಬರುತ್ತಿರುವಷ್ಟರಲ್ಲಿ ನನ್ನನ್ನವರು ತಮ್ಮ ನಿಕಟವರ್ತಿಯೆಂಬಂತೆಯೇ ನೋಡಿಕೊಳ್ಳತೊಡಗಿದರು. ತೊಂಬತ್ತರ ವಯಸ್ಸಿನಲ್ಲೂ ಸಹ ಅಧ್ಯಯನ ಹಾಗೂ ಬರವಣಿಗೆಯ ವಿಷಯದಲ್ಲಿ ಅವರಿಗೆ ಅದಮ್ಯವಾದ ಉತ್ಸಾಹವಿತ್ತು. ದೃಷ್ಟಿಪಾಟವ ಕುಗ್ಗುವವರೆಗೂ ಅವರು ಸ್ವತಃ ಬರೆಯುತ್ತಿದ್ದರು. ವಯೋಧರ್ಮಕ್ಕನುಸಾರವಾಗಿ ದೃಷ್ಟಿಶಕ್ತಿ ಕುಗ್ಗಿದಾಗ ಇನ್ನಾರಾದರೂ ಅವರ ಬರವಣಿಗೆಗೆ ಸಹಕಾರ ನೀಡುತ್ತಿದ್ದರು, ಪುಸ್ತಕಗಳಿಗೆ ಮುನ್ನುಡಿ, ಪತ್ರಿಕೆಗಳಿಗೆ ಲೇಖನ, ಸ್ಮರಣಸಂಚಿಕೆಗಳಿಗೆ, ಅಭಿನಂದನ ಗ್ರಂಥಕ್ಕೆ ಬರಹ ಹೀಗೆ ಅವರ ಬರಹಗಳಿಗೆ ನಾಡಿನ ಉದ್ದಗಲಕ್ಕೂ ಬೇಡಿಕೆಯಿತ್ತು. ಎಷ್ಟೋ ಜನ ಲೇಖಕರು ತಮ್ಮ ಹೊಸ ಪುಸ್ತಕವನ್ನು ಶ್ರೀ ಶರ್ಮರಿಗೆ ಕಳಿಸಿಕೊಟ್ಟಾಗ ಆ ಪುಸ್ತಕದ ಕೆಲವು ಭಾಗಗಳನ್ನಾದರೂ ಅವರು ಓದುತ್ತಿದ್ದರು ಅಥವಾ ಓದಿಸಿ ಕೇಳುತ್ತಿದ್ದರು. ಡಾ॥ ಎಂ. ಚಿದಾನಂದಮೂರ್ತಿ, ಪಂಡಿತ ಎನ್.ವಿ. ಅನಂತರಾಮಯ್ಯ, ಶತಾವಧಾನಿ ಆರ್. ಗಣೇಶ ಮುಂತಾಗಿ ಅನೇಕ ಜನ ವಿದ್ವಾಂಸರು ಆಗಾಗ ದೂರವಾಣಿಯ ಮೂಲಕ ಶರ್ಮರೊಡನೆ ಮಾತಾಡಿ ತಮ್ಮ ಶಂಕೆಗೆ ಸಮಾಧಾನ ಪಡೆಯುತ್ತಿದ್ದರು.

ವಿಜಯನಗರವನ್ನು ಬಿಟ್ಟು ಗಿರಿನಗರಕ್ಕೆ ಬಂದಾಗ ವಯೋಧರ್ಮಕ್ಕನುಗುಣವಾಗಿ ಅವರ ದೇಹಾರೋಗ್ಯವೂ ಕುಂಠಿತವಾಗುತ್ತಾ ಬಂದಿತ್ತು. ಸೊಂಟನೋವು, ಕತ್ತುನೋವು ಹಾಗೂ ದೀರ್ಘಕಾಲದಿಂದಲೂ ಬಾಧಿಸುತ್ತಿದ್ದ ಸರ್ಪಸುತ್ತಿನಿಂದಾಗಿ ಅವರು ದೈಹಿಕವಾಗಿ ತುಂಬ ಕ್ಲೇಶಪಡುತ್ತಿದ್ದರು. ನಿದ್ದೆಯೇ ಬರುತ್ತಿರಲಿಲ್ಲವಂತೆ. ಬಹುದಿನಗಳಿಂದಲೂ ನಾನು "ಅನಿಮಿಷತ್ವ"ಪದವಿಗೇರಿದ್ದೇನೆ ಎಂಬುದಾಗಿ ಅವರು ಆಗಾಗ ಹೇಳುತ್ತಿದ್ದರು. ಸ್ಥಿತಪ್ರಜ್ಞತೆಯನ್ನು ಮೈಗೂಡಿಸಿಕೊಂಡ ಅವರು ಶಾರೀರಿಕ ಕ್ಲೇಶವನ್ನು ಮೌನವಾಗಿ ಸಹಿಸಿಕೊಂಡು ಬಂದವರೊಡನೆ ನಗುನಗುತ್ತಲೇ ಮಾತಾಡುತ್ತಿದ್ದರು. ಮರ್ಯಾದಾಪುರುಷೋತ್ತಮ ಶ್ರೀರಾಮಚಂದ್ರನ ಸಾತ್ವಿಕ ಗುಣಗಣವನ್ನೆಲ್ಲಾ ತಮ್ಮಲ್ಲಿ ನೆಲೆಗೊಳಿಸಿಕೊಂಡು ಆದರ್ಶ ಜೀವನವನ್ನು ಬಾಳುತ್ತಾ ಸಾಂಸ್ಕೃತಿಕವಾಗಿ ಅವರು ಸಮಾಜಕ್ಕೆ ನೀಡಿದ ಸಾರಸ್ವತ ಕೊಡುಗೆ ಅಪಾರ ಹಾಗೂ ಶಾಶ್ವತವಾದುದು.

ಪ್ರಾಥಮಿಕ ಮಾಧ್ಯಮಿಕ ಶಾಲೆಗಳನ್ನು ನಡಹಳ್ಳಿ ಸೊರಬಗಳಲ್ಲಿ ಪೂರೈಸಿದಾಗ ಹೈಸ್ಕೂಲು ಸೇರಲು ಮನೆಯಲ್ಲಿನ ಆರ್ಥಿಕ ಮುಗ್ಗಟ್ಟಿನಿಂದಾಗಿ ಸಾಧ್ಯವಾಗಲಿಲ್ಲ. ಕಾರಣ ಅಗಡಿ ಆನಂದವನದ ಪಾಠಶಾಲೆಗೆ ಸೇರಿ ಸಂಸ್ಕೃತಾಭ್ಯಾಸವನ್ನು ಆರಂಭಿಸಿದರಂತೆ. ಅಲ್ಲಿನ ಆಹಾರ ಹಾಗೂ ವಾತಾವರಣ ಬಾಲಕ ಶರ್ಮರಿಗೆ

ಓಡಿಸಲಿಲ್ಲ. ಆರೋಗ್ಯ ಬಿಗಡಾಯಿಸಿದ ಕಾರಣ ಐದಾರು ತಿಂಗಳಲ್ಲೇ ಅಲ್ಲಿಂದ ವಾಪಸ್ ಊರಿಗೆ ಬಂದು ಕೆಳದಿಯ ಪಾಠಶಾಲೆಗೆ ಸೇರಿದರಂತೆ. ಕೆಳದಿಯ ನಂಜುಂಡ ಜೋಯಿಸರ ಮನೆಯಲ್ಲಿ ವಾರಾನ್ನದ ಅವಕಾಶವಾಗಿತ್ತೆಂದು ಕೆಳದಿಯ ಡಾ॥ ಕೃಷ್ಣ ಜೋಯಿಸರು ಹೇಳಿದ್ದರು. ಕೆಳದಿ ಪಾಠಶಾಲೆಯಲ್ಲಿ ಆಗ ಶ್ರೀ ಕೇಶವ ಶಾಸ್ತ್ರಿಗಳು ಶ್ರೀ ನಾರಾಯಣಶಾಸ್ತ್ರಿಗಳು ಅಧ್ಯಾಪಕರಾಗಿದ್ದರಂತೆ. ಪ್ರತಿಭಾವಂತ ಬಾಲಕ ರಂಗನಾಥ ಶರ್ಮರನ್ನು ಕಂಡರೆ ಅವರಿಬ್ಬರಿಗೂ ತುಂಬ ವಾತ್ಸಲ್ಯವಿತ್ತಂತೆ. ಕಾವ್ಯ ಪರೀಕ್ಷೆಯ ಕೇಂದ್ರ ಬೆಂಗಳೂರು. ಪರೀಕ್ಷೆಯಲ್ಲಿ ಮೊದಲ ಸ್ಥಾನ. ಮುಂದಿನ ಓದಿಗೆ ಬೆಂಗಳೂರಿಗೆ ಹೋಗಲು ದುಡ್ಡಿನ ಅನುಕೂಲವಿಲ್ಲ. ಓದಲೇಬೇಕೆಂಬ ಛಲದಿಂದ ಬೆಂಗಳೂರಿಗೆ ಬಂದುದಾಯಿತು. ನಾಲ್ಕು ದಿನ ವಾರಾನ್ನ. ಮೂರು ದಿನ ಭಿಕ್ಷಾನ್ನ. ಭಿಕ್ಷಾನ್ನದ ಊಟಕ್ಕೆ ತಟ್ಟೆಯಿಲ್ಲ. ಸಿಮೆಂಟಿನ ನೆಲವನ್ನು ತೊಳೆದು ಅಲ್ಲಿ ಅನ್ನವನ್ನಿಟ್ಟುಕೊಂಡು ಊಟಮಾಡಬೇಕು. ಹಾಸಿಗೆ ಹೊದಿಕೆಯೇನೂ ಇಲ್ಲ. ಅಂದಿನ ಶ್ರೀ ಶರ್ಮರ ಬವಣೆಯನ್ನು ಕೇಳುವಾಗ ನಮ್ಮ ಕಣ್ಣಲ್ಲಿ ನೀರು ಒಸರುತ್ತದೆ. ಓದಬೇಕೆಂಬ ಉತ್ಸಾಹವೇ ಅವರನ್ನು ಕೈಹಿಡಿದು ನಡೆಸಿತ್ತು.

ವ್ಯಾಕರಣ ಅಲಂಕಾರ ಶಾಸ್ತ್ರಗಳಲ್ಲಿ ವಿದ್ವತ್ ಪರೀಕ್ಷೆಗಳನ್ನೂ ಕನ್ನಡ ವಿದ್ವಾನ್ ಪರೀಕ್ಷೆಯನ್ನೂ ಪೂರೈಸಿ ಬೇಲೂರಿನ ಸಂಸ್ಕೃತ ಪಾಠಶಾಲೆಯಲ್ಲಿ ಅಧ್ಯಾಪಕ ವೃತ್ತಿಗೆ ಸೇರಿಕೊಂಡರಂತೆ. ಅನಂತರ ಮೈಸೂರು ಹಾಸನ ಕಡೂರುಗಳಲ್ಲಿ ಕೆಲವು ಕಾಲ ಹೈಸ್ಕೂಲುಗಳಲ್ಲಿ ಕೆಲಸ ಮಾಡಿ ಬೆಂಗಳೂರು ಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆಯಲ್ಲೇ ಕೆಲಸವಾಯಿತಂತೆ. ಆರಂಭದಲ್ಲಿ ತಿಂಗಳಿಗೆ ಅರವತ್ತು ರೂಪಾಯಿ ಸಂಬಳ. ಆಮೇಲಾಮೇಲೆ ತೊಂಬತ್ತು, ನೂರೈವತ್ತು ರೂಪಾಯಿ ಸಂಬಳ. ಕಷ್ಟದ ಜೀವನ. ನಾಲ್ಕು ಜನ ಮಕ್ಕಳ ವಿದ್ಯಾಭ್ಯಾಸ. ಅವರ ಮದುವೆಯ ವ್ಯವಸ್ಥೆ ಮುಂತಾದ ಖರ್ಚುಗಳು ಇದ್ದೇ ಇವೆ. ಅಂದಿನ ಈ ಸಣ್ಣ ಸಂಬಳದಲ್ಲೇ ಸಂಸಾರ ನಿರ್ವಹಣೆ ಮಾಡಿದ್ದಲ್ಲದೇ ಶ್ರೀ ಶರ್ಮರು ವಿಜಯನಗರ ಬಡಾವಣೆಯಲ್ಲೊಂದು ಸ್ವಂತ ಮನೆ ಮಾಡಿದ ನಂತರ ಅಲ್ಲಿ ವಾಸವಾಗಿದ್ದರು.

ಹೊಳೆನರಸೀಪುರದ ಪೂಜ್ಯ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರು ಅದ್ವೈತದರ್ಶನದ ಎಲ್ಲ ಗ್ರಂಥಗಳನ್ನೂ ಕನ್ನಡಕ್ಕೆ ತಂದ ಮಹನೀಯರು. ಡಿವಿಜಿ ಅವರಿಗೆ ಆ ಮಹಾಸ್ವಾಮಿಗಳವರ ಬಗೆಗೆ ತುಂಬ ಗೌರವವಿತ್ತು ಎಂಬುದಾಗಿ ಶ್ರೀ ಶರ್ಮರು ನೆನಪಿಸಿಕೊಳ್ಳುತ್ತಿದ್ದರು. ಬ್ರಹ್ಮಪತ್ತನಭಿಕ್ಷುಶ್ರೀ ಡಿವಿಜಿ ಅವರ 'ಮರುಳ ಮುನಿಯನ ಕಗ್ಗ'ವನ್ನು ಶ್ರೀ ಶರ್ಮರು ಸಂಪಾದಿಸಿಕೊಟ್ಟು 'ಮಂಕುತಿಮ್ಮನ ತಮ್ಮ'

ಎಂಬ ಗೌರವಕ್ಕೆ ಪಾತ್ರರಾಗಿದ್ದರು. ಕನ್ನಡದ ಸಂದರ್ಭದಲ್ಲಿ ಒಬ್ಬರ ನೆನಪಿನೊಂದಿಗೆ ಇನ್ನೊಬ್ಬರ ನೆನಪೂ ಬೆಸೆದುಕೊಂಡೇ ಇರುವ ಹಾಗೆ ಡಿವಿಜಿ ಹಾಗೂ ರಂಗನಾಥ ಶರ್ಮಾ ಇಬ್ಬರೂ ಒಬ್ಬರ ನೆನಪಿನೊಂದಿಗೆ ಇನ್ನೊಬ್ಬರೂ ಕೂಡ ನಮ್ಮ ಮನಃಪಟಲದಲ್ಲಿ ಹಾದುಹೋಗುತ್ತಾರೆ.

ಕಣ್ಣು ಹೋದುದರ ಪರಿಣಾಮ ಕೊನೆಯ ನಾಲ್ಕಾರು ವರ್ಷಗಳ ಕಾಲ ಶ್ರೀ ರಂಗನಾಥ ಶರ್ಮಾ ಅವರು ದೈಹಿಕವಾಗಿ ಕ್ಲೇಶಕ್ಕೀಡಾಗಬೇಕಾಯಿತು. ಅವರ ಮಕ್ಕಳು ಸೊಸೆ ಎಲ್ಲರೂ ಕೂಡ ಅವರನ್ನು ಚೆನ್ನಾಗಿ ನೋಡಿಕೊಂಡಿದ್ದಾರೆ. ಸೇವೆ ಶುಶ್ರೂಷೆಯ ಬಗೆಗೆ ಅವರಿಗೇನೂ ಕೊರತೆಯಾಗಲಿಲ್ಲ. ಬೆಂಗಳೂರಿನಲ್ಲಿ ಶ್ರೀ ಶರ್ಮರ ಅಭಿಮಾನಿಗಳು ಪರಿಚಿತರು ತುಂಬ ಜನ ಇದ್ದಾರೆ. ಹಾಗಾಗಿ ಬೆಂಗಳೂರನ್ನು ಬಿಟ್ಟು ಮೈಸೂರಿಗೆ ಹೋಗುವ ಸಂದರ್ಭವೊದಗಿದಾಗ ಅವರ ಮನಸ್ಸಿಗೆ ಕೊಂಚ ನೋವಾದಂತಿತ್ತು. ಆದರೆ ಅಲ್ಲಿ ಅವರಿಗೆ ಯಾವ ಕೊರತೆಯೂ ಎದುರಾಗಲಿಲ್ಲ. ಬೆಂಗಳೂರಿನಂತೆಯೇ ಮೈಸೂರಿನಲ್ಲೂ ಅವರ ಅಭಿಮಾನಿಗಳು, ಶಿಷ್ಯರು, ಸಹೃದಯ ವಿದ್ವಾಂಸರು ಬೇಕಾದಷ್ಟು ಜನ ಇದ್ದಾರೆ. ಡಾ|| ಟಿ.ವಿ. ವೆಂಕಟಾಚಲಶಾಸ್ತ್ರಿಗಳು, ವಿದ್ವಾನ್ ಹೆಚ್.ವಿ. ನಾಗರಾಜರಾವ್, ಡಾ|| ಟಿ.ವಿ. ಸತ್ಯನಾರಾಯಣ, ಐನಕೈ ಶ್ರೀ ರವೀಂದ್ರ ಭಟ್ಟ ಮುಂತಾಗಿ ಅನೇಕರು ಮೈಸೂರು ಮಿತ್ರರು ಆಗಾಗ ಶ್ರೀ ಶರ್ಮರನ್ನು ಕಾಣಲು ಬರುತ್ತಿದ್ದರಂತೆ. ಶ್ರೀ ಶರ್ಮರು ಬೆಂಗಳೂರು ಬಿಟ್ಟು ಮಗನೊಡನೆ ಮೈಸೂರಿಗೆ ಹೊರಟು ನಿಂತಾಗ ಗಿರಿನಗರ ನಿವಾಸಿ ಆತ್ಮೀಯ ಶ್ರೀ ಬಿ. ಕೃಷ್ಣಭಟ್ಟರು ತಮ್ಮ ಶ್ರೀ ಗಣಪತಿ ದೇವಸ್ಥಾನದ ಎದುರು ಶ್ರೀ ಶರ್ಮರನ್ನು ಸ್ವಾಗತಿಸಿ ಶ್ರೀ ಮಹಾಗಣಪತಿಯ ಸಮ್ಮುಖದಲ್ಲಿ ಶ್ರೀ ಶರ್ಮರಿಗೆ ಶಾಲು ಹೊದೆಸಿ ಫಲ ತಾಂಬೂಲ ನೀಡಿ ಗೌರವಿಸಿ ಸುಖಪ್ರಯಾಣವನ್ನು ಕೋರಿ ಬೀಳ್ಕೊಟ್ಟಿದ್ದರು.

ಮೌಲಿಕ, ಅನುವಾದ, ಸಂಪಾದನೆ ಎಂಬುದಾಗಿ ಯಾವುದೇ ಬಗೆಯ ಕೃತಿಯಿರಲಿ, ಶ್ರೀ ಶರ್ಮರು ಆ ಪುಸ್ತಕದ ಅಧ್ಯಯನಕ್ಕೆ ಪೂರಕವಾದ ಪ್ರಸ್ತಾವನೆ ಅನುಬಂಧ ಟಿಪ್ಪಣಿಗಳನ್ನು ಒದಗಿಸುವುದು ಅವರ ಜಾಯಮಾನ. ವಾಲ್ಮೀಕಿ ರಾಮಾಯಣದ, ಶ್ರೀ ಶಂಕರ ದಿಗ್ವಿಜಯದ ಅನುವಾದ ಕೃತಿಗಳನ್ನು ನೋಡಿದ ಯಾರಿಗಾದರೂ ಕೂಡ ಈ ವಿಚಾರ ಮನದಟ್ಟಾಗುತ್ತದೆ. ಪರಿಷತ್ತಿನ ಹಳಗನ್ನಡ ಕಾವ್ಯಗಳ ಹೊಸಗನ್ನಡ ಗದ್ಯಾನುವಾದ ಸಮಿತಿಯ ಅಧ್ಯಕ್ಷರಾಗಿ ಕಾರ್ಯವನ್ನು ನಿರ್ವಹಿಸಿದ ಶ್ರೀ ಶರ್ಮರು ಹದಿಮೂರು ಕೃತಿಗಳಿಗೂ ಕೂಡ ಆಯಾ ಗ್ರಂಥದ ಅಧ್ಯಯನಕ್ಕೆ, ಓದಿಗೆ ಪೂರಕವಾದ ಅತ್ಯುತ್ತಮ ಮುನ್ನುಡಿಗಳನ್ನು ಬರೆದು

ಸೇರಿಸಿದ್ದಾರಂತೆ. ಪಂಪನ ಆದಿಪುರಾಣದ ಸಂಪಾದನೆಯ ಸಂದರ್ಭದಲ್ಲಿ ಅದರ ಮೂಲ ಸಂಸ್ಕೃತದ ಪೂರ್ವಪುರಾಣವನ್ನು ಎದುರಿಗಿಟ್ಟುಕೊಂಡು ಪಾಠ ಪರಿಷ್ಕರಣ ಮಾಡಿ ಸಮರ್ಥವಾದ ರೀತಿಯಲ್ಲಿ ಸಂಪಾದಿಸಿಕೊಟ್ಟಿದ್ದಾರೆಂಬುದನ್ನು ಡಾ॥ ಮಲ್ಲೇಪುರಂ ಜಿ. ವೆಂಕಟೇಶ ಅವರು ಸಭೆಯೊಂದರಲ್ಲಿ ಹೇಳಿದ್ದನ್ನು ನಾನು ಕೇಳಿದ್ದೇನೆ. ಪರಿಷತ್ತಿನ ವತಿಯಿಂದ ಇದೀಗ ಆ ಕೆಲವು ಗ್ರಂಥಗಳ ಮರುಮುದ್ರಣದಲ್ಲಿ ಶ್ರೀ ಶರ್ಮರ ಮುನ್ನುಡಿಯನ್ನು ಕೈಬಿಡಲಾಗಿದೆಯೆಂದು ಯಾರೋ ಹೇಳಿದರು. ಇದು ನಿಜಕ್ಕೂ ವಿಷಾದದ ಸಂಗತಿ. ಶ್ರೀ ಶರ್ಮರ ಮುನ್ನುಡಿಗಿಂತ ಉತ್ತಮವಾದ ಮುನ್ನುಡಿಯನ್ನು ಸಮರ್ಥ ವಿದ್ವಾಂಸರಿಂದ ಬರೆಯಿಸಿ ಸೇರಿಸಿದಾಗಲೂ ಕೂಡ ಮೊದಲ ಮುದ್ರಣದಲ್ಲಿನ ಮುನ್ನುಡಿಯನ್ನೂ ಸಹ ಮುದ್ರಿಸುವುದು ಅಪೇಕ್ಷಿತವೆಂಬುದು ನನ್ನ ವೈಯಕ್ತಿಕ ಅಭಿಪ್ರಾಯ.

ಶ್ರೀ ರಂಗನಾಥ ಶರ್ಮರು ಯದೃಚ್ಛಾಲಾಭಸಂತುಷ್ಟರಾಗಿದ್ದರು. ಸಂಮಾನ ಬಿರುದುಗಳಿಗೆ ಅವರು ಎಂದೂ ಹಾತೊರೆದವರಲ್ಲ. ರಾಷ್ಟ್ರ, ರಾಜ್ಯಮಟ್ಟದ ಅನೇಕ ಸಂಮಾನಗಳು ಅವರಿಗೆ ಸಂದಿವೆ. ಮೊನ್ನೆ ಇತ್ತೀಚೆಗೆ (9.11.12) ಕರ್ನಾಟಕ ಸಂಸ್ಕೃತ ವಿಶ್ವ ವಿದ್ಯಾಲಯದ ವತಿಯಿಂದ ಬೆಂಗಳೂರಿನ ರಾಜಭವನದಲ್ಲಿ ಕರ್ನಾಟಕದ ಮಾನ್ಯ ರಾಜ್ಯಪಾಲರು ಶ್ರೀ ರಂಗನಾಥ ಶರ್ಮರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಸಂಮಾನಿಸಿದ್ದರು.

"ದುಃಖೇಷ್ವನುದ್ವಿಗ್ನಮನಾಃ ಸುಖೇಷು ವಿಗತಸ್ಪೃಹಃ" ಎಂಬಂತೆ ನಿರ್ಲಿಪ್ತಭಾವವೇ ಅವರ ಸ್ಥಾಯೀಭಾವವಾಗಿತ್ತು.

ಶ್ರೀ ಶರ್ಮರು ಸೊರಬದ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಶ್ರೀ ವೆಂಕಟೇಶ ಎಂಬವನೊಬ್ಬ ಇವರ ಸಹಪಾಠಿಯಿದ್ದನಂತೆ. ಅವನ ತಂದೆ ಆಗ ಸೊರಬದಲ್ಲಿ ಅಮಲದಾರರಾಗಿದ್ದರಂತೆ, ಶ್ರೀ ವೆಂಕಟೇಶ ಅವರು ಮುಂದೆ ಶಾಲೆ ಕಾಲೇಜುಗಳಲ್ಲಿ ಓದಿ ದೊಡ್ಡ ದೊಡ್ಡ ಪರೀಕ್ಷೆಗಳಲ್ಲಿ ಪಾಸಾಗಿ ಬೇರೆ ಬೇರೆ ಹುದ್ದೆಗಳನ್ನು ಅಲಂಕರಿಸಿ ಕರ್ನಾಟಕ ಸರಕಾರದ ಕಾರ್ಯದರ್ಶಿಯಾಗಿ ದೊಡ್ಡ ಹೆಸರು ಗಳಿಸಿ ನಿವೃತ್ತರಾದರಂತೆ. ಇವರೇ ಶ್ರೀಮಾನ್ ಜಿ.ವಿ.ಕೆ. ರಾವ್.

ಶ್ರೀ ರಾವ್ ಅವರು ಶ್ರೀ ಶರ್ಮರನ್ನೊಮ್ಮೆ ಬೆಂಗಳೂರಿನಲ್ಲಿ ತಮ್ಮ ಮನೆಗೆ ಬರಮಾಡಿಕೊಂಡು ಆತಿಥ್ಯ ನೀಡಿ ಲೋಕಾಭಿರಾಮದ ಮಾತುಕತೆಯ ಸಂದರ್ಭದಲ್ಲಿ – ಶರ್ಮರೇ, ಅಂದು ನೀವೂ ಕೂಡ ಕಾಲೇಜಿನಲ್ಲಿ ಓದಿ ಇಂಗ್ಲೀಷ್ ಪದವಿ ಗಳಿಸಿದ್ದರೆ ಸರಕಾರದ ಯಾವುದಾದರೂ ಹುದ್ದೆಯನ್ನು ಪಡೆಯಬಹುದಿತ್ತಲ್ಲವೇ? ಎಂದು ಕೇಳಿದರಂತೆ. ಅದಕ್ಕೆ ಶರ್ಮರು– "ಹೌದು, ಪಡೆಯಬಹುದಿತ್ತು!

ಆದರೆ ಸಂಸ್ಕೃತ ವಿದ್ಯೆಯಿಂದ ವಂಚಿತನಾಗಿಬಿಡುತ್ತಿದ್ದೆ. ಇಂಗ್ಲೀಷ್ ವಿದ್ಯಾಭ್ಯಾಸ ಮುಂದುವರಿಸಿದ್ದಾಗಿದ್ದರೆ ನಾನೂ ಕೂಡ ತಮ್ಮ ಹಾಗೆಯೇ ದೊಡ್ಡ ಹುದ್ದೆ ದೊಡ್ಡ ಸಂಬಳಗಳನ್ನು ಪಡೆಯಬಹುದಿತ್ತೇನೋ! ಆದರೆ ಸಂಸ್ಕೃತ ಸಾಹಿತ್ಯದ ಓದಿನಿಂದ ದೊರಕಬಹುದಾದ ಸಂಸ್ಕಾರ ಹಾಗೂ ಆನಂದಗಳು ನನಗೆ ದೊರಕುತ್ತಿರಲಿಲ್ಲ. ಸಂಸ್ಕೃತದ ಓದಿನಿಂದಾಗಿ ನನಗೆ ಇದ್ದುದರಲ್ಲೇ ಧನ್ಯತಾಭಾವವಿದೆ" ಎಂದರಂತೆ!


ತೃಷ್ಣಾಕ್ಷಯಸುಖಸ್ಯೈತೇ ನಾರ್ಹತಃ ಷೋಡಶೀಂ ಕಲಾವ್ ।

ಮಹಾಮಹೋಪಾಧ್ಯಾಯ ಶ್ರೀ ವಿದ್ವಾನ್ ಎನ್. ರಂಗನಾಥ ಶರ್ಮಾ ಅವರಲ್ಲಿ ಸಂಸ್ಕೃತ ವ್ಯಾಕರಣವನ್ನು ನೂರಾರು ಸಾವಿರಾರು ಜನರು ಓದಿದ್ದಾರೆ. ಅವರ ಶಿಷ್ಯ ಸಂಪತ್ತು ಬಹಳ ದೊಡ್ಡದು. ಶ್ರೀಮಾನ್ ವಿದ್ವಾನ್ ಜಿ. ಮಹಾಬಲೇಶ್ವರ ಭಟ್ಟರು ಹಿತ್ಲಳ್ಳಿ, ವಿದ್ವಾನ್ ಸೋ.ತಿ. ನಾಗರಾಜ ಅವರು (ಶ್ರೀ ದತ್ತಾಶ್ರಮ ಸೋಮಪುರ ತರೀಕೆರೆ) ಹಾಗೂ ಇನ್ನೂ ಅನೇಕ ಜನ ವೈಯಾಕರಣರು ಮುನಿತ್ರಯಪರಂಪರೆಯನ್ನು ಯಶಸ್ವಿಯಾಗಿ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.

ಶ್ರೀಮಾನ್ ರಂಗನಾಥ ಶರ್ಮಾ ಅವರ ಅಭಿಮಾನಿ ಬಳಗದಲ್ಲೊಬ್ಬರಾಗಿದ್ದ, ಸ್ವಾತಂತ್ರ್ಯಹೋರಾಟಗಾರರೂ, ಪತ್ರಕರ್ತರೂ, ಪುಸ್ತಕ ಪ್ರಕಾಶಕರೂ ಆಗಿದ್ದ ಉದಯ ಪ್ರಕಾಶನದ ಶ್ರೀಮಾನ್ ಮ.ಸು. ಶ್ರೀನಿವಾಸರಾಯರು ಶ್ರೀ ರಂಗನಾಥ ಶರ್ಮರ ನಿಧನದ ಏಳನೇ ದಿನವೇ ತಮ್ಮ ತೊಂಬತ್ತಾರನೇ ವಯಸ್ಸಿನಲ್ಲಿ ನಿಧನರಾದುದೊಂದು ಯೋಗಾಯೋಗ. ಶ್ರೀಮಾನ್ ರಾಯರು ರಂಗನಾಥ ಶರ್ಮರ ನಾಲ್ಕಾರು ಪುಸ್ತಕಗಳನ್ನು ಪ್ರಕಟಿಸಿದ್ದರು.

ಇತ್ತೀಚೆಗೆ ನಾಲ್ಕಾರು ವರ್ಷಗಳಿಂದಲೂ ಶ್ರೀ ಶರ್ಮರು ಗಿರಿನಗರದಲ್ಲಿ ವಾಸವಾಗಿದ್ದುದರಿಂದ ಪ್ರಾಯಃ ದಿನಕ್ಕೊಮ್ಮೆಯಾದರೂ ಅವರ ದರ್ಶನದ ಅಹೋಭಾಗ್ಯ ನನಗೆ ದೊರಕುತ್ತಿದ್ದಿತು. ಇಸ್ವಿ 2012ರ ಮಾರ್ಚ್ ತಿಂಗಳಲ್ಲಿ ಅವರು ಇಲ್ಲಿಂದ ಮೈಸೂರಿಗೆ ಹೋಗಿ ನೆಲಸಿದ್ದರಿಂದ ನನಗೆ ಅವರ ದರ್ಶನದ ಭಾಗ್ಯ ತಪ್ಪಿಹೋಯಿತು. ತೇ ಹಿ ನೋ ದಿವಸಾ ಗತಾಃ. ದಿನಾಂಕ 25.1.14 ಶನಿವಾರ ಅವರ ಪಾರ್ಥಿವ ಶರೀರದ ಅಂತಿಮ ದರ್ಶನದ ನಂತರವಂತೂ ಅವರ ನೆನಪು ಮಾತ್ರವೇ ನಮ್ಮ ಪಾಲಿಗೆ ಉಳಿದಂತಾಯಿತು. ವಸುಧೈವ ಕುಟುಂಬಕರಾಗಿದ್ದ ಪೂಜ್ಯ ಶ್ರೀ ರಂಗನಾಥ ಶರ್ಮರ ನೆನಪಿನಲ್ಲಿ ನುಡಿ ನಮನ ಸಮರ್ಪಣೆ.

***




ನಮ್ಮೀ ಭರತಖಂಡದಲ್ಲಿ ಹಿಂದೆ ಹಲವಾರು ಸ್ವತಂತ್ರ ರಾಜರುಗಳು ಆಳುತ್ತಿದ್ದರೂ, ಭರತಖಂಡ ಒಂದೇ ರಾಷ್ಟ್ರ ಎನಿಸಿತ್ತು. ಭಾಷಾಭೇದಗಳೂ ಸಹ ಏಕ ರಾಷ್ಟ್ರವೆಂಬ ವಿಶ್ವಾಸಕ್ಕೆ ಭಂಗವನ್ನು ತರಲಿಲ್ಲ. ಏಕೆಂದರೆ ಕನ್ಯಾಕುಮಾರಿಯಿಂದ ಹಿಮಾಲಯದವರೆಗೆ ವ್ಯಾಪಿಸಿದ್ದ ನಾನಾ ರಾಜ್ಯಗಳ ಜನರ ಸಂಸ್ಕೃತಿ, ವಿಚಾರ, ನಂಬಿಕೆ ಇವುಗಳಲ್ಲಿ ಏಕಸೂತ್ರತೆ ಸ್ಥಿರವಾಗಿ ನೆಲೆಸಿತ್ತು. ಇವುಗಳಿಗೆ ಮುಖ್ಯವಾಗಿ ವೇದವಾಙ್ಮಯದ ಹಿರಿಮೆ, ಪ್ರಭಾವ, ವ್ಯಾಪ್ತಿಗಳು ಕಾರಣ. ಅಂತೆಯೇ ವೇದಾಂಗಗಳ ಅಧ್ಯಯನ, ವೈದಿಕ ದರ್ಶನಗಳ ಹರವು ಪ್ರಧಾನ ಪಾತ್ರವನ್ನು ವಹಿಸುತ್ತವೆ. ಅಲ್ಲದೇ ಭರತಖಂಡದ ವಿಭಿನ್ನ ಪ್ರಾಂತಗಳನ್ನು ಮುತ್ತುಗಳಂತೆ ಪೋಣಿಸಿ, ಏಕಸೂತ್ರತೆಯಲ್ಲಿ ಶಾಶ್ವತವಾಗಿ ಹಿಡಿದಿಟ್ಟ ಕೀರ್ತಿ ಸಂಸ್ಕೃತಭಾಷೆಗೆ ಸಲ್ಲುತ್ತದೆ.

–ವಿದ್ವಾನ್ ಎನ್. ರಂಗನಾಥಶರ್ಮಾ